بِسۡمِ اللّٰہِ الرَّحۡمٰنِ الرَّحِیۡمِ     نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ     وَعَلٰی عَبۡدِہِ الۡمَسِیۡحِ الۡمَوۡعُوۡدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ವರ್ಷ: 02

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 25

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

24 ಜೂನ್ 2021, 24 ಎಹ್ಸಾನ್ 1400 ತಬ್‌ಲೀಗ್ ಹಿಜರಿ ಶಮ್‌ಸಿ,
13 ಝುಲ್ ಖಅ್‌ದ 1442 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰھُمَّ اَیِّدۡ اِمَامَنَا بِرُوۡحِ الۡقُدُسِ
وَبَارِكۡ لَنَا فِیۡ عُمُرِہٖ وَاَمۡرِہٖ۔

## ಅಲ್ಲಾಹನ ಉಪದೇಶ

وَلِلّٰہِ مُلۡکُ السَّمٰوٰتِ وَالۡاَرۡضِ
وَمَا بَیۡنَہُمَا ؕ یَخۡلُقُ مَا یَشَآءُ ؕ
وَاللّٰہُ عَلٰی کُلِّ شَیۡءٍ قَدِیۡرٌ ○

(ಅಲ್‌ಮಾಇದ: 18)

ಅಂದರೆ: ‘ಆಕಾಶಗಳ, ಭೂಮಿಯ ಮತ್ತು ಅವುಗಳ ಮಧ್ಯದಲ್ಲಿರುವ ಎಲ್ಲವುಗಳ ಆಧಿಪತ್ಯ ಅಲ್ಲಾಹನಿಗೆಯೇ ಇದೆ. ತಾನು ಬಯಸುವುದನ್ನು ಅವನು ಸೃಷ್ಟಿಸುತ್ತಾನೆ. ಅಲ್ಲಾಹನು ಅಲ್ಲಾಹನು ಸರ್ವ ಕಾರ್ಯಗಳನ್ನೂ ಮಾಡಲು ಸಮರ್ಥನು.

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಶವಸಂಸ್ಕಾರದ ನಂತರ ಸಮಾಧಿಯ ಬಳಿ ನಮಾಝೆ ಜನಾಝಾ

(1337) ಅಬೂಹುರೈರ(ರ) ವರದಿ ಮಾಡುತ್ತಾನೆ. ಒರ್ವ ಕಪ್ಪು ಪುರುಷ ಅಥವಾ ಕಪ್ಪು ಮಹಿಳೆ ಮಸೀದಿಯಲ್ಲಿ ವಾಸಿಸುತ್ತಿದ್ದರು. ಮಸೀದಿಯ ಸ್ವಚ್ಛಗೊಳಿಸುವುದು ಅವರ ಕೆಲಸವಾಗಿತ್ತು. ಅವರು ನಿಧನಗೊಂಡಾಗ ಅವರ ನಿಧನದ ಆ ಸುದ್ಧಿ ರಸೂಲುಲ್ಲಾಹ್(ಸ) ರವರಿಗೆ ತಿಳಿಸಿರಲಿಲ್ಲ. ಒಂದು ದಿನ ಅವರ ಬಗ್ಗೆ ಕೇಳಿದರು. ಅವರು ಹೇಗಿದ್ದಾರೆ? ಆಗ ಜನರು ಅವನ ನಿಧನದ ಸುದ್ದಿ ತಿಳಿಸಿದರು. ರಸೂಲುಲ್ಲಾಹ್(ಸ) ನುಡಿದರು. ನೀವು ನನಗೆ ಆ ಸುದ್ಧಿ ಏಕೆ ತಿಳಿಸಲಿಲ್ಲ, ಅವರುಗಳು ಎಲ್ಲಾ ಘಟನೆ ವಿವರಿಸಿದರು. (ಹಝ್‌ರತ್ ಅಬೂ ಹುರೈರ(ರ) ಹೇಳುತ್ತಾರೆ ಜನರು ಅವರನ್ನು ಹೀನವಾಗಿ ಕಂಡಿದ್ದರು. ಅವರು ಹೇಳಿದರು. ನನಗೆ ಅವರ ಸಮಾಧಿ ತೋರಿಸಿ. ಹಝ್‌ರತ್ ಅಬೂಹುರೈರ(ರ) ಹೇಳುತ್ತಾರೆ. ಪ್ರವಾದಿಯವರು ಅವರ ಸಮಾಧಿಯ ಬಳಿ ಹೋದರು ಮತ್ತು ಅವರ ನಮಾಝ್ ಜನಾಝಾ ನಿರ್ವಹಿಸಿದರು.

* ಹಝ್‌ರತ್ ಸಯ್ಯದ್ ಝೈನುಲ್ ಆಬಿದೀನ್ ವಲಿಯುಲ್ಲಹ್ ಶಾಹ್(ರ) ಹೇಳುತ್ತಾರೆ. ಈ ಸಮಸ್ಯೆಯೂ ಸಹ ಭಿನ್ನಾಭಿಪ್ರಾಯಗಳಿಗೆ ಒಳಗಾದ ಸಮಸ್ಯೆಗಳಲ್ಲಿ ಒಂದಾಗಿದೆ. ಜನಸಾಮಾನ್ಯರು ಅಧಿಕೃತ ಮನ್ನಣೆ ನೀಡಿದ್ದಾರೆ. ಮತ್ತು ಅದು ನಬಿ ಕರೀಂ(ಸ) ರವರ ನಡತೆಯಿಂದ ಸಾಬೀತಾಗಿದೆ. ಆದರೆ ಇಮಾಮ್ ಮಾಲಿಕ್ ಮತ್ತು ನಬಿ(ಸ) ಅವರ ದೃಷ್ಟಿಯಲ್ಲಿ ಅದು ಧರ್ಮಬದ್ಧವಲ್ಲ. ಜನಾಝಾ ನಮಾಝ್ ನಿರ್ವಹಿಸದೆ ದಫನ್ ಮಾಡಿದಲ್ಲಿ ಮಾತ್ರ ಹೀಗೆ ಮಾಡಬಹುದು. ಇಮಾಮ್ ಅಬೂ ಹನಿಫಾ ಮತ್ತು ಇಮಾಮ್ ಶಾಫಿ ಪ್ರಕಾರ ಕೇವಲ ವಾರಸುದರರಿಗೆ ಮತ್ತು ಅವರ ನಿಕಟ ಸಂಬಂಧಿಗಳಿಗೆ ಮಾತ್ರ ಧರ್ಮಬದ್ಧ. ಏಕೆಂದರೆ ಜನಾಝಾಗಳಲ್ಲಿ ಭಾಗವಹಿಸುವುದು ಅವರ ಹಕ್ಕಾಗಿದೆ. ವಾಜಿಬ್ ಆಗಿದೆ.

**(ಸಹೀ ಬುಖಾರಿ ಸಂಪುಟ–2, ಕಿತಾಬುಲ್ ಜನಾಯಝ್, ಮುದ್ರಣ 2006 ಖಾದಿಯಾನ್)**

**ಅಲ್ಲಾಹನು ನನಗೆ ಮುಸಲ್ಮಾನರಲ್ಲಿ ಉಂಟಾದ ಆಂತರಿಕ ತಪ್ಪುಗಳನ್ನು ಹೋಗಲಾಡಿಸಲು ಮತ್ತು ಇಸ್ಲಾಮಿನ ನಿಜ ಸ್ಥಿತಿಯನ್ನು ಪ್ರಕಟಪಡಿಸಲು ಹಾಗೂ ಇಸ್ಲಾಮಿನ ಮೇಲೆ ಮಾಡಲಾಗುತ್ತಿರುವ ಬಾಹ್ಯ ಆರೋಪಗಳ ಉತ್ತರವನ್ನು ನೀಡಲು ಕಳುಹಿಸಿರುತ್ತಾನೆ.**

### ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಮಸೀಹ್ ಮೌಊದ್(ಅ) ರವರ ಆಗಮನದ ಉದ್ದೇಶ, ಹಝ್‌ರತ್ ಈಸಾ(ಅ) ಅವರು ಶಿಲುಬೆಯಿಂದ ಜೀವಂತವಾಗಿ ಇಳಿಸಲ್ಪಟ್ಟರು. ಹೀಗೆ ಅವರು ಆ ಘಟನೆಯಿಂದ ಪಾರಾದರು ಎಂಬ ಖಚಿತವಾದ ಜ್ಞಾನ ಪವಿತ್ರ ಖುರ್‌ಆನ್‌ನಿಂದ ತಿಳಿದುಬರುತ್ತದೆ. ಆದರೆ ಅಕಟಾಕಟ! ಹಿಂದಿನ ಸಾವಿರ ವರ್ಷಗಳಿಂದ ಇಸ್ಲಾಮಿನ ಮೇಲೆ ಹಲವು ಆಪತ್ತುಗಳು ಬಂದವು. ಅದರಲ್ಲಿ ಈ ಒಂದು ಸಮಸ್ಯೆಯೂ ಅಂಧಕಾರಕ್ಕೆ ತುತ್ತಾಗಿದೆ. ಮುಸಲ್ಮಾನರಲ್ಲಿ ದುರಾದೃಷ್ಟವಾಗಿ ಈ ಭಾವನೆ ಬೇರೂರಿದೆ. ಹಝ್‌ರತ್ ಮಸೀಹ್ ಜೀವಂತವಾಗಿ ಆಕಾಶದಿಂದ ಬರುವರು. ಆದರೆ ಈ 14ನೇ ಶತಮಾನದಲ್ಲಿ ಅಲ್ಲಾಹನು ನನಗೆ ಮುಸಲ್ಮಾನರಲ್ಲಿ ನೆಲೆಯೂರಿರುವ ಆಂತರಿಕ ತಪ್ಪುಗಳನ್ನು ಹೋಗಲಾಡಿಸಲು ಮತ್ತು ಇಸ್ಲಾಮಿನ ನಿಜ ಸ್ಥಿತಿಯನ್ನು ಪ್ರಕಟಪಡಿಸಲು ಹಾಗೂ ಇಸ್ಲಾಮಿನ ಮೇಲೆ ಮಾಡಲಾಗುತ್ತಿರುವ ಬಾಹ್ಯ ಆರೋಪಗಳ ಉತ್ತರವನ್ನು ನೀಡಲು ಮತ್ತು ಇತರ ಮಿಥ್ಯ ಧರ್ಮಗಳ ವಾಸ್ತವ ಬಿಚ್ಚಿಡಲು ಕಳುಹಿಸಿರುತ್ತಾನೆ. ವಿಶೇಷವಾಗಿ ಶಿಲುಬೆಯ ಧರ್ಮ ಅಂದರೆ ಕ್ರೈಸ್ತಧರ್ಮ ಅದರ ತಪ್ಪು ವಿಶ್ವಾಸಗಳನ್ನು ಅಳಿಸಿ ಹಾಕಲು ಅವು ಮಾನವರಿಗೆ ಅಪಾಯಕರ ಮತ್ತು ಹಾನಿಕಾರಕವಾಗಿವೆ. ಮನುಷ್ಯನ ಆಧ್ಯಾತ್ಮಿಕ ಬೆಳವಣಿಗೆಗೆ ಮತ್ತು ಪ್ರಗತಿಗೆ ಅಡ್ಡಿಯಾಗಿವೆ.

ಮರಿಯಮನ ಪುತ್ರ ಈಸ(ಅ) ಬಗ್ಗೆ ಇರುವ ವಾಸ್ತವ ಚಿತ್ರಣ ಹಲವು ಸಮಸ್ಯೆಗಳಲ್ಲಿ ಮಸೀಹನು ಆಕಾಶಕ್ಕೆ ಎತ್ತಲ್ಪಟ್ಟನು ಎಂಬ ಭಾವನೆ ದುರಾದೃಷ್ಟವಾಗಿ ಮುಸಲ್ಮಾನರಿಗೂ ಇದೆ. ಈ ಒಂದು ಸಮಸ್ಯೆಯ ಮೇಲೆ ಕ್ರೈಸ್ತ ಮತ ನಿಂತಿದೆ. ಏಕೆಂದರೆ ಕ್ರೈಸ್ತರ ಮುಕ್ತಿಯ ಆಧಾರ ಶಿಲುಬೆಯೇ ಆಗಿದೆ. ಅವರ ವಿಶ್ವಾಸ ಮಸೀಹರು ನಮಗಾಗಿ ಶಿಲುಬೆಯ ಮರಣ ಹೊಂದಿರುವರು. ಮತ್ತೆ ಜೀವಂತವಾಗಿ ಆಕಾಶಕ್ಕೆ ಎತ್ತಲ್ಪಟ್ಟರು. ಇದು ಅವರನ್ನು ದೇವನನ್ನಾಗಿ ಮಾಡುವ ಸಾಕ್ಷ್ಯವಾಗಿದೆ.

ಯಾವ ಮುಸ್ಲಿಮರು ತನ್ನ ತಪ್ಪಿನಿಂದಾಗಿ ಅವರಿಗೆ ಸಹಕಾರ ನೀಡುತ್ತಿದ್ದಾರೆ. ಅವರು ಮಸೀಹರು ಶಿಲುಬೆಯ ಮೇಲೆ ಮರಣ ಹೊಂದಿದರು ಎಂದು ನಂಬುವುದಿಲ್ಲ. ಆದರೆ ಅವರು ಆಕಾಶಕ್ಕೆ ಎತ್ತಲ್ಪಟ್ಟರು ಎಂದು ನಂಬುತ್ತಾರೆ. ಆದರೆ ಆ ವಾಸ್ತವ ಅಲ್ಲಾಹನು ನನಗೆ ತಿಳಿಸಿರುತ್ತಾನೆ. ಅದೇನೆಂದರೆ ಮರಿಯಮನ

*(ಪುಟ ಸಂಖ್ಯೆ–11 ರಲ್ಲಿ ಮುಂದುವರಿಸಲಾಗಿದೆ)*

**ಯಾರು ಇಹಲೋಕ ಪ್ರಯತ್ನದಲ್ಲಿಯೇ ಇರುವರೋ ಅವರು ಎಷ್ಟೋ ಅಭಿವೃದ್ಧಿ ಸಾಧಿಸಿದರೂ ಅವರ ವ್ಯಾಕುಲತೆ ಇನ್ನಷ್ಟು ಹೆಚ್ಚಾಗುತ್ತದೆ.
ಆದರೆ ಅಲ್ಲಾಹನತ್ತ ಬರುವವನಿಗೆ ಮತ್ತು ಅವನು ಎಷ್ಟು ಅವನತ್ತ ಮುಖ ಮಾಡುವನೋ ಅವನ ಹೃದಯದ ಶಾಂತಿ ಹೆಚ್ಚಾಗುತ್ತದೆ.**

ಹಝ್‌ರತ್ ಮುಸ್ಲಿಹ್ ಮೌಊದ್(ರ) ಸೂರ: ಅರ್‌ರದ್ ವಚನ 29 **ಅಲ್ಲಝೀನ ಆಮನೂ ವತತ್‌ಮಇನ್ನುಲ್ ಖುಲೂಬುಹುಮ್ ಬಿಝಿಕ್ರಿಲ್ಲಾಹಿ, ಅಲಾ ಬಿಝಿಕ್ರಿಲ್ಲಾಹಿ ತತ್‌ಮಇನ್ನುಲ್‌ಖುಲೂಬು** ರ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ.

ಜನರು ಸಂಪತ್ತು ಗಳಿಸುತ್ತಾರೆ. ಸರಕಾರ ನಡೆಸುತ್ತಾರೆ, ಅವರಿಗೆ ಒಳ್ಳೆಯ ಸಂತಾನವು ಲಭ್ಯವಿರುತ್ತದೆ. ಒಳ್ಳೆಯ ಪತ್ನಿಯರಿರುತ್ತಾರೆ. ಒಳ್ಳೆಯ ಮಿತ್ರರಿರುತ್ತಾರೆ. ವ್ಯಾಪಾರದಲ್ಲಿ ಲಾಭವು ಅನುಭವಿಸುತ್ತಾರೆ. ಕೃಷಿಯಲ್ಲಿ ಲಾಭ ಗಳಿಸುತ್ತಾರೆ. ವಿದ್ಯೆಯಲ್ಲಿ ಉನ್ನತಿ ಸಾಧಿಸುತ್ತಾರೆ, ಒಟ್ಟಿನಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿ ಹೊಂದಿದರೂ ಅವರಿಗೆ ಶಾಂತಿ ದೊರೆಯುವುದಿಲ್ಲ. ಒಂದು ಆಸೆ ಈಡೇರಿದರೆ ಇನ್ನೆರಡು ಕಷ್ಟದಾಯಕ ಆಸೆಗಳು ಚಿಗುರುತ್ತವೆ. ಹೀಗೆ ಆಸೆಗಳು ಮುಂದುವರೆಯುತ್ತವೆ. ಆದರೆ ಬೇಕಾದ ನೆಮ್ಮದಿ ಮಾತ್ರ ದೊರೆಯುವುದಿಲ್ಲ. ಯಾವ ರೀತಿ ಒಬ್ಬ ಮಗು ತನ್ನ ತಾಯಿಯಿಂದ ಬೇರ್ಪಟ್ಟು ಬೇರೆಯವರ ಮಡಿಲಿಗೆ ಸೇರಿದರೆ, ಒಬ್ಬನಿಂದ ಇನ್ನೊಬ್ಬನ ಮಡಿಲಿಗೆ ಸೇರಿದರೂ, ತನ್ನ ನಿಜವಾದ ತಾಯಿಯ ಮಡಿಲು ಸೇರುವವರೆಗೆ ಬರಬೇಕಾದ ನೆಮ್ಮದಿ ಸಿಗಲು ಸಾಧ್ಯವಿಲ್ಲ. ಲೌಕಿಕ

*(ಪುಟ ಸಂಖ್ಯೆ–09 ರಲ್ಲಿ ಮುಂದುವರಿಸಲಾಗಿದೆ)*

لَآ اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ✿ شَرَّ السُّمُوْمِ عَدَاوَۃُ الصُّلَحَاءِ

### ಅಬ್ದುಲ್ಲ ಆಥಮನಿಗೆ ನಾಲ್ಕು ಸಾವಿರ ರೂಪಾಯಿಗಳ ಬಹುಮಾನದ ಶರತ್ತು, ಅವರು ಇಸ್ಲಾಮಿನ ಪ್ರತಾಪಶಾಲಿ ಭವಿಷ್ಯವಾಣಿಯಿಂದ ನಾನು ಭಯಭೀತನಾಗಿಲ್ಲ ಎಂದು ಒಪ್ಪಿಕೊಳ್ಳಬೇಕು.

ಹಿಂದಿನ ಎರಡು ಸಂಚಿಕೆಗಳಲ್ಲಿ ನಾವು ಇಸ್ಲಾಮ್ ಮತ್ತು ಕ್ರೈಸ್ತರ ನಡುವೆ ಏರ್ಪಟ್ಟ ಅಮೋಘವಾದ ಯುದ್ಧದ ಬಗ್ಗೆ ವಿವರ ನೀಡುತ್ತಿದ್ದೇವೆ. ಅದು "ಜಂಗೆಮುಖದ್ದಸ್" ಹೆಸರಿನಿಂದ ಪ್ರಸಿದ್ಧಗೊಂಡಿದೆ. ಈ ಚರ್ಚಾಕೂಟವು 22 ಮೇ 1893 ರಿಂದ 5 ಜೂನ್ 1893 ರವರೆಗೆ ಅಮೃತ್ಸರದಲ್ಲಿ 15 ದಿನಗಳವರೆಗೆ ಪಾದರಿ ಮಾರ್ಟಿನ್ ಕ್ಲಾರ್ಕ್‌ನ ಅರಮನೆಯಲ್ಲಿ ನಡೆದಿತ್ತು. ಚರ್ಚಾಕೂಟದ ಕೊನೆಯ ದಿನ 5 ಜೂನ್ 1893 ರಂದು ಹಝ್‌ರತ್ ಮಸೀಹ್ ಮೌಊದ್(ಅ) ಅಲ್ಲಾಹನಿಂದ ದಿವ್ಯವಾಣಿ ಪಡೆದು ಈ ಭವಿಷ್ಯವಾಣಿ ನುಡಿದರು.

ಅವನು ನನಗೆ ಈ ದೃಷ್ಟಾಂತವನ್ನು ಸುವಾರ್ತೆಯ ನೆಲೆಯಲ್ಲಿ ನೀಡಿದ್ದಾನೆ. ಈ ಚರ್ಚಾಕೂಟದಲ್ಲಿ ಉಭಯಪಕ್ಷಗಳಲ್ಲಿ ಯಾವ ಪಕ್ಷವು ಸುಳ್ಳನ್ನು ನೆಚ್ಚಿಕೊಂಡಿದೆ, ಮತ್ತು ಸತ್ಯವಾದ ದೇವನನ್ನು ಬಿಡುತ್ತಿದೆ, ಹಾಗೂ ಒರ್ವ ದುರ್ಬಲ ಮನುಷ್ಯನನ್ನು ದೇವನನ್ನಾಗಿ ಮಾಡುತ್ತಿದ್ದಾನೆ. ಆತನು ಈ ದಿನಗಳಲ್ಲಿಯೇ ಚರ್ಚೆಯ ದಿನಗಳ ಪ್ರಕಾರ ಅಂದರೆ ಒಂದು ದಿನದಂದು, ಒಂದು ತಿಂಗಳ ಲೆಕ್ಕದಲ್ಲಿ ಅಂದರೆ 15 ತಿಂಗಳವರೆಗೆ ಆತನಿಗೆ ನರಕದಲ್ಲಿ ಹಾಕಲಾಗುವುದು. ಅವರಿಗೆ ಘೋರವಾದ ಅಪಮಾನ ವಾಗುವುದು. ಶರತ್ತೇನೆಂದರೆ ಸತ್ಯದೆಡೆ ರುಜು (ಹಿಂತಿರುಗಬಾರದು) ವಹಿಸಿಕೊಳ್ಳಬಾರದು. ಯಾವ ವ್ಯಕ್ತಿ ಸತ್ಯದ ಪರವಾಗಿದ್ದಾನೆಯೋ ಮತ್ತು ಸತ್ಯ ದೇವನನ್ನು ನಂಬುತ್ತಾನೆ, ಅವನ ಪರವಾಗಿ ಗೌರವವು ಪ್ರಕಟವಾಗುವುದು. ಈ ಭವಿಷ್ಯವಾಣಿ ಪ್ರಕಟವಾದಾಗ ಕೆಲ ಅಂಧರು ದೃಷ್ಟಿಯುಳ್ಳವರಾಗುವರು. ಕೆಲ ಕುಂಟರು ನಡೆದಾಡುವವರು ಮತ್ತು ಕೆಲ ಕಿವುಡರು ಆಲಿಸತೊಡಗುವರು. (ಜಂಗೆ ಮುಖದ್ದಸ್, ರೂಹಾನಿ ಖಝಾಯಿನ್, ಸಂಪುಟ-6, ಪುಟ-291)

ಆಥಮನು ಸತ್ಯದೆಡೆ ರುಜುವಾತು ಪಡಿಸಿದನು. ಕಾರಣ ಮರಣದಿಂದ ಉಳಿದನು. ಭವಿಷ್ಯವಾಣಿಯ ಅವಧಿ 5 ಸೆಪ್ಟೆಂಬರ್ 1894 ಕ್ಕೆ ಮುಗಿಯಬೇಕಿತ್ತು. 5 ಸೆಪ್ಟೆಂಬರ್ ಮುಗಿಯುತ್ತಿದ್ದಂತೆಯೇ ಕ್ರೈಸ್ತರು ಹುಯಿಲೆಬ್ಬಿಸಲು ಪ್ರಾರಂಭಿಸಿದರು. ಮತ್ತು ಅಸಭ್ಯ ರೀತಿಯಲ್ಲಿ ಬೊಬ್ಬೆಯಿಟ್ಟರು. ಆಥಮನು ಮರಣ ಹೊಂದಿಲ್ಲ. ಹಾಗಾಗಿ ಭವಿಷ್ಯವಾಣಿ ತಪ್ಪಿದಂತಾಯಿತು. ಪಾದರಿಗಳು ಅದನ್ನು ಇಸ್ಲಾಮಿನ ಮೇಲೆ ಕ್ರೈಸ್ತ ಧರ್ಮದ ವಿಜಯ ಎನ್ನತೊಡಗಿದರು. ತುಂಬಾ ಸಂಭ್ರಮಿಸಿದರು. 6 ಸೆಪ್ಟೆಂಬರಿಗೆ ಆಥಮನ ಕೊರಳಲ್ಲಿ ಹೂವಿನ ಹಾರ ಹಾಕಿ ವಾಹನದಲ್ಲಿ ಕುಳ್ಳಿರಿಸಿ ಅಮೃತ್ಸರ ಪೇಟೆಗಳಲ್ಲೆಲ್ಲಾ ಬೀದಿ ಬೀದಿಗಳಲ್ಲೆಲ್ಲಾ ಮೆರವಣಿಗೆ ಮಾಡಿದರು. ಚೆನ್ನಾಗಿ ಕುಣಿದು ಕೇಕೆ ಹಾಕಿದರು. ವಿಜಯದ ಘೋಷಣೆ ಹಾಕಿದರು. ಬೈದ್ದರು, ಬೈಗ್ಗುಳುಗಳಿಂದ ತುಂಬಿದ ಜಾಹೀರಾತುಗಳನ್ನು ಪ್ರಕಟಿಸಿದರು ಮತ್ತು ಎಷ್ಟು ಸಾಧ್ಯವೋ ಅಷ್ಟು ಹೀಯಾಳಿಸಿದರು. ಹಝ್‌ರತ್ ಮಸೀಹ್ ಮೌಊದ್(ಅ) ನುಡಿದರು. ಕ್ರೈಸ್ತರ ಅವಸ್ಥೆ ನೋಡಿ ಆಶ್ಚರ್ಯವಾಗುತ್ತದೆ. ಭವಿಷ್ಯವಾಣಿ ವ್ಯಕ್ತಪಡಿಸಿದ ಶರತ್ತಿನ ಮೇರೆಗೆ ಖಡಾಖಂಡಿತ ರೀತಿಯಲ್ಲಿ ಪೂರ್ಣಗೊಂಡಿದೆ. ಆದರೆ ಅವರು ಅದನ್ನು ಕೇವಲ ಗೊಂದಲ ಮಾರ್ಗವಾಗಿ ಹುಯಿಲೆಬ್ಬಿಸುತ್ತಿದ್ದಾರೆ, ಮತ್ತು ದಂಗೆ ಎಬ್ಬಿಸಿದ್ದಾರೆ. ಅಂತೆಯೇ ಅಪಮಾನಕರವಾದ ಬೈಗುಳಗಳನ್ನು ಹಾಕುತ್ತ ಪೇಟೆ ಬೀದಿಗಳಲ್ಲೆಲ್ಲ ಶೈತಾನನ ರೂಪಧಾರಣೆ ಮಾಡಿ ನಾಟಕವಾಡುತ್ತಿದ್ದಾರೆ. ಅದು ಅವರ ಸಹಜ ಪ್ರವೃತ್ತಿಯನ್ನು ಬಯಲು ಮಾಡಿದೆ. ಅದಾಗ್ಯೂ ಭವಿಷ್ಯವಾಣಿಯ ಸ್ಪಷ್ಟರೂಪದಲ್ಲಿ ಒಂದು ಶರತ್ತು ಒಳಗೊಂಡಿತು. ಆ ಶರತ್ತಿನ ಪ್ರಕಾರ ಅದು ಪೂರ್ಣವಾಗಿದೆ. (ಝಿಯಾವುಲ್ ಹಖ್, ರೂಹಾನಿ ಖಝಾಯಿನ್, ಸಂಪುಟ-9, ಪುಟ-301)

ಅತ್ಯಂತ ವಿಷಾದದ ಸಂಗತಿ ಎಂದರೆ ಮುಸ್ಲಿಮ್ ಪಂಡಿತರು (ಉಲಮಾ) ಈ ಸಂಭ್ರಮದಲ್ಲಿ ಕ್ರೈಸ್ತರಿಗೆ ನೆರವಾಗಿದ್ದಾರೆ ಮತ್ತು ಕ್ರೈಸ್ತರನ್ನು ವಿಜಯಿ ಎಂದಿದ್ದಾರೆ ಮತ್ತು ಇಸ್ಲಾಮನ್ನು ಪರಾಜಿತ ಹಾಗೂ ಸೋಲೆಂದಿದ್ದಾರೆ. ಇನ್ನ ಲಿಲ್ಲಾಹಿ ವ ಇನ್ನ ಇಲೈಹಿ ರಾಜಿಊನ್, ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ರವರ ಹೃದಯ ನೋಯಿಸುವುದರಲ್ಲಿ ಈ ಮುಸ್ಲಿಮ್ ಉಲಮಾ ಕ್ರೈಸ್ತರಿಗಿಂತ ಮುಂದಿದ್ದರು. ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಪತ್ರಿಕೆ "ಅನ್ವಾರುಲ್ ಇಸ್ಲಾಮ್" ಮತ್ತು "ಝಿಯಾವುಲ್ ಹಖ್ " ಗಳಲ್ಲಿ ನಿರಾಕರಿಸಲಾಗದಂತಹ ಪುರಾವೆಗಳಿಂದ ಸಾಬೀತುಪಡಿಸಿದರು. ಆಥಮನು ಸತ್ಯದೆಡೆ ರುಜುವಾತು ಪಡಿಸಿದನು. ಅದರ ಲಾಭ ಅವನು ಪಡೆದಿದ್ದಾನೆ. ಈ ಬಗ್ಗೆ ಮಾಡಲಾದ ಎಲ್ಲಾ ಆಕ್ಷೇಪಗಳಿಗೆ ಅವರು ಉತ್ತರ ನೀಡಿದರು.

ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಚರ್ಚಾಕೂಟದ ಕೊನೆಯ ದಿನ ಆಥಮನ ಮರಣದ ಭವಿಷ್ಯವಾಣಿ ಮಾಡಿದಾಗ ಆ ಸಮಯ ಅವನಿಗೆ ನೆನಪಿಸಿದರು. ನೀವು ತನ್ನ ಗ್ರಂಥ ಬೈಬಲ್‌ನಿಂದ ಹಝ್‌ರತ್ ರಸೂಲುಲ್ಲಾಹ್(ಸ) ರನ್ನು ದಜ್ಜಾಲ್ ಎಂದಿದ್ದೀರಿ. ಮತ್ತೊಮ್ಮೆ ಡೆಪ್ಯೂಟಿ ಅಬ್ದುಲ್ಲ ಆಥಮರೊಂದಿಗೆ ಪ್ರಶ್ನಿಸಿದರು. ಈಗ ನಾನು ಡೆಪ್ಯೂಟಿ ಸಾಹೇಬರೊಂದಿಗೆ ಕೇಳುತ್ತೇನೆ. ಈ ಭವಿಷ್ಯವಾಣಿ ಪೂರ್ಣಗೊಂಡರೆ, ರಸೂಲುಲ್ಲಾಹ್(ಸ) ರವರ ಸತ್ಯ ಪ್ರವಾದಿಯವರ ಬಗ್ಗೆ ಬೈಬಲ್‌ನಿಂದ ದಜ್ಜಾಲ್ ಎಂದು ಹೆಸರಿಸಿದ್ದೀರಿ. ಸ್ಪಷ್ಟ ಮಾನದಂಡವಾಗುವುದೆ ಇಲ್ಲ?

ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಈ ಭವಿಷ್ಯವಾಣಿ ಡೆಪ್ಯೂಟಿ ಅಬ್ದುಲ್ಲ ಆಥಮನಿಗೆ ಕೇಳಿಸಿದಂತೆಯೇ ಅದೇ ಸಮಯ ಅಬ್ದುಲ್ಲ ಆಥಮ್ ತನ್ನ ನಾಲಿಗೆ ಹೊರ ಚಾಚಿ ಮತ್ತು ಕಿವಿಗಳ ಮೇಲೆ ಕೈಗಳನ್ನು ಇಟ್ಟನು. ಕಂಪಿಸತೊಡಗಿದನು. ಮತ್ತು ನಿಶ್ಯಕ್ತನಾಗಿ ಹೇಳಿದನು. ತೋಬ ತೋಬ (ಕ್ಷಮಿಸಿ, ಕ್ಷಮಿಸಿ) ನಾನಂತೂ ಹಝ್‌ರತ್ ರಸೂಲುಲ್ಲಾಹ್(ಸ) ರಿಗೆ ದಜ್ಜಾಲ್ ಎನ್ನುವುದಿಲ್ಲ. ಮಿರ್ಝಾ ಸಾಹಿಬ್ ನನಗೆ ವಿನಾಕಾರಣ ಸಾಯಿಸುತ್ತಿದ್ದಾರೆ. ನಾನು ದಜ್ಜಾಲ್ ಎಂದು ಹೇಳಲಿಲ್ಲ. ಹೀಗೂ ಬರೆಯಲಾಗಿದೆ. ಅವನು ಹೇಳಿದ– "ನಾನು ಸತ್ತೇ" ಅವನಿಗೆ ಇಷ್ಟೊಂದು ಭಯವಾದಾಗ, ಮತ್ತು ಜನರಿಂದ ತುಂಬಿದ ಸಭೆಯಲ್ಲಿ ಕಿವಿಗಳ ಮೇಲೆ ಕೈಗಳನ್ನಿಟ್ಟು ತೋಬ ತೋಬ ಎಂದು ಹೇಳಲು ಕಾರಣವೇನಿತ್ತೆಂದರೆ ಆಥಮನು ಚೆನ್ನಾಗಿ ಬಲ್ಲವನಾಗಿದ್ದನು. ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಸಾಧಾರಣ ಮನುಷ್ಯರಲ್ಲ, ಅವರು ಮಾಡಿದ ಭವಿಷ್ಯವಾಣಿಗಳೆಲ್ಲ ಪೂರ್ಣಗೊಳ್ಳುತ್ತವೆ. ಅಹ್ಮದ್ ಬೇಗ್ ಹೋಶಿಯಾರ ಪುರಿ ಅವರ ಮರಣದ ತಾಜಾ ಉದಾಹರಣೆ ಅವರ ಮುಂದಿತ್ತು. ಅದು 30 ಸೆಪ್ಟೆಂಬರ್ 1892 ರಂದು ಅವರ ಮನೆಯನ್ನು ಶೋಕಗ್ರಸ್ತನನ್ನಾಗಿ ಮಾಡಿ ಭವಿಷ್ಯವಾಣಿಯ ಪ್ರಕಾರ ಅಗಲಿ ಹೋಗಿದ್ದನು. ಮತ್ತು ಎರಡನೇ ಕಾರಣ ಏನಾಗಿತ್ತೆಂದರೆ ಹಝುರತ್ ಮಸೀಹ್ ಮೌಊದ್(ಅ) ರವರ ಈ ಭವಿಷ್ಯವಾಣಿಯ ಪರಿಯೇ ಅದ್ಭುತವಾಗಿತ್ತು. ಭವಿಷ್ಯವಾಣಿಯ ಪದಗಳು ಪ್ರತಾಪದಿಂದ ಕೂಡಿದ್ದವು. ಅದು ಕೇಳುತ್ತಲೇ, ಓದುತ್ತಲೇ ದೇಹ ಕಂಪಿಸುತ್ತಿತ್ತು. ಭವಿಷ್ಯವಾಣಿಯ ಭಯ ಆಥಮನ ರೋಮ ರೋಮದಲ್ಲಿ ಆವರಿಸಿತು. ಅವರು ಪೂರ್ಣ ಹದಿನೈದು ತಿಂಗಳು ಅತ್ಯಂತ ಅಸಮಾಧಾನ ಮತ್ತು ಅರಿವಿಲ್ಲದಂತೆ ಮತ್ತು ದಿಗಿಲುಗೊಂಡಿದ್ದರು.

### ಭವಿಷ್ಯವಾಣಿಯ ಪ್ರತಾಪದಿಂದ ಕೇವಲ ಆಥಮನಲ್ಲ ಎಲ್ಲ ಕ್ರೈಸ್ತರು ಸಹ ಭಯಗೊಂಡಿದ್ದರು

ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಭವಿಷ್ಯವಾಣಿ ಶಕ್ತಿಯುತವಾಗಿತ್ತು. ಕೇವಲ ಆಥಮನಲ್ಲ, ಬದಲು ಆ ಸಮಯ ಸಭೆಯಲ್ಲಿದ್ದ ಎಲ್ಲಾ ಕ್ರೈಸ್ತರ ಮೇಲೆ ಅದರ ಪ್ರಭಾವ ಬೀರಿತ್ತು. ಮುನ್ಸೂಚನೆಯಂತೆ ಆಗಲೇ ಹೇಳಲು ಪ್ರಾರಂಭಿಸಿದ್ದರು. ಒಬ್ಬ ಡಾಕ್ಟರನು ಸಹ ಆಥಮನು ಆರು ತಿಂಗಳ ಒಳಗೆ ಸಾಯಬಹುದು ಎಂದು ಹೇಳಿದ್ದನು. ಈ ಎಲ್ಲಾ ಮಾತುಗಳು, ಭವಿಷ್ಯವಾಣಿಯ ಭಯದಿಂದ ಬಾಯಿಯಿಂದ ಹೊರಟಿದ್ದವು. ಆಥಮ್ ಸಾಹೇಬರ ಹೃದಯದ ಮೇಲೆ ತೀವ್ರ ರೀತಿಯ ಪ್ರಭಾವ ಕೆಲಸ ಮಾಡುತ್ತಿತ್ತು. ಅಂತೂ ಇವೆಲ್ಲ ಕ್ರಮಗಳು ಸೂಚಿಸುವುದೇನೆಂದರೆ ಆಥಮನಲ್ಲಿ ಒಬ್ಬ ಮರಣಕ್ಕೆ ಸಮೀಪವಿರುವ ವ್ಯಕ್ತಿಯ ಭಯ ಕಂಡುಬರುತ್ತಿದ್ದವು. (ಝಿಯಾವುಲ್ ಹಖ್, ರೂಹಾನಿ ಖಝಾಯಿನ್, ಸಂಪುಟ-9, ಪುಟ-284)

ಆಥಮನು ನಿದ್ರೆಯಲ್ಲಿ ಭಯಗೊಂಡು ಕಿರಿಚಾಡುತ್ತಿದ್ದನು. ಆಥಮನು ಸ್ವಪ್ನದಲ್ಲಿಯೂ ಕಿರಿಚಾಡುತ್ತಾ ಏಳುತ್ತಿದ್ದನು. ಅಮೃತ್ಸರದಲ್ಲಿಯೂ ಅತಿಯಾದ ರೋಗಪೀಡೆಯಿಂದ ಕಿರುಚಿ ಹೇಳಿದನು. ಅಯ್ಯೋ ನಾನು ಸೆರೆಯಾದೆ. (ಝಿಯಾವುಲ್ ಹಕ್, ರೂಹಾನಿ ಖಝಾಯಿನ್, ಸಂಪುಟ-9, ಪುಟ-300)

ಭವಿಷ್ಯವಾಣಿಯ ಘೋರ ಪ್ರಭಾವದಿಂದ ಅವನಿಗೆ ಭಯಂಕರವಾದ ಸ್ವಪ್ನಗಳು ಬರುತ್ತಿದ್ದವು. ಮೊದಲು ಅವನಿಗೆ ರಕ್ತಪಿಪಾಸಿ ಹಾವಿನ ದೃಶ್ಯ ತೋರಿಸಲಾಯಿತು. ಅದರಿಂದ ಭಯಗೊಂಡು ಅಮೃತ್ಸರದ ಭವ್ಯವಾದ ಬಂಗಲೆಯನ್ನು ಬಿಟ್ಟು ಲೂಧಿಯಾನಕ್ಕೆ ತಮ್ಮ ಅಳಿಯನ ಮನೆಗೆ ಹೋದನು. ಸ್ಥಳಾಂತರದಿಂದಲಾದರೂ ಭಯದಿಂದ ಮುಕ್ತಿ ಸಿಗಬಹುದು ಎಂದು ಆದರೆ ಆಗಲಿಲ್ಲ. ಲೂಧಿಯಾನದಲ್ಲೂ ಅವನಿಗೆ ಆಯುಧಗಳಿಂದ ಆಕ್ರಮಣ ಮಾಡುವ

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಪೈಗಂಬರ್(ಸ) ಹೇಳಿದರು "ಕಲಿಮ ಹೇಳುವವರನ್ನು ಕೊಲ್ಲುವುದನ್ನು ನಿಷೇಧಿಸಲಾಗಿದೆ."**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಫಾರೂಖೇ ಆಝುಮ್ ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರವರು ಬದರ್, ಉಹದ್, ಖಂದಖ್ ಸಮೇತ ಎಲ್ಲಾ ಯುದ್ಧಗಳಲ್ಲಿ ಪೈಗಂಬರ್(ಸ) ರವರೊಂದಿಗೆ ಭಾಗವಹಿಸಿದ್ದರು.**

**ಹನ್ನೆರಡು ದಿವಂಗತರಾದ ಖಾದಿಯಾನಿನ ನಾಇಬ್ ನಶ್‌ರೋ ಇಶಾಅತ್ ಆದ ಖುರೈಶಿ ಮುಹಮ್ಮದ್ ಫಝ್‌ಲುಲ್ಲಾಹ್ ಸಾಹಿಬ್, ಮುಬಲ್ಲಿಗ್‌ರಾದ ಸಯ್ಯದ್ ಬಶೀರುದ್ದೀನ್ ಅಹ್ಮದ್ ಸಾಹಿಬ್, ಖಾದಿಯಾನಿನ ವಖ್‌ಫೇ ಝಿಂದಗಿಯಾದ ಬಶಾರತ್ ಅಹ್ಮದ್ ಸಾಹಿಬ್ ಹೈದರ್, ಸನ್ಮಾನ್ಯ ಡಾಕ್ಟರ್ ಮುಹಮ್ಮದ್ ಅಲಿ ಸಾಹಿಬ್, ಸನ್ಮಾನ್ಯ ಮುಹಮ್ಮದ್ ರಫೀ ಖಾನ್ ಶೆಹ್‌ಝಾದ್ ಸಾಹಿಬ್, ಆಸ್ಟ್ರೇಲಿಯದ ಅಯಾಝ್ ಯೂನುಸ್ ಸಾಹಿಬ್, ರಬ್ವದ ವಕಾಲತ್ ಮಾಲ್ ಸಾಲಿಸ್, ಯು.ಕೆ.ಯ ರಫೀಕ್ ಆಫ್‌ತಾಬ್ ಸಾಹಿಬ್, ಸನ್ಮಾನ್ಯ ರಫೀಕ್ ಆಫ್ತಾಬ್ ಸಾಹಿಬ್, ಸನ್ಮಾನ್ಯ ಝರೀನ ಅಖ್ತರ್ ಸಾಹಿಬ, ಹಾಫಿಝ್ ಮುಹಮ್ಮದ್ ಅಕ್ರಮ್ ಸಾಹಿಬ್, ಸನ್ಮಾನ್ಯ ಚೌಧರಿ ನೂರ್ ಅಹ್ಮದ್ ನಾಸಿರ್ ಸಾಹಿಬ್, ಮತ್ತು ಸನ್ಮಾನ್ಯ ಮಹ್ಮೂದ್ ಅಹ್ಮದ್ ಮಿನ್‌ಹಾಸ್ ಸಾಹಿಬ್, ರವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **21–05–2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ

اِيَّاكَ نَعْبُدُ وَاِيَّاكَ نَسْتَعِيْنُ ـ اِهْدِنَا الصِّرَاطَ الْمُسْتَقِيْمَ ـ

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ನಡೆಯುತ್ತಿತ್ತು. ಹಝ್ರತ್ ಉಮರ್(ರ) ಯಾವೆಲ್ಲ ಯುದ್ಧಗಳು ಮತ್ತು ದಂಡಯಾತ್ರೆಗಳಲ್ಲಿ ಭಾಗವಹಿಸಿದ್ದರು ಎಂಬುದರ ಬಗ್ಗೆ ಸ್ವಲ್ಪ ಹೇಳುತ್ತೇನೆ. ಹಝ್ರತ್ ಉಮರ್(ರ) ಬದ್ರ್, ಉಹದ್ ಮತ್ತು ಖಂದಕ್ ಯುದ್ಧ ಸಮೇತ ಎಲ್ಲ ಯುದ್ಧಗಳಲ್ಲಿ ಹಝ್ರತ್ ಪೈಗಂಬರ್‌ರೊಂದಿಗೆ ಭಾಗವಹಿಸಿದ್ದರು. ಅದಲ್ಲದೇ ಅನೇಕ ದಂಡಯಾತ್ರೆಗಳಲ್ಲಿ ಭಾಗಿಯಾಗಿದ್ದರು. ಅವುಗಳಲ್ಲಿ ಕೆಲವಲ್ಲಿ ಅವರು ಸೇನಾಧಿಪತಿಯಾಗಿದ್ದರು. (ಅತ್ತಬಖಾತುಲ್ ಕುಬ್ರ ಸಂಪುಟ–3, ಪುಟ–206, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಬದ್ರ್ ಯುದ್ಧಕ್ಕೆ ರವಾನೆಯಾಗುವಾಗ ಸಹಾಬರ ಬಳಿಯಿದ್ದ ಒಂಟೆಗಳ ಸಂಖ್ಯೆ ಎಪ್ಪತ್ತಾಗಿತ್ತು. ಆದ್ದರಿಂದ ಒಂದೊಂದು ಒಂಟೆಯನ್ನು ಮೂರು ಮೂರು ವ್ಯಕ್ತಿಗಳಿಗೆ ನಿಶ್ಚಯಿಬೇಕಾಯಿತು. ಪ್ರತಿಯೊಬ್ಬರೂ ಸರದಿ ಪ್ರಕಾರ ಸವಾರರಾಗುತ್ತಿದ್ದರು. ಹಝ್ರತ್ ಉಮರ್(ರ), ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಮತ್ತು ಹಝ್ರತ್ ಅಬೂಬಕರ್(ರ) ಒಂದು ಒಂಟೆಯಲ್ಲಿ ಸರದಿ ಪ್ರಕಾರ ಸವಾರರಾಗುತ್ತಿದ್ದರು. (ಅಸ್ಸಿರತುಲ್ ಹಲ್‌ಬಿಯು, ಸಂಪುಟ–2, ಪುಟ–204, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಬದ್ರ್ ಯುದ್ಧದ ವೇಳೆ ಸಿರಿಯದಿಂದ ಬರುತ್ತಿದ್ದ ಅಬೂಸುಫ್ಯಾನ್‌ರ ವ್ಯಾಪಾರ ತಂಡವನ್ನು ತಡೆಯಲು ಹಝ್ರತ್ ಪೈಗಂಬರ್(ಸ) ಮದೀನದಿಂದ ಹೊರಟಿದರು. ಮುಸ್ಲಿಮರ ತಂಡ ಝಫ್‌ರಾನ್ ತಲುಪಿದಾಗ ಖುರೈಶಿಗಳ ಒಂದು ಅತ್ಯಂತ ಕ್ಷಿಪ್ರಗತಿಯ ಸೈನ್ಯವು ವ್ಯಾಪಾರಿ ತಂಡವನ್ನು ರಕ್ಷಿಸಲು ಹೊರಟಿದೆ ಎಂಬ ವಾರ್ತೆ ಮಾರ್ಗ ಮಧ್ಯ ಲಭಿಸಿತು. ಹಝ್ರತ್ ಪೈಗಂಬರ್(ಸ) ಈ ಸುದ್ದಿಯನ್ನು ಸಹಾಬರಿಗೆ ತಿಳಿಸಿಕೊಂಡು ಸಲಹೆ ಕೇಳಿದರು. ಒಂದು ಸಂಘದ ಜನರು ಹೇಳಿದರು: ಶತ್ರುಗಳನ್ನು ಎದುರಿಸುವುದಕ್ಕಿಂತ ವ್ಯಾಪಾರ ತಂಡವನ್ನು ಭೇಟಿಯಾಗುವುದನ್ನು ನಾವು ಹೆಚ್ಚು ಇಷ್ಟಪಡುತ್ತೇವೆ. ಒಂದು ಸಂಘ ಹೀಗೆ ಹೇಳಿದ್ದಾಗಿ ಒಂದು ವರದಿಯಲ್ಲಿ ಪ್ರಸ್ತಾಪಿಸಲಾಗಿದೆ: ನೀವು ನಮ್ಮೊಡನೆ ಯುದ್ಧದ ಬಗ್ಗೆ ಹೇಳಿದ್ದರೆ ನಾವು ಅದರ ತಯಾರಿ ಮಾಡುತ್ತಿದ್ದೆವು. ನಾವಂತು ವ್ಯಾಪಾರಿ ತಂಡದ ಬಳಿಗೆ ಹೋಗಲು ಹೊರಟಿದ್ದೆವು. ಮತ್ತೊಂದು ವರದಿಯಲ್ಲಿ ಅವರು ಹೀಗೆ ಹೇಳಿದ್ದಾಗಿ ಪ್ರಸ್ತಾಪಿಸಲಾಗಿದೆ: ಯಾ ರಸೂಲಲ್ಲಾಹ್, ನೀವು ವ್ಯಾಪಾರಿ ತಂಡದ ಬಳಿಗೆಯೇ ಹೋಗಬೇಕು. ನೀವು ಶತ್ರುಗಳನ್ನು ಬಿಟ್ಟುಬಿಡಿರಿ. ಆಗ ಹಝ್ರತ್ ಪೈಗಂಬರರ(ಸ) ಅನುಗ್ರಹೀತ ಮುಖದ ಬಣ್ಣ ಬದಲಾಯಿತು. ಹಝ್ರತ್ ಅಬೂ ಅಯ್ಯೂಬ್(ರ) ಹೇಳುತ್ತಾರೆ: **"ಕಮಾ ಅಖ್‌ರಜಕುಂ ರಬ್ಬುಕ ಮಿನ್ ಬೈತಿಕ ಬಿಲ್‌ಹಖ್ಖಿ ವಇನ್ನ ಫರೀಖನ್ ಮಿನಲ್ ಮೂಮಿನೀನ ಲಕಾರಿಹೂನ್."** ಎಂದರೆ ನಿನ್ನ ಪ್ರಭು ಸತ್ಯದೊಂದಿಗೆ ನಿನ್ನನ್ನು ನಿನ್ನ ಮನೆಯಿಂದ ಹೊರಡಿಸಿದನು. ಆದರೆ ಸತ್ಯವಿಶ್ವಾಸಿಗಳಲ್ಲಿ ಒಂದು ಸಂಘ ಅದನ್ನು ಖಂಡಿತವಾಗಿಯೂ ಇಷ್ಟಪಡುತ್ತಿರಲಿಲ್ಲ. ಈ ವಚನ ಅವತೀರ್ಣವಾಗಲು ಕಾರಣವೂ ಇದೇ ಘಟನೆಯಾಗಿತ್ತು. ಆ ಸಂದರ್ಭದಲ್ಲಿ ಹಝ್ರತ್ ಅಬೂಬಕರ್(ರ) ನಿಂತುಕೊಂಡು ಬಹಳ ಉತ್ತಮವಾಗಿ ಮಾತನಾಡಿದರು. ಅನಂತರ ಹಝ್ರತ್ ಉಮರ್(ರ) ನಿಂತುಕೊಂಡು ಬಹಳ ಉತ್ತಮವಾಗಿ ಮಾತನಾಡಿದರು. ಅನಂತರ ಮಿಖ್‌ದಾದ್ ನಿಂತುಕೊಂಡು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ಅಲ್ಲಾಹನು ನಿಮ್ಮೊಡನೆ ಏನು ಮಾಡಲು ಆಜ್ಞಾಪಿಸಿದ್ದಾನೋ ಅದನ್ನು ಮಾಡಿರಿ. ನಾವು ನಿಮ್ಮೊಂದಿಗೆ ಇದ್ದೇವೆ. **'ಫಝ್‌ಹಬ್ ಅಂತ ವರಬ್ಬುಕ ಫಖಾತಿಲಾ ಹಾಹುನಾ ಖಾಇದೂನ್'** ಎಂದರೆ ನೀವು ಮತ್ತು ನಿಮ್ಮ ಪ್ರಭು ಹೋಗಿ ಯುದ್ಧ ಮಾಡಿರಿ ನಾವು ಇಲ್ಲಿ ಕುಳಿತುಕೊಳ್ಳುತ್ತೇವೆ ಎಂದು ಬನೀ ಇಸ್ರಾಈಲಿನವರು ಹಝ್ರತ್ ಮೂಸಾರೊಡನೆ(ಅ) ಹೇಳಿದಂತೆ ಅಲ್ಲಾಹನಾಣೆ ನಾವು ಹೇಳುವುದಿಲ್ಲ. ನಮ್ಮಲ್ಲಿ ಜೀವವಿರುವ ವರೆಗೆ ನಾವಂತು ನಿಮ್ಮೊಂದಿಗೆ ಯುದ್ಧ ಮಾಡುವೆವು.
(ಅಸ್ಸೀರತುಲ್ ಹಲಬೀಯ, ಸಂಪುಟ–2, ಪುಟ–205–206, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002) (ಫರ್‌ಹಂಗ್ ಸೀರತ್ ಪುಟ–125)

ಹಝ್ರತ್ ಇಬ್ನು ಅಬ್ಬಾಸ್ ಹೇಳುತ್ತಾರೆ: ಬದ್ರ್ ಯುದ್ಧದ ಸಂದರ್ಭದಲ್ಲಿ ಮುಸ್ಲಿಮರು ಕೈದಿಗಳನ್ನು ಸೆರೆಹಿಡಿದಾಗ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್‌ರೊಡನೆ(ರ) ಹಝ್ರತ್ ಪೈಗಂಬರ್(ಸ) ಹೇಳಿದರು: ಈ ಕೈದಿಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು? ಹಝ್ರತ್ ಅಬೂಬಕರ್(ರ) ಹೇಳಿದರು: ಹೇ ಅಲ್ಲಾಹನ ಪ್ರವಾದಿ, ಅವರು ನಮ್ಮ ಸಂಬಂಧಿಕರು. ಅವರಿಂದ ಪರಿಹಾರಧನವನ್ನು ಪಡೆದುಕೊಳ್ಳಿರಿ. ಅವರು ಸತ್ಯನಿಷೇಧಿಗಳ ವಿರುದ್ಧ ನಮಗೆ ಸಹಾಯಕರಾಗುವರು. ಅಲ್ಲಾಹನು ಅವರನ್ನು ಇಸ್ಲಾಮಿನ ಕಡೆಗೆ ಮಾರ್ಗದರ್ಶನ ಮಾಡಲೂಬಹುದು. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಉಮರ್ ಇಬ್ನು ಖತ್ತಾಬ್, ನಿನ್ನ ಅಭಿಪ್ರಾಯವೇನು? ಹಝ್ರತ್ ಉಮರ್(ರ) ಹೇಳಿದರು: ಯಾ ರಸೂಲಲ್ಲಾಹ್, ನನ್ನದು ಅಬೂಬಕರರ ಅಭಿಪ್ರಾಯದಂತೆ ಅಲ್ಲ. ನನ್ನ ಅಭಿಪ್ರಾಯದಲ್ಲಿ, ನೀವು ಅವರನ್ನು ನಮಗೆ ಒಪ್ಪಿಸಿರಿ. ನಾವು ಅವರ ತಲೆಗಳನ್ನು ಕಡಿಯುವೆವು. ಅಖೀಲ್‌ರನ್ನು ಅಲಿಯವರಿಗೆ ಒಪ್ಪಿಸಿರಿ. ಅವರು ಅವನ ತಲೆಯನ್ನು ಕಡಿಯುವರು. ನನ್ನ ಸಂಬಂಧಿಕನಾದ ಇಂತಹ ವ್ಯಕ್ತಿಯನ್ನು ನನಗೆ ಒಪ್ಪಿಸಿರಿ. ನಾನು ಅವನ ತಲೆಯನ್ನು ಕಡಿಯುವೆನು. ಏಕೆಂದರೆ, ಇವರೆಲ್ಲರೂ ಸತ್ಯನಿಷೇಧಿಗಳ ನೇತಾರರಾಗಿರುವರು. ಹಝ್ರತ್ ಅಬೂಬಕರ್‌ರ(ರ) ಅಭಿಪ್ರಾಯಕ್ಕೆ ಹಝ್ರತ್ ಪೈಗಂಬರ್(ಸ) ಆದ್ಯತೆ ನೀಡಿದರು. ಹಝ್ರತ್ ಉಮರ್‌ರ(ರ) ಮಾತಿಗೆ ಆದ್ಯತೆ ನೀಡಲಿಲ್ಲ. ಹಝ್ರತ್

ಉಮರ್(ರ) ಹೇಳುತ್ತಾರೆ, "ಪೈಗಂಬರ್(ಸ) ನನ್ನ ಅಭಿಪ್ರಾಯಕ್ಕೆ ಆಧ್ಯತೆ ನೀಡಲಿಲ್ಲ. ಮರುದಿನ ನಾನು ಬಂದಾಗ ಪೈಗಂಬರ್(ಸ) ಮತ್ತು ಅಬೂಬಕರ್(ರ) ಇಬ್ಬರೂ ಅಳುತ್ತಾ ಕುಳಿತಿದ್ದನ್ನು ನೋಡಿದೆನು. ನಾನು ಅವರನ್ನು ಕೇಳಿದೆ, ಯಾ ರಸೂಲಲ್ಲಾಹ್(ಸ)! ನೀವು ಮತ್ತು ನಿಮ್ಮ ಸಹಚರರು ಅಳಲು ಕಾರಣವೇನು? ನನಗೆ ಅಳು ಬಂದರೆ ನಾನು ಸಹ ಅಳುತ್ತೇನೆ, ಇಲ್ಲದಿದ್ದರೆ ಅಳುವಂತೆ ಮುಖ ಮಾಡುತ್ತೇನೆ. ಅದಕ್ಕೆ ಪೈಗಂಬರ್(ಸ) ಉತ್ತರಿಸಿದರು: ನಾನು ಅಳುತ್ತಿರುವುದಕ್ಕೆ ಕಾರಣವೇನಂದರೆ ನಿಮ್ಮ ಜೊತೆಗಾರರು ನನ್ನ ಮುಂದೆ ನಾನು ಅವರೊಂದಿಗೆ ಫಿದ್‌ಯ(ಪರಿಹಾರ) ತೆಗೆದುಕೊಳ್ಳಬೇಕು ಎಂದು ಸೂಚಿಸಿದರು. ನನ್ನ ಮುಂದೆ ಅವರ ಬಗ್ಗೆ ತೋರಿಸಿದ ಶಿಕ್ಷೆ ಆಗಿದೆ. ಅದನ್ನು ಈ ಮರಕ್ಕಿಂತ ಹತ್ತಿರದಲ್ಲಿ ನನಗೆ ತೋರಿಸಲಾಗಿದೆ' (ಅಂದರೆ ಅವರ ಹತ್ತಿರದಲ್ಲಿದ್ದ ಮರವನ್ನು ಉಲ್ಲೇಖಿಸುವುದು). ಅದರ ಬಗ್ಗೆ ಅಲ್ಲಾಹನು ಈ ಆಯತ್‌ನ್ನು ಅವತೀರ್ಣಗೊಳಿಸಿದನು:

**"ಮಾಕಾನ ಲಿನಬಿಯ್ಯಿ ಅನ್‌ಯಕೂನ ಲಹೂ ಅಸ್ರಾ ಹತ್ತಾ ಯುಸ್‌ಖ಼ಿನು ಫಿಲ್‌ಅರ್‌ಝ಼ಿ"** ಎಂದರೆ, ತೀವ್ರವಾದ ಯುದ್ಧ ನಡೆಯದೇ ಕೈದಿಗಳನ್ನು ಬಂಧಿಸುವುದು ಸರಿಯಲ್ಲ ಮತ್ತು ಅದರ ಮುಂದಿನ ಆಯತ್ **ಫಕುಲೂ ಮಿಮ್ಮಾ ಗನಿಮ್‌ತುಮ್ ಹಲಾಲನ್ ತೈಯಿಬನ್** ಅಂದರೆ ಆದ್ದರಿಂದ ನೀವು ಯುದ್ಧದಲ್ಲಿ ಗೆದ್ದದ್ದನ್ನು ಕಾನೂನುಬದ್ಧ ಮತ್ತು ಒಳ್ಳೆಯದನ್ನು ತಿನ್ನಿರಿ. ಹೀಗೆ ಅಲ್ಲಾಹನು ಅವರಿಗಾಗಿ ಯುದ್ಧಗಳಲ್ಲಿ ಗೆದ್ದ ಸಂಪತ್ತನ್ನು ಧರ್ಮಬದ್ಧಗೊಳಿಸಿದನು. ಇದು ಸಹೀಹ್ ಮುಸ್ಲಿಮ್‌ನ ವರದಿ ಆಗಿದೆ. (ಸಹೀಹ್ ಮುಸ್ಲಿಮ್ ಕಿತಾಬುಲ್ ಜಿಹಾದ್, ಹದೀಸ್–4588)

ಈ ವರದಿಯಲ್ಲಿ, ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್(ರ) ಅವರು ಅಳುತ್ತಿದ್ದರು ಮತ್ತು ನಂತರದ ವಚನಗಳ ವಿಳಯವು ಈ ವರದಿಯನ್ನು ಸಂಪೂರ್ಣವಾಗಿ ಅಸ್ಪಷ್ಟಾಗಿದೆ ಎಂದು ಸೂಚಿಸುತ್ತದೆ. ಆದಾಗ್ಯೂ, ಈ ವರದಿಯು ಸರಿಯಾಗಿದೆ ಎಂದು ಭಾವಿಸಿ, ಖುರ್‌ಆನ್‌ನ ಬಹುಪಾಲು ಇತಿಹಾಸಗಾರರು, ಜೀವನಚರಿತ್ರೆಗಾರರು ಮತ್ತು ವ್ಯಾಖ್ಯಾನಕಾರರು ಬದರ್‌ನ ಸೆರೆಯಾಳುಗಳನ್ನು ಪರಿಹಾರವಾಗಿ ಪಡೆಯುವುದರ ನಿರ್ಣಯಕ್ಕೆ ಬೆಸರ ವ್ಯಕ್ತಪಡಿಸುತ್ತಾರೆ. ಮತ್ತು ಹಝ್ರತ್ ಉಮರ್(ರ)ರವರ ಅಭಿಪ್ರಾಯಕ್ಕೆ ಒಲವು ತೋರಿಸುತ್ತಾರೆ. ಹಝ್ರತ್ ಉಮರ್(ರ) ಅವರ ಜೀವನಚರಿತೆಯನ್ನು ಬರೆದವರು, ಸಾಮಾನ್ಯವಾಗಿ ಹಜರತ್ ಉಮರ್ (ರ) ಅವರ ಅಭಿಪ್ರಾಯಗಳಿಗೆ ಅನುಗುಣವಾಗಿ ಬಹಿರಂಗವಾದ ಖುರ್‌ಆನ್ ನಿಳೇಧಾಜ್ಞೆಗಳ ಬಗ್ಗೆ ಒಂದು ಅಧ್ಯಾಯವನ್ನು ಬರೆಯುತ್ತಾರೆ; ಬದರ್ ಸೆರೆಯಾಳುಗಳಿಗೆ ಸಂಬಂಧಿಸಿದಂತೆ, ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಉಮರ್(ರ) ರವರ ಅಭಿಪ್ರಾಯವನ್ನು ಬೆಂಬಲಿಸಿದರು ಎಂದು ಅದರಲ್ಲಿ ಉಲ್ಲೇಖಿಸಲಾಗಿದೆ. ಆದರೆ ಹೇಳಿದಂತೆ, ಈ ವಿಳಯವು ಅಸ್ಪಷ್ಟವಾಗಿದೆ. ವಾಸ್ತವವಾಗಿ, ಖುರ್‌ಆನ್‌ನ ಜೀವನಚರಿತ್ರೆಗಾರರು ಮತ್ತು ವ್ಯಾಖ್ಯಾನಕಾರರು ಈ ವರದಿಯನ್ನು ತಿಳುವಳಿಕೆಯಲ್ಲಿ ತಪ್ಪಾಗಿದೆ ಎಂದು ತೋರುತ್ತದೆ. ಅದೇನೇ ಇದ್ದರೂ, ಜೀವನಚರಿತ್ರೆಗಾರರು ಮತ್ತು ವ್ಯಾಖ್ಯಾನಕಾರರ ತೀರ್ಮಾನಗಳನ್ನು ತಿರಸ್ಕರಿಸುವ ಹಝ್ರತ್ ಮುಸ್ಲಿಹ್ ಮೌಊದ್(ರ) ರವರ ಅಪ್ರಕಟಿತ ಟಿಪ್ಪಣಿಗಳಲ್ಲಿ ಒಂದು ಟಿಪ್ಪಣಿ ಇದೆ ಮತ್ತು ಹಝ್ರತ್ ಮುಸ್ಲಿಹ್ ಮೌಊದ್(ರ) ನೀಡಿದ ವಿವರಣೆಯು ಸರಿಯಾದ ವ್ಯಾಖ್ಯಾನವಾಗಿದೆ. ಜೀವನಚರಿತ್ರೆಗಾರರು ಮತ್ತು ವ್ಯಾಖ್ಯಾನಕಾರರು ಹಝ್ರತ್ ಉಮರ್(ರ) ರವರ ಸ್ಥಾನಮಾನವನ್ನು ಅನಗತ್ಯವಾಗಿ ಹೆಚ್ಚಿಸಲು ಈ ವರದಿಯನ್ನು ರಚಿಸಿದ್ದಾರೆ ಅಥವಾ ಈ ವರದಿಯ ತಿಳುವಳಿಕೆಯಲ್ಲಿ ಅವರು ತಪ್ಪನ್ನು ಮಾಡಿದ್ದಾರೆ ಎಂದು ತೋರುತ್ತದೆ. ಅದೇನೇ ಇದ್ದರೂ, ಸೂರಾ ಅಲ್–ಅನ್ಫಾಲ್‌ನ 68ನೇ ಆಯತ್‌ಅನ್ನು ವಿವರಿಸುತ್ತಾ, ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಯುದ್ಧ ನಡೆಯದಿದ್ದರೂ ಕೈದಿಗಳನ್ನು ಸೆರೆ ಹಿಡಿದು ಗುಲಾಮರನ್ನಾಗಿ ಮಾಡುವ ಸಂಪ್ರದಾಯ ಇಸ್ಲಾಮಿನ ಆವಿರ್ಭಾವಕ್ಕೆ ಮುಂಚೆ ಮಾತ್ರವಲ್ಲ ಲೋಕದ ಕೆಲವೆಡೆ ಈಗಲೂ ಇದೆ. ಈ ವಚನ ಈ ಕೆಟ್ಟ ಸಂಪ್ರದಾಯವನ್ನು ರದ್ದು ಮಾಡುತ್ತದೆ. ಯುದ್ಧ ನಡೆದರೆ ಮಾತ್ರ, ಶತ್ರುಗಳನ್ನು ಕೈದಿ ಮಾಡಬಹುದಾಗಿದೆ ಎಂದು ಇದರಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಯುದ್ಧ ನಡೆಯದಿದ್ದರೆ ಯಾರನ್ನೂ ಕೈದಿ ಮಾಡುವುದು ಅನುಮತನೀಯವಲ್ಲ. ಈ ಆಯತ್ತನ್ನು ತಪ್ಪಾಗಿ ವ್ಯಾಖ್ಯಾನಿಸಲಾಗಿದೆ. ಅವರು ಹೀಗೆ ಹೇಳುತ್ತಾರೆ: ಬದ್ರ್ ಯುದ್ಧದ ಸಂದರ್ಭದಲ್ಲಿ ಮುಸ್ಲಿಮರು ಕೆಲವು ಕೈದಿಗಳನ್ನು ಬಂಧಿಸಿದರು. ಇವರನ್ನು ಏನು ಮಾಡಬೇಕೆಂದು ಹಝ್ರತ್ ಪೈಗಂಬರ್(ಸ) ಸಹಾಬರೊಡನೆ ಸಲಹೆ ಕೇಳಿದರು. ಅವರನ್ನು ಕೊಲ್ಲಬೇಕೆಂದು ಹಝ್ರತ್ ಉಮರ್(ರ) ಅಭಿಪ್ರಾಯಪಟ್ಟರು. ಪರಿಹಾರಧನವನ್ನು ಪಡೆದು ಬಿಟ್ಟುಬಿಡಬೇಕೆಂದು ಹಝ್ರತ್ ಅಬೂಬಕರ್(ರ) ಅಭಿಪ್ರಾಯಪಟ್ಟರು. ಹಝ್ರತ್ ಅಬೂಬಕರರ(ರ) ಅಭಿಪ್ರಾಯವನ್ನು ಹಝ್ರತ್ ಪೈಗಂಬರ್(ಸ) ಇಷ್ಟಪಟ್ಟರು. ಮತ್ತು ಸೂರ ಅನ್‌ಫಾಲ್‌ನ ಆಯತ್ 68ರಲ್ಲಿದೆ ಯಾವ ಪ್ರವಾದಿಯನ್ನು ತೀವ್ರವಾದ ಯುದ್ಧ ನಡೆಯದೇ ಕೈದಿಗಳನ್ನು ಬಂಧಿಸುವುದು ಸರಿಯಲ್ಲ ಎಂದು.

ಅದೇನೇ ಇದ್ದರೂ, ಹಝ್ರತ್ ಮುಸ್ಲಿಹ್ ಮೌಊದ್(ರ) ವ್ಯಾಖ್ಯಾನಿಸುತ್ತ ಹೇಳುತ್ತಾರೆ, ಅಭಿಪ್ರಾಯಗಳನ್ನು ತೆಗೆದುಕೊಂಡಗ ಅದರಲ್ಲಿ ಹಝ್ರತ್ ಅಬೂಬಕ್ಕರ್(ರ) ಅಭಿಪ್ರಾಯವು ಹಝ್ರತ್ ಉಮರ್(ರ) ಗೆ ಭಿನ್ನವಾಗಿತ್ತು ಮತ್ತು ಪೈಗಂಬರ್(ಸ) ರವರು ಹಝ್ರತ್ ಅಬೂಬಕರ್(ರ)ರವರ ಅಭಿಪ್ರಾಯವನ್ನು ಇಷ್ಟಪಟ್ಟರು ಹೀಗೆ ಅವರು ಪರಿಹಾರ ಪಡೆದುಕೊಂಡು ಸೆರೆಯಾಳುಗಳನ್ನು ಬಿಡುಗಡೆ ಮಾಡಿದರು. ಆದರೆ ವ್ಯಾಖ್ಯಾನಗಾರರು ಹೇಳುತ್ತಾರೆ ಈ ಆಯತ್ ಅವತೀರ್ಣಗೊಳ್ಳುವಿಕೆಯಿಂದ ಅರ್ಥವಗುವುದೇನಂದರೆ ಅಲ್ಲಾಹನಿಗೆ ಹಝ್ರತ್ ಪೈಗಂಬರರ(ಸ) ಈ ಕೃತ್ಯ ಇಷ್ಟವಾಗಲಿಲ್ಲ. ಕೈದಿಗಳನ್ನು ಕೊಲ್ಲಬೇಕಿತ್ತು, ಪರಿಹಾರಧನವನ್ನು ಪಡೆದುಕೊಂಡು ಬಿಟ್ಟುಬಿಡಬಾರದಿತ್ತು. ಇದು ತಬರಿಯ ಹೇಳಿಕೆಯಾಗಿದೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ ಈ ವ್ಯಾಖ್ಯಾನ ತಪ್ಪಾಗಿದೆ. ಮೊದಲ ಸಂಗತಿಯೇನೆಂದರೆ, ಪರಿಹಾರಧನವನ್ನು ಪಡೆದುಕೊಂಡು ಬಿಡಬಾರದು ಎಂದು ಹೇಳುವ ಯಾವುದೇ ಆಜ್ಞೆ ಅಲ್ಲಾಹನ ಕಡೆಯಿಂದ ಅವತೀರ್ಣವಾಗಿರಲಿಲ್ಲ. ಆದ್ದರಿಂದ ಪರಿಹಾರಧನವನ್ನು ಪಡೆದ ಕಾರಣದಿಂದ ಹಝ್ರತ್ ಪೈಗಂಬರ್‌ರನ್ನು(ಸ) ಆಕ್ಷೇಪಿಸುವಂತಿಲ್ಲ. ಎರಡನೇ ಸಂಗತಿ ಇದಕ್ಕಿಂತ ಮುಂಚೆ ಹಝ್ರತ್ ಪೈಗಂಬರ್(ಸ) ನಖ್‌ಲ ಎಂಬ ಪ್ರದೇಶದಲ್ಲಿ ಎರಡು ವ್ಯಕ್ತಿಗಳನ್ನು ಫಿದ್‌ಯ ಪಡೆದುಕೊಂಡು ಬಿಟ್ಟಿದ್ದರು. ಅಲ್ಲಾಹನು ಅವರ ಈ ಕೃತ್ಯವನ್ನು ಇಷ್ಟಪಡದೇ ಇರಲಿಲ್ಲ. ಮೂರನೆಯದಾಗಿ ಇದರ ನಂತರದ ಎರಡು ಆಯತ್ತುಗಳ ನಂತರ ಯುದ್ಧ ಸಂಪತ್ತಿನಿಂದ ಸಿಗುವುದೆಲ್ಲವನ್ನು ಮುಸ್ಲಿಮರು ಉಪಯೋಗಿಸಬಹುದು ಮತ್ತು ಅದು ಅನುಮತನೀಯವೆಂದು ಹೇಳಲಾಗಿದೆ. ಹಝ್ರತ್ ಪೈಗಂಬರ್(ಸ) ಪರಿಹಾರಧನವನ್ನು ಪಡೆದದ್ದು ಅಲ್ಲಾಹನು ಇಷ್ಟಪಡಲಿಲ್ಲವೆಂದು ಹೇಳುವುದನ್ನು ಯಾರಿಗೂ ಊಹಿಸಲು ಕೂಡ ಸಾಧ್ಯವಲ್ಲ. ಆದ್ದರಿಂದ ಈ ವ್ಯಾಖ್ಯಾನ ತಪ್ಪು. ಸರಿಯಾದ ವ್ಯಾಖ್ಯಾನವೇನೆಂದರೆ, ಯುದ್ಧ ಉಂಟಾಗಿ ಶತ್ರುಗಳನ್ನು ಸೋಲಿಸದರೆ ಮಾತ್ರ ಕೈದಿಗಳನ್ನು ಹಿಡಿಯಬಹುದು ಎಂದಾಗಿದೆ.

(ದುರೂಸ್ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರ ಅನ್‌ಫಾಲ್, ರೆಜಿಸ್ಟರ್ ನಂ. 36, ಪುಟ–968–969)

ಖುರ್‌ಆನ್ ವ್ಯಾಖ್ಯಾನಗಾರರಲ್ಲಿ ಅಲ್ಲಾಮ ರಾಝಿ ಮತ್ತು ಚರಿತ್ರೆಗಾರರಾದ ಅಲ್ಲಾಮ ಶಿಬ್‌ಲಿ ನುಮಾನಿಯ ನಿಲುವು ಸಹ ಇದೇ ಆಗಿದೆ. (ತಫ್‌ಸೀರ್ ಕಬೀರ್ ಅಲ್ಲಾಮ ಇಮಾಮ್ ರಾಝಿ, ಸಂಪುಟ–8, ಭಾಗ–15, ಪುಟ–158, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2004) (ಸೀರತ್ ಅನ್ನಬಿ(ಸ), ಶಿಬ್ಲಿ ನುಮಾನಿ, ಸಂಪುಟ–1, ಪುಟ–194, ಮುದ್ರಣ ಆರ್.ಜೆಡ್ ಪ್ಯಾಕೇಜರ್ಝ್ ಲಾಹೋರ್ 1408ಹಿ)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಬರೆಯುತ್ತಾರೆ: ಪೈಗಂಬರ್(ಸ)ರವರು ಮದೀನಕ್ಕೆ ತಲುಪಿ ಖೈದಿಗಳ ಬಗ್ಗೆ ಅಭಿಪ್ರಾಯಗಳನ್ನು ಕೇಳಿದರು. ಅರೇಬಿಯರು ಸಾಮಾನ್ಯವಾಗಿ ಕೈದಿಗಳನ್ನು ಕೊಲ್ಲಲು ಅಥವಾ ಸ್ಥಿರವಾಗಿ ಅವರನ್ನು ಗುಲಾಮರನ್ನಾಗಿ ಮಾಡಿಡುವ ಸಂಪ್ರದಾಯವನ್ನು ಹೊಂದಿದ್ದರು. ಆದರೆ ಹಝ್ರತ್ ಪೈಗಂಬರ್‌ರಿಗೆ(ಸ) ಇದು ಇಷ್ಟವಿರಲಿಲ್ಲ. ಅದರ ಬಗ್ಗೆ ಯಾವುದೇ ದೈವಿಕ ಆಜ್ಞೆ ಕೂಡ ಅವತೀರ್ಣವಾಗಿರಲಿಲ್ಲ. ಅವರಿಂದ ಪರಿಹಾರಧನವನ್ನು ಪಡೆದುಕೊಂಡು ಬಿಟ್ಟುಬಿಡಬೇಕು ಎಂದು ಹಝ್ರತ್ ಅಬೂಬಕರ್(ರ) ಅಭಿಪ್ರಾಯಪಟ್ಟರು. ಏಕೆಂದರೆ ಆ ಜನರು ನಮ್ಮದೇ ಸಹೋದರರು ಮತ್ತು ಭವಿಷ್ಯದಲ್ಲಿ ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಲೂ ಬಹುದು ಎಂದು ಅವರು ಹೇಳಿದರು. ಆದರೆ ಹಝ್ರತ್ ಉಮರ್(ರ) ಈ ಅಭಿಪ್ರಾಯಕ್ಕೆ ವಿರುದ್ಧವಾದ ಅಭಿಪ್ರಾಯವನ್ನು ಹೊಂದಿದ್ದರು. ಧರ್ಮದ ವಿಷಯದಲ್ಲಿ ಸಂಬಂಧವನ್ನು ನೋಡಬೇಕಾಗಿಲ್ಲ. ಅವರ ದುಷ್ಕೃತ್ಯದ ಕಾರಣದಿಂದ ಅವರನ್ನು ಕೊಲ್ಲಬೇಕೆಂಧು ಅವರು ಅಭಿಪ್ರಾಯಪಟ್ಟರು. ಮಾತ್ರವಲ್ಲ ಮುಸ್ಲಿಮರು ತಮ್ಮ ತಮ್ಮ ಸಂಬಂಧದಲ್ಲಿ ಬರುವ ಶತ್ರುಗಳನ್ನು ಸ್ವತಃ ಕೊಲ್ಲಬೇಕೆಂದೂ ಹೇಳಿದರು. ಹಝ್ರತ್ ಪೈಗಂಬರ್(ಸ) ತನ್ನ ಕಾರುಣ್ಯದ ಸ್ವಭಾವದ ಕಾರಣದಿಂದ ಹಝ್ರತ್ ಅಬೂಬಕರರ ಅಭಿಪ್ರಾಯವನ್ನು ಇಷ್ಟಪಟ್ಟರು. ಮುಶ್ರಿಕರಿಂದ ಪರಿಹಾರಧನವನ್ನು ಪಡೆದುಕೊಂಡು ಬಿಟ್ಟುಬಿಡಲು ಆಜ್ಞಾಪಿಸಿದರು. ಇದೇ ಆಜ್ಞೆ ಪ್ರಕಾರ ಅಲ್ಲಾಹನ ಆಜ್ಞೆ ಸಹ ಅವತೀರ್ಣವಾಯಿತು. ಹೀಗೆ ಅವರಿಂದ ಪರಿಹಾರಧನವನ್ನು ಪಡೆದುಕೊಂಡು ಎಲ್ಲರನ್ನು ಬಿಟ್ಟುಬಿಡಲಾಯಿತು.
(ಸೀರತ್ ಖಾತಮನ್ನಬೀಈನ್, ಪುಟ–367–368)

ಹಝ್ರತ್ ಉಮರ್(ರ) ಅವರ ಮಗಳು ಹಝ್ರತ್ ಹಫ್ಸಾ(ರ)ರವರ ವಿವಾಹಕ್ಕೆ ಸಂಬಂಧಿಸಿದಂತೆ, ಹಜರತ್ ಹಫ್ಸಾ ಅವರ ಪತಿ ಬದ್ರ್ ಯುದ್ಧದಲ್ಲಿ ಭಾಗವಹಿಸಿದ್ದರು ಮತ್ತು ಯುದ್ಧದಿಂದ ಹಿಂದಿರುಗುವಾಗ ಅವರು ಅನಾರೋಗ್ಯಕ್ಕೆ ಒಳಗಾಗಿ ನಿಧನರಾದರು. ಇದರ ನಂತರ, ಪೈಗಂಬರ್(ಸ)ರವರು ಹಝ್ರತ್ ಹಫ್ಸಾ(ರ) ರನ್ನು ವಿವಾಹವಾದರು. ಇದರ ವಿವರಗಳನ್ನು ಬುಖಾರಿಯಲ್ಲಿ ಹೀಗೆ ಉಲ್ಲೇಖಿಸಲಾಗಿದೆ: ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) ಹೇಳುತ್ತಾರೆ: ಹಝ್ರತ್ ಹಫ್ಸಾ ಬಿನ್ತ್ ಉಮರ್(ರ) ಖುನೈಸ್ ಬಿನ್ ಹುಝಾಫ

ಸಾಹ್ಮಿ ಅವರು ವಿಧವೆ ಆದರು ಅವರು ಪೈಗಂಬರ್(ಸ) ರವರ ಸಹಾಬಿ ಆಗಿದ್ದರು ಅವರು ಬದರ್ ಯುದ್ಧದಲ್ಲಿ ಪಾಲ್ಗೊಂಡಿದ್ದರು. ಮದೀನದಲ್ಲಿ ಅವರು ನಿಧನ ಹೊಂದಿದಾಗ ಹಝ್ರತ್ ಉಮರ್(ರ) ಹೇಳಿದರು: ನಾನು ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ)ಅವರೊಂದಿಗೆ ಭೇಟಿಯಾಗಿ ಹಝ್ರತ್ ಹಫ್ಸಾರ ಬಗ್ಗೆ ಪ್ರಸ್ತಾಪಿಸಿದೆ, ನೀವು ಬಯಸುವುದಾದರೆ, ನಾನು ನಿಮ್ಮನ್ನು ಹಫ್ಸಾ ಬಿನ್ತ್ ಉಮರ್‌ನ್ನು ನೀಡಿ ನಿಕಾಹ್ ಮಾಡಿಕೊಡುವೆನು. ಅದಕ್ಕೆ ಹಝ್ರತ್ ಉಸ್ಮಾನ್(ರ), "ನಾನು ಈ ವಿಳಯದ ಬಗ್ಗೆ ಯೋಚಿಸುತ್ತೇನೆ" ಎಂದು ಹೇಳಿದ್ದಾರೆ. ಹಝ್ರತ್ ಉಮರ್(ರ) ಹೇಳುತ್ತಾರೆ ನಾನು ಬಹಳ ದಿನಗಳವರೆಗೆ ಕಾಯುತ್ತಿದ್ದೆ, ಅದರ ನಂತರ ಹಝ್ರತ್ ಉಸ್ಮಾನ್(ರ), "ಸದ್ಯಕ್ಕೆ ನನಗೆ ಮದುವೆಯಾಗಲು ಸಾಧ್ಯವಿಲ್ಲ ಎಂದು ತೋರುತ್ತದೆ." ಎಂದು ಹೇಳಿದರು. ಹಝ್ರತ್ ಉಮರ್(ರ) ಹೇಳುತ್ತಾರೆ, "ನಾನು ಹಝ್ರತ್ ಅಬೂಬಕರ್(ರ) ಅವರ ಬಳಿಗೆ ಹೋಗಿ ಅವರಿಗೆ ಇಷ್ಟವಿದ್ದರೆ ನಾನು ಹಫ್ಸಾ ಬಿನ್ತ್ ಉಮರ್(ರ) ಅವರನ್ನು ನಿಕಾಹ್ ಮಾಡಿ ಕೊಡುವೆನು ಎಂದು ಕೇಳಿದೆ, ಅದಕ್ಕೆ ಅವರು ಸುಮ್ಮನಿದ್ದರು ಮತ್ತು ನನಗೆ ಉತ್ತರವನ್ನು ನೀಡಲಿಲ್ಲ. ಹಝ್ರತ್ ಉಮರ್ ಹೇಳುತ್ತಾರೆ ಉಸ್ಮಾನ್ ಗಿಂತ ಹಝ್ರತ್ ಅಬೂಬಕರ್(ರ) ಅವರಿಂದ ನಾನು ಹೆಚ್ಚು ದುಃಖಿತನಾದೆ, ಅಂದರೆ ಅವರು ಈ ಪ್ರಸ್ತಾಪವನ್ನು ನಿರಾಕರಿಸಿದರು. ನಾನು ನಂತರ ಕೆಲವು ದಿನಗಳವರೆಗೆ ಕಾಯುತ್ತಿದ್ದೆ, ಆ ಸಮಯದಲ್ಲಿ ಪೈಗಂಬರ್(ಸ) ಅವರು ಮದುವೆಯಲ್ಲಿ ಹಝ್ರತ್ ಹಫ್ಸಾ(ರ)ರವರ ಕೈ ಕೇಳಿದರು ನಾನು ಹಫ್ಸಾನನ್ನು ವಿವಾಹ ಮಾಡಿಕೊಟ್ಟೆನು. ನಿಕಾಹ್ ನಡೆದ ನಂತರ ಹಝ್ರತ್ ಅಬೂಬಕರ್(ರ) ನನ್ನನ್ನು ಭೇಟಿಯಾಗಿ, ನೀವು ಹಫ್ಸಾ(ರ)ರವರ ಮದುವೆಯ ಬಗ್ಗೆ ಪ್ರಸ್ತಾಪಿಸಿದಾಗ ನಾನು ಅದಕ್ಕೆ ಉತ್ತರ ನೀಡಿರಲಿಲ್ಲ ಆದ್ದರಿಂದ ನೀವು ನನ್ನ ಮೇಲೆ ಕೋಪಗೊಂಡಿದ್ದೀರಿ ಮತ್ತು ನಾನು ನಿಮಗೆ ಉತ್ತರವನ್ನು ನೀಡಲಿಲ್ಲವೇ? ಅದಕ್ಕೆ ಹಝ್ರತ್ ಉಮರ್(ರ) ನಾನು ದುಃಖಿತನಾಗಿದ್ದೇನೆ ಎಂದು ಹೇಳಿದರು. ಅದಕ್ಕೆ ಹಝ್ರತ್ ಅಬೂಬಕ್ಕರ್ ಹೇಳಿದರು: ವಿಷಯ ಏನಂದರೆ ಪೈಗಂಬರ್(ಸ) ಅವರು ಹಝ್ರತ್ ಹಫ್ಸಾ(ರ) ರ ಬಗ್ಗೆ ಪ್ರಸ್ತಾಪಿಸಿದ್ದಾರೆಂದು ನನಗೆ ತಿಳಿದಿತ್ತು ಇದರ ಹೊರತುಪಡಿಸಿ, ನಿಮಗೆ ಉತ್ತರವನ್ನು ನೀಡುವುದರಿಂದ ಏನೂ ನನ್ನನ್ನು ತಡೆಯಲಿಲ್ಲ, ಮತ್ತು ನಾನು ಪೈಗಂಬರ್(ಸ)ರವರ ಗೌಪ್ಯ ವಿಳಯವನ್ನು ಬಹಿರಂಗಪಡಿಸಲು ಬಯಸಲಿಲ್ಲ. ಅಂದರೆ ಹಝ್ರತ್ ಅಬೂಬಕರ್(ರ) ಅವರನ್ನು ಪೈಗಂಬರ್(ಸ)ರವರ ಈ ಗೌಪ್ಯವಾದ ವಿಷಯದ ಬಗ್ಗೆ ಅರಿವಿತ್ತು ಅದನ್ನು ಬಹಿರಂಗಪಡಿಸಲು ಸಾಧ್ಯವಾಗಲಿಲ್ಲ ಮತ್ತು ಅವರು ಹಝ್ರತ್ ಹಫ್ಸಾ ಅವರನ್ನು ಮದುವೆಯಾಗುವುದನ್ನು ವಿರೋಧಿಸಿದರೆ, ನಾನು ಖಂಡಿತವಾಗಿಯೂ ನಿಮ್ಮ ಪ್ರಸ್ತಾಪವನ್ನು ಒಪ್ಪಿಕೊಳ್ಳುತ್ತಿದ್ದೆ" ಎಂದು ಹೇಳಿದರು. (ಸಾಹಿಹ್ ಅಲ್–ಬುಖಾರಿ, ಕಿತಾಬ್ ಅಲ್–ಮಗಾಝಿ, ಹದೀಸ್–4005)

ಹೀಗೆ ಹಝ್ರತ್ ಅಬೂಬಕ್ಕರ್(ರ)ರವರು ಉತ್ತರ ನೀಡಿದರು. ಈ ಘಟನೆಯನ್ನು ವಿವರಾತ್ಮಕವಾಗಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ರವರು ಸೀರತ್ ಖಾತಮನ್ನಬೀಈನ್‌ನಲ್ಲಿ ಹೀಗೆ ಬರೆದಿದ್ದಾರೆ: ಅವರು ಹೇಳುತ್ತಾರೆ: ಹಝ್ರತ್ ಉಮರ್‌ರ(ರ) ಮಗಳಾದ ಹಝ್ರತ್ ಹಫ್ಸರ(ರ) ಗಂಡ ಬದ್ರ್ ಯುದ್ಧದಲ್ಲಿ ಭಾಗಿಯಾಗಿದ್ದರು ಹಾಗೂ ಬದ್ರ್ ಯುದ್ಧದ ನಂತರ ರೋಗಿಯಾಗಿ ನಿಧನರಾದರು. ಆ ಸಮಯದಲ್ಲಿ ಹಝ್ರತ್ ಹಫ್ಸರ(ರ) ಪ್ರಾಯ 20 ವಯಸ್ಸಿಗಿಂತ ಹೆಚ್ಚಿತ್ತು. ಹೀಗೆ ಹಝ್ರತ್ ಹಫ್ಸರ(ರ) ನಿಕಾಹ್ ಮಾಡುವುದರ ಕುರಿತು ಹಝ್ರತ್ ಉಸ್ಮಾನ್‌ರೊಡನೆ(ರ) ಅನಂತರ ಹಝ್ರತ್ ಅಬೂಬಕರ್‌ರೊಡನೆ(ರ) ಹಝ್ರತ್ ಉಮರ್(ರ) ಮಾತುಕತೆ ನಡೆಸಿದರು. ಈ ವಿಷಯದಲ್ಲಿ ಇಬ್ಬರೂ ಮೌನಿಯಾಗಿ ನಿಂತಾಗ ಮತ್ತು ಸಕಾರಾತ್ಮಕವಾದ ಉತ್ತರವನ್ನು ನೀಡದಿದ್ದಾಗ ಹಝ್ರತ್ ಉಮರ್(ರ) ಬಹಳ ದುಃಖಿತರಾದರು. ಹಝ್ರತ್ ಉಮರ್(ರ) ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಉಮರ್, ಚಿಂತೆಮಾಡಬೇಡ. ಅಲ್ಲಾಹನು ಇಚ್ಛಿಸುವುದಾದರೆ, ಹಫ್ಸಗೆ ಉಸ್ಮಾನ್ ಮತ್ತು ಅಬೂಬಕರ್‌ಗಿಂತ ಉತ್ತಮ ಪತಿ ಲಭಿಸುವುದು ಮತ್ತು ಉಸ್ಮಾನ್‌ಗೆ ಹಫ್ಸಗಿಂತ ಉತ್ತಮ ಪತ್ನಿ ಲಭಿಸುವುದು. ಹಝ್ರತ್ ಪೈಗಂಬರ್(ಸ) ಹೀಗೆ ಹೇಳಲು ಕಾರಣವೇನೆಂದರೆ, ಹಝ್ರತ್ ಪೈಗಂಬರ್(ಸ) ಹಝ್ರತ್ ಹಫ್ಸರನ್ನು ಮದುವೆಯಾಗಲು ಮತ್ತು ತನ್ನ ಮಗಳಾದ ಉಮ್ಮೇ ಕುಲ್ಸುಮ್‌ರನ್ನು ಹಝ್ರತ್ ಉಸ್ಮಾನ್‌ರಿಗೆ ಮದುವೆ ಮಾಡಿಸಿ ಕೊಡಲು ನಿರ್ಧರಿಸಿದ್ದರು. ಈ ಉದ್ದೇಶದ ಬಗ್ಗೆ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಸ್ಮಾನ್‌ರಿಗೆ(ರ) ಗೊತ್ತಿತ್ತು. ಆದ್ದರಿಂದಲೇ ಅವರಿಬ್ಬರೂ ಹಝ್ರತ್ ಉಮರ್(ರ) ವಿನಂತಿಸಿದಾಗ ಸುಮ್ಮನಿದ್ದರು. ಇದರ ಸ್ವಲ್ಪ ಕಾಲದ ನಂತರ ಹಝ್ರತ್ ಪೈಗಂಬರ್(ಸ) ತನ್ನ ಮಗಳಾದ ಉಮ್ಮೇ ಕುಲ್ಸುಮ್‌ರ ನಿಕಾಹ್ ಹಝ್ರತ್ ಉಸ್ಮಾನ್‌ರೊಂದಿಗೆ ಮಾಡಿಸಿದರು. ಅನಂತರ ಹಝ್ರತ್ ಪೈಗಂಬರ್(ಸ) ಸ್ವತಃ ಹಝ್ರತ್ ಹಫ್ಸರನ್ನು(ರ) ಮದುವೆ ಮಾಡುವುದಾಗಿ ಹಝ್ರತ್ ಉಮರ್‌ರಿಗೆ(ಸ) ಸಂದೇಶ ಕಳುಹಿಸಿದರು. ಇದಕ್ಕಿಂತ ಹೆಚ್ಚಾಗಿ ಹಝ್ರತ್ ಉಮರ್‌ರಿಗೆ ಏನು ಬೇಕಿತ್ತು? ಹಝ್ರತ್ ಉಮರ್(ರ) ಅತ್ಯಂತ ಖುಶಿಯಿಂದ ಈ ವೈವಾಹಿಕ ಸಂಬಂಧವನ್ನು ಅಂಗೀಕರಿಸಿದರು ಮತ್ತು ಹಿಜರೀ ಶಅ್‌ಬಾನ್ 3ರಂದು ಹಝ್ರತ್ ಹಫ್ಸರನ್ನು(ರ) ಹಝ್ರತ್ ಪೈಗಂಬರ್(ಸ) ನಿಕಾಹ್ ಮಾಡುವುದರ ಮೂಲಕ ಅವರು ಹಝ್ರತ್ ಪೈಗಂಬರರ(ಸ) ಪರಿಶುದ್ಧ ಪತ್ನಿಯರಲ್ಲಿ ಒಳಪಟ್ಟರು. ಈ ಮದುವೆ ನಡೆದಾಗ ಹಝ್ರತ್ ಉಮರ್‌ರೊಡನೆ ಹಝ್ರತ್ ಅಬೂಬಕರ್(ರ) ಹೇಳಿದರು: ನನ್ನ ಕಾರಣದಿಂದ ನಿಮಗೆ ಬಹುಶಃ ದುಃಖವಾಗಿರಬಹುದು. ಸಂಗತಿಯೇನೆಂದರೆ, ಹಝ್ರತ್ ಪೈಗಂಬರರ(ಸ) ನಿರ್ಧಾರದ ಬಗ್ಗೆ ನನಗೆ ಗೊತ್ತಿತ್ತು. ಆದರೆ ಹಝ್ರತ್ ಪೈಗಂಬರರ(ಸ) ಅನುಮತಿಯಿಲ್ಲದೆ ಈ ರಹಸ್ಯವನ್ನು ಬಯಲು ಮಾಡಲು ಸಾಧ್ಯವಿರಲಿಲ್ಲ. ಹಝ್ರತ್ ಪೈಗಂಬರರಿಗೆ(ಸ) ಈ ಉದ್ದೇಶವಿರದಿದ್ದರೆ, ನಾನು ಸಂತೋಷದಿಂದ ಹಫ್ಸರನ್ನು ಮದುವೆಯಾಗುತ್ತಿದ್ದೆ.

ಹಝ್ರತ್ ಪೈಗಂಬರ್(ಸ) ಹಝ್ರತ್ ಹಫ್ಸರನ್ನು ಮದುವೆ ಮಾಡಲು ಒಂದು ಕಾರಣವೇನೆಂದರೆ, ಹಝ್ರತ್ ಅಬೂಬಕರ್‌ರ(ಸ) ನಂತರ ಅತ್ಯಂತ ಶ್ರೇಷ್ಠರಾದ ಸಹಾಬಿ ಮತ್ತು ಹಝ್ರತ್ ಪೈಗಂಬರರ(ಸ) ಸಾಮೀಪ್ಯವನ್ನು ಪಡೆದ ಸಹಾಬಿ ಹಝ್ರತ್ ಉಮರ್(ರ) ಆಗಿದ್ದರು. ಆದ್ದರಿಂದ ಪರಸ್ಪರ ಸಂಬಂಧವನ್ನು ಹೆಚ್ಚು ಸುದೃಢಗೊಳಿಸಲು ಹಾಗೂ ಖುನೀಸ್ ಬಿನ್ ಹುಝಾಫರ ಅಸಮಯದ ಮರಣದಿಂದ ಹಝ್ರತ್ ಉಮರ್ ಮತ್ತು ಹಫ್ಸರಿಗೆ ಉಂಟಾದ ದುಃಖವನ್ನು ಪರಿಹರಿಸಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ಸ್ವತಃ ಹಝ್ರತ್ ಹಫ್ಸರನ್ನು ಮದುವೆ ಮಾಡುವುದು ಸರಿಯೆಂದು ತೀರ್ಮಾನಿಸಿದರು. ಅದರ ಬೇರೊಂದು ಯುಕ್ತಿ ಏನೆಂದರೆ, ಹಝ್ರತ್ ಪೈಗಂಬರರಿಗೆ(ಸ) ಹೆಚ್ಚು ಪತ್ನಿಯಂದಿರು ಇದ್ದಷ್ಟು ಅಷ್ಟೇ ಸುಲಭವಾಗಿ ಮತ್ತು ಉತ್ತಮವಾಗಿ ಇಸ್ಲಾಮಿನ ಪ್ರಚಾರ ಮತ್ತು ಶಿಕ್ಷಣದ ಕೆಲಸ ನಡೆಯುವುದು. ಏಕೆಂದರೆ ಸ್ತ್ರೀಯರು ಮನುಷ್ಯಕುಲದ ಅರ್ಧ ಭಾಗವಾಗಿದೆ, ಬೇರೊಂದು ರೀತಿಯಲ್ಲಿ ನೋಡುವುದಾದರೆ ಅರ್ಧಕ್ಕಿಂತ ಹೆಚ್ಚಿನ ಭಾಗವಾಗಿದೆ.

(ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಃಇಬ್ ಎಂ.ಎ, ಪುಟ–477–478)

ಉಹದ್ ಯುದ್ಧದಲ್ಲಿ ಹಝ್ರತ್ ಉಮರರ(ರ) ಬಗ್ಗೆ ಹೀಗೆ ಬರೆಯಲಾಗಿದೆ: ಉಹದ್ ಯುದ್ಧದ ಸಂದರ್ಭದಲ್ಲಿ ಖಾಲಿದ್ ಬಿನ್ ವಲೀದ್ ಮುಸ್ಲಿಮರ ಮೇಲೆ ಹಲ್ಲೆ ನಡೆಸಿದರು. ಈ ಅಚಾನಕ್ಕಾದ ಹಲ್ಲೆಯ ಕಾರಣದಿಂದ ಮುಸ್ಲಿಮರು ದಿಗ್ಭ್ರಮೆಗೊಂಡರು. ಅದಲ್ಲದೆ ಖುರೈಶಿಗಳ ಒಬ್ಬ ಶೂರನಾದ ಸೈನಿಕ ಅಬ್ದುಲ್ಲಾಹ್ ಬಿನ್ ಖುಮಿಅ ಮುಸ್ಲಿಮರ ಧ್ವಜವಾಹಕರಾದ ಹಝ್ರತ್ ಮುಸ್‌ಅಬ್ ಬಿನ್ ಉಮೈರ್‌ರ(ರ) ಮೇಲೆ ಹಲ್ಲೆ ನಡೆಸಿದನು. ಅದರಿಂದ ಅವರ ಬಲಗೈ ತುಂಡಾಯಿತು. ಮುಸ್‌ಅಬ್ ಬೇಗನೇ ತನ್ನ ಎಡಗೈಯಿಂದ ಧ್ವಜವನ್ನು ಹಿಡಿದರು. ಇಬ್ನು ಖುಮಿಅನನ್ನು ಎದುರಿಸಲು ಮುಂದಕ್ಕೇ ಧಾವಿಸಿದರು. ಆದರೆ ಖುಮಿಅ ಎರಡನೇ ಬಾರಿ ಹಲ್ಲೆ ನಡೆಸಿಕೊಂಡು ಎಡಗೈಯನ್ನೂ ತುಂಡರಿಸಿದನು. ಆಗ ಮುಸ್‌ಅಬ್ ಎರಡೂ ಮೊಣಕೈಗಳನ್ನು ಸೇರಿಸಿ ಇಸ್ಲಾಮಿನ ಧ್ವಜವನ್ನು ಹಿಡಿಯಲು ಪ್ರಯತ್ನಿಸಿದರು ಮತ್ತು ತನ್ನ ಎದೆಯೊಂದಿಗೆ ಸೇರಿಸಿ ಇರಿಸಿದರು. ಆಗ ಇಬ್ನು ಖುಮಿಅ ಮೂರನೇ ಬಾರಿ ಹಲ್ಲೆ ನಡೆಸಿ ಮುಸ್‌ಅಬ್‌ರನ್ನು ಶಹೀದ್ ಮಾಡಿದರು. ಧ್ವಜವನ್ನು ಬೇಗನೇ ಬೇರೊಬ್ಬ ಮುಸ್ಲಿಮನು ಹಿಡಿದನು. ಆದರೆ ಮುಸ್‌ಅಬ್‌ರ ಮೈಕಟ್ಟಿಗೆ ಹಝ್ರತ್ ಪೈಗಂಬರರ(ಸ) ಶರೀರದೊಂದಿಗೆ ಹೋಲಿಕೆಯಿತ್ತು. ಆದ್ದರಿಂದ ತಾನು ಹಝ್ರತ್ ಪೈಗಂಬರ್‌ರನ್ನು(ಸ) ವಧಿಸಿದ್ದೇನೆ ಎಂದು ಖುಮಿಅ ಭಾವಿಸಿದನು. ಅಥವಾ ಮೋಸಮಾಡಲು ಹಾಗೆ ಹೇಳಿರಲೂ ಬಹುದು. ಹೇಗಿದ್ದರೂ ಮುಸ್‌ಅಬ್ ಶಹೀದ್ ಆಗಿ ಬಿದ್ದಾಗ ಹಝ್ರತ್ ಪೈಗಂಬರ್‌ರನ್ನು(ಸ) ಶಹೀದ್ ಮಾಡಿದ್ದೇನೆ ಎಂದು ಅವನು ಗುಲ್ಲೇಬ್ಬಿಸಿದನು. ಈ ಸುದ್ದಿಯಿಂದ ಮುಸ್ಲಿಮರ ಬಾಕಿಯುಳಿದಿದ್ದ ಅಲ್ಪ ಸ್ವಲ್ಪ ಧೈರ್ಯವು ಕುಂದಿ ಹೋಯಿತು. ಮುಸ್ಲಿಮರ ದಂಡು ಚದುರಿ ಹೋಯಿತು. ಆದರೆ ಆ ಸಮಯದ ಪ್ರತ್ಯೇಕವಾದ ಪರಿಸ್ಥಿತಿಯ ಕಾರಣದಿಂದ ಮುಸ್ಲಿಮರ ವಿಶ್ವಾಸ ಮತ್ತು ನಿಷ್ಠೆಯನ್ನು ಮುಂದಿರಿಸುತ್ತಾ ಅಲ್ಲಾಹನು ಅವರನ್ನು ಕ್ಷಮಿಸಿದನು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ಹೇಳುತ್ತಾರೆ: ಆ ಸಮಯದಲ್ಲಿ ಮುಸ್ಲಿಮರು ಮೂರು ಭಾಗಗಳಾಗಿ ವಿಭಜಿಸಲ್ಪಟ್ಟಿದ್ದರು. ಹಝ್ರತ್ ಪೈಗಂಬರ್(ಸ) ಶಹೀದ್ ಆದರು ಎಂಬ ಸುದ್ದಿ ಕೇಳಿಕೊಂಡು ಒಂದು ಸಂಘ ಓಡಿಹೋಗಿತ್ತು. ಆದರೆ ಅದು ಅತ್ಯಂತ ಅಲ್ಪ ಸಂಖ್ಯೆಯಲ್ಲಿತ್ತು. ಇನ್ನೊಂದು ಸಂಘವು ಈ ಸುದ್ದಿಯನ್ನು ಕೇಳಿಕೊಂಡು ಧೈರ್ಯಗುಂದಿ ಕುಳಿತುಕೊಂಡಿತ್ತು ಮತ್ತು ಹೋರಾಟ ನಡೆಸುವುದು ವ್ಯರ್ಥವೆಂದು ಭಾವಿಸುತ್ತಿತ್ತು. ಮೂರನೇ ಸಂಘವು ನಿರಂತರವಾಗಿ ಯುದ್ಧ ಮಾಡುತ್ತಿತ್ತು. ಇದು ಮುಸ್ಲಿಮರಿಗೆ ಕಠಿಣವಾದ ಸತ್ವಪರೀಕ್ಷೆಯ ಸಮಯವಾಗಿತ್ತು. ನಿರಾಶೆಗೊಂಡು ಒಂದು ಬದಿಗೆ ಹೋಗಿ ಕುಳಿತುಕೊಂಡಿದ್ದ ಜನರಲ್ಲಿ ಹಝ್ರತ್ ಉಮರ್(ರ) ಕೂಡ ಇದ್ದರು. ಅಲ್ಲಿಗೆ ಅನಸ್ ಬಿನ್ ನಝ್ರ್ ಅನ್ಸಾರಿ

ಬಂದರು. ನೀವೆಲ್ಲರೂ ಇಲ್ಲಿ ಕುಳಿತುಕೊಂಡು ಏನು ಮಾಡುತ್ತಿದ್ದಿರಿ ಎಂದು ಅವರು ಕೇಳಿದರು. ಹಝ್ರತ್ ಪೈಗಂಬರ್(ಸ) ಶಹೀದ್ ಆದರು ಎಂದು ಅವರು ಹೇಳಿದರು. ಈಗ ಯುದ್ಧ ಮಾಡುವುದರಿಂದ ಏನು ಪ್ರಯೋಜನ? ಅನಸ್ ಹೇಳಿದರು: ಇದೇ ಯುದ್ಧ ಮಾಡಬೇಕಾದ ಸಮಯ. ಹಝ್ರತ್ ಪೈಗಂಬರರಿಗೆ(ಸ) ಲಭಿಸಿದ ಮರಣ ನಮಗೂ ಸಿಗಬೇಕು. ಅವರು ಇಲ್ಲದೇ ಜೀವಂತ ಇರುವುದರಲ್ಲಿ ಅರ್ಥವೇನಿದೆ? ನನಗಂತು ಪರ್ವತದಿಂದ ಸ್ವರ್ಗದ ಸುವಾಸನೆ ಬರುತ್ತಿದೆ. ಹೀಗೆ ಹೇಳುತ್ತಾ ಅನಸ್ ಶತ್ರುಗಳ ಪಂಕ್ತಿಗೆ ನುಗ್ಗಿದರು ಮತ್ತು ಹೋರಾಡುತ್ತಾ ಶಹೀದ್ ಆದರು. ಯುದ್ಧದ ನಂತರ ನೋಡಿದಾಗ ಅವರ ದೇಹದಲ್ಲಿ 80ಕ್ಕಿಂತ ಹೆಚ್ಚು ಗಾಯಗಳು ಆಗಿದ್ದುವು. ಅದು ಯಾರ ಮೃತದೇಹವೆಂದು ಗೊತ್ತಾಗುತ್ತಿರಲಿಲ್ಲ. ಕೊನೆಗೆ ಅವರ ಸಹೋದರಿ ಅವರ ಬೆರಳನ್ನು ನೋಡಿಕೊಂಡು ಗುರುತು ಹಚ್ಚಿದರು. ಹಝ್ರತ್ ಪೈಗಂಬರ್(ಸ) ಜೀವಂತವಾಗಿ ಇರುವರು ಎಂಬ ವಾರ್ತೆ ಈ ಜನರಿಗೆ ಲಭಿದುತ್ತಿದ್ದಂತೆ ಈ ಜನರು ಆವೇಶಭರಿತರಾಗಿ ಯುದ್ಧ ಮಾಡುತ್ತಾ ಹಝ್ರತ್ ಪೈಗಂಬರರ(ಸ) ಸುತ್ತ ಬಂದು ಸೇರಿದರು.

ಆ ಸಮಯದಲ್ಲಿ, ಬಹಳ ಅಪಾಯಕಾರಿ ಯುದ್ಧವು ನಡೆಯಿತು, ಮತ್ತು ಇದು ಮುಸ್ಲಿಮರಿಗೆ ದೊಡ್ಡ ಪ್ರಯೋಗ ಮತ್ತು ಕ್ಲೇಶದ ಸಮಯವಾಗಿತ್ತು. ಹೇಳಿದಂತೆ, ಪೈಗಂಬರ್(ಸ) ರ ಹುತಾತ್ಮತೆಯ ಸುದ್ದಿ ಕೇಳಿದ ನಂತರ, ಅನೇಕ ಸಹಾಬರವರು ತಮ್ಮ ಚೈತನ್ಯವನ್ನು ಕಳೆದುಕೊಂಡು ತಮ್ಮ ಆಯುಧಗಳನ್ನು ಎಸೆದು ಯುದ್ಧಭೂಮಿಯ ಒಂದು ಬದಿಗೆ ತೆರಳಿದ್ದರು. ಈ ಜನರಲ್ಲಿ ಹಝ್ರತ್ ಉಮರ್(ರ) ಕೂಡ ಇದ್ದರು. ಈ ಜನರು ಯುದ್ಧಭೂಮಿಯ ಒಂದು ಬದಿಯಲ್ಲಿ ಕುಳಿತಿದ್ದರು, ಅನಸ್ ಬಿನ್ ನಸರ್ ಅನ್ಸಾರಿ(ರ) ಎಂಬ ಸಹಾಬಿ ಆಗಮಿಸಿದಾಗ, ಅವರನ್ನು ನೋಡಿ ನೀವು ಇಲ್ಲಿ ಏನು ಮಾಡುತ್ತಿದ್ದೀರಿ? ಎಂದು ಹೇಳಲು ಪ್ರಾರಂಭಿಸಿದರು. ಅವರು ಉತ್ತರಿಸಿದರು, ಪೈಗಂಬರ್(ಸ)ರವರು ಹುತಾತ್ಮರಾಗಿದ್ದಾರೆ. ಈಗ, ಯುದ್ಧದಿಂದ ಏನನ್ನು ಗಳಿಸಬಹುದು? ಅದಕ್ಕೆ ಹಝ್ರತ್ ಅನಸ್(ರ) ಹೇಳಿದರು ಇದು ಯುದ್ಧದ ಸಮಯವಾಗಿದೆ, ಆದ್ದರಿಂದ ನಾವು ಪೈಗಂಬರ್(ಸ) ಸ್ವಾಧೀನಪಡಿಸಿಕೊಂಡ ಸಾವನ್ನು ಸಹ ಸಾಧಿಸಬಹುದು ಮತ್ತು ಪೈಗಂಬರ್(ಸ) ರ ನಿಧನದ ನಂತರ ಜೀವನದಲ್ಲಿ ಯಾವ ಆನಂದವಿದೆ? "ಆಗ ಸಅದ್ ಬಿನ್ ಮುಆಝ್(ರ) ಅವರ ಮುಂದೆ ಬಂದರು ಆಗ ಅವರು ಅಂದರೆ ಅನಸ್(ರ) ರವರು ಹೇಳಿದರು: ಸಅದ್! ನನಗೆ ಈ ಪರ್ವತದಿಂದ ಸ್ವರ್ಗದ ಸುಗಂಧದ ವಾಸನೆ ಬರುತ್ತಿದೆ. ಹೀಗೆ ಹೇಳೀದ ನಂತರ, ಅನಸ್(ರ) ಶತ್ರುಗಳ ಶ್ರೇಣಿಯನ್ನು ಭೇದಿಸಿ ಯುದ್ಧದಲ್ಲಿ ಹುತಾತ್ಮರಾದರು. ಯುದ್ಧದ ನಂತರ, ಅವರ ದೇಹವು ಎಂಭತ್ತಕ್ಕೂ ಹೆಚ್ಚು ಗಾಯಗಳನ್ನು ಅನುಭವಿಸಿದೆ ಎಂದು ಕಂಡುಬಂದಿದೆ ಮತ್ತು ಅವರ ಮೃತ ದೇಹವನ್ನು ಯಾರೂ ಗುರುತಿಸಲು ಸಾಧ್ಯವಾಗಲಿಲ್ಲ. ಅಂತಿಮವಾಗಿ, ಅವರ ಸಹೋದರಿ ಅವರ ಬೆರಳಿನ ಗುರುತಿನ ಮೂಲಕ ಅವರನ್ನು ಗುರುತಿಸಿದರು. (ಸೀರತ್ ಖತಮುನ್–ನಬಿಯಿನ್, ಹಝ್ರತ್ ಮಿರ್ಝ ಬಶೀರ್ ಅಹ್ಮದ್ (ರ), ಪುಟಗಳು 493–495)

ಉಹದ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ತಮ್ಮ ಕೆಲವು ಸಹಾಬರೊಂದಿಗೆ ಪರ್ವತದ ತಪ್ಪಲಿಗೆ ತಲುಪಿದಾಗ ಸತ್ಯನಿಷೇಧಿಗಳ ಒಂದು ಸಂಘ ಆ ಕಣಿವೆ ಮಾರ್ಗದಲ್ಲಿ ಆಕ್ರಮಣ ನಡೆಸಿದರು. ಅವರಲ್ಲಿ ಖಾಲಿದ್ ಬಿನ್ ವಲೀದ್ ಸಹ ಇದ್ದರು. ಆಗ ಹಝ್ರತ್ ಪೈಗಂಬರ್(ಸ) ಹೀಗೆ ದುಆ ಮಾಡಿದರು: **ಅಲ್ಲಾಹುಮ್ಮ ಇನ್ನಹೂ ಲಾ ಯನ್‌ಬಗೀ ಲಹುಮ್ ಅಂಯಲೂನ** "ಹೇ ಅಲ್ಲಾಹ್, ಈ ಜನರು ನಮ್ಮ ಸಮೀಪ ತಲುಪದಿರಲಿ". ಹೀಗೆ ಹಝ್ರತ್ ಉಮರ್(ರ) ಕೆಲವು ಮುಹಾಜಿರರ ಜೊತೆಗೆ ಮುಶ್ರಿಕರನ್ನು ಎದುರಿಸಿದರು ಮತ್ತು ಸದೆಬಡೆಯುತ್ತಾ ಅವರನ್ನು ಓಡಿಸಿದರು.
(ಸೀರತ್ ಇಬ್ನೆ ಹಿಶ್ಶಾಮ್, ಪುಟ–537, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2001)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಅಬೂಸುಫ್‌ಯಾನ್ ತನ್ನ ಕೆಲವು ಸಂಗಡಿಗರೊಂದಿಗೆ, ಮುಸ್ಲಿಮರು ಒಟ್ಟುಸೇರಿದ್ದ ಕಣಿವೆಯ ಭಾಗಕ್ಕೆ ಧಾವಿಸಿದರು ಮತ್ತು ದನಯೆತ್ತಿ ಹೀಗೆ ಕೇಳಿದರು: ಮುಸ್ಲಿಮರೇ, ನಿಮ್ಮಲ್ಲಿ ಮುಹಮ್ಮದ್ ಇದ್ದಾರೆಯೇ? ಯಾರೂ ಉತ್ತರಕೊಡಬಾರದೆಂದು ಹಝ್ರತ್ ಪೈಗಂಬರ್(ಸ) ನಿರ್ದೇಶಿಸಿದ್ದರು. ಅವನು ಅಬೂಬಕರ್(ರ) ಮತ್ತು ಉಮರರ(ಸ) ಬಗ್ಗೆ ಸಹ ಕೇಳಿದನು. ಹಝ್ರತ್ ಪೈಗಂಬರರ(ಸ) ನಿರ್ದೇಶನದ ಪ್ರಕಾರ ಯಾರೂ ಉತ್ತರ ಕೊಡಲಿಲ್ಲ. ಆಗ ಅಬೂಸುಫ್‌ಯಾನ್ ಉಚ್ಚ ಸ್ವರದಲ್ಲಿ ಜಂಭಕೊಚ್ಚುತ್ತಾ ಹೇಳಿದನು: ಇವರೆಲ್ಲೂ ಕೊಲ್ಲಲ್ಪಟ್ಟಿರುವರು. ಏಕೆಂದರೆ, ಇವರು ಜೀವಂತವಾಗಿ ಇರುತ್ತಿದ್ದರೆ ಉತ್ತರ ಕೊಡುತ್ತಿದ್ದರು. ಇದನ್ನು ಕೇಳಿಕೊಂಡು ಹಝ್ರತ್ ಉಮರ್‌ರಿಗೆ(ರ) ಸುಮ್ಮನೆ ಇರಲು ಆಗಲಿಲ್ಲ. ಅವರು ಫಕ್ಕನೆ ಹೀಗೆ ಹೇಳಿದರು: ಹೇ ಅಲ್ಲಾಹನ ಶತ್ರು, ನೀನು ಸುಳ್ಳು ಹೇಳುತ್ತಿದ್ದೀಯ. ನಾವು ಜೀವಂತವಾಗಿದ್ದೇವೆ ಮತ್ತು ಅಲ್ಲಾಹನು ನಮ್ಮ ಕೈಗಳಿಂದ ನಿಮ್ಮನ್ನು ನಿಂದಿಸುವನು. ಅಬೂಸುಫ್‌ಯಾನ್ ಹುಬುಲ್ ದೇವತೆಗೆ ಜೈಕಾರ ಹಾಕುತ್ತಾ "ಹುಬುಲಿನ ವೈಭವ ಎಷ್ಟು ಉನ್ನತವೆಂದು ಹೇಳಿದಾಗ, ಸ್ವಂತ ಹೆಸರು ಕರೆಯಲ್ಪಡುವಾಗಲೂ ಸುಮ್ಮನೆ ಇರಲು ಆಜ್ಞಾಪಿಸಿದ್ದ ಹಝ್ರತ್ ಪೈಗಂಬರ್(ಸ) ಈಗ ಅಲ್ಲಾಹನ ಎದುರಾಗಿ ವಿಗ್ರಹದ ಹೆಸರನ್ನು ಅಬೂಸುಫ್‌ಯಾನ್ ಕರೆದಾಗ ಅಸಮಾಧಾನಗೊಂಡು ಸಹಾಬರೊಡನೆ ನೀವೇಕೆ ಉತ್ತರ ಕೊಡುವುದಿಲ್ಲವೆಂದು ಕೇಳಿಕೊಂಡು ಹೀಗೆ ಹೇಳಿದರು: **'ಅಲ್ಲಾಹ್ ಅಅ್‌ಲಾ ವ ಅಜಲ್'.** ಎಂದರೆ ಔನತ್ಯ ಮತ್ತು ಶ್ರೇಷ್ಠತೆ ಅಲ್ಲಾಹನಿಗೆ ಮಾತ್ರ ಸಲ್ಲುತ್ತದೆ. ಅಬೂಸುಫ್‌ಯಾನ್ ಹೇಳಿದನು: 'ಲನಾ ಉಝ್ಝಾ ವಲಾ ಉಝ್ಝಾ ಲಕುಂ' ಎಂದರೆ, ನಮ್ಮೊಂದಿಗೆ ಉಝ್ಝಾ ಇದೆ ನಿಮ್ಮೊಂದಿಗೆ ಉಝ್ಝಾ ಇಲ್ಲ. ಹಝ್ರತ್ ಪೈಗಂಬರ್(ಸ) ಸಹಾಬರೊಡನೆ ಹೀಗೆ ಹೇಳಲು ಹೇಳಿದರು: **'ಅಲ್ಲಾಹು ಮೌಲಾನಾ ವಲಾ ಮೌಲಾ ಲಕುಂ'** ಎಂದರೆ, ಅಲ್ಲಾಹನು ನಮ್ಮ ಸಹಾಯಕ, ನಿಮಗೆ ಸಹಾಯಕರಾಗಿ ಯಾರೂ ಇಲ್ಲ. ಇದರ ನಂತರ, ಅಬು ಸುಫ್ಯಾನ್, 'ಯುದ್ಧವು ಒಂದು ತಕ್ಕಡಿನಂತಿದೆ, ಕೆಲವೊಮ್ಮೆ ಅದು ಏರುತ್ತದೆ ಮತ್ತು ಕೆಲವೊಮ್ಮೆ ಅದು ಬೀಳುತ್ತದೆ. ಈ ದಿನವನ್ನು ಬದ್ರ್‌ಗೆ ಪ್ರತಿಫಲವೆಂದು ಪರಿಗಣಿಸಿ. ಯುದ್ಧಭೂಮಿಯಲ್ಲಿ ನೀವು ಮಸ್‌ಲ(ಎಂದರೆ ಮೃತದೇಹಗಳನ್ನು ಕೊಚ್ಚಿ ಅದನ್ನು ಕ್ರೂರವಾಗಿ ಕಾಣಿಸುವ ಹಾಗೆ ಮಾಡುವುದು) ಮಾಡಿರುವಂತಹ ಮೃತದೇಹಗಳನ್ನು ಕಾಣುವಿರಿ. ನಾನು ಇದನ್ನು ಆದೇಶಿಸಲಿಲ್ಲ, ಆದರೆ ನನಗೆ ಅದರ ಬಗ್ಗೆ ತಿಳಿದುಬಂದಾಗ, ನನ್ನ ಪುರುಳರ ಈ ಕೃತ್ಯವನ್ನು ನನಗೆ ಕೆಟ್ಟದು ಎಂದು ಎನಿಸಲಿಲ್ಲ. ಮುಂದಿನ ವರ್ಷ, ನಾವು ಇದೇ ದಿನಗಳಲ್ಲಿ ಮತ್ತೆ ಬದ್ರ್‌ನಲ್ಲಿ ಭೇಟಿಯಾಗುತ್ತೇವೆ ಎಂದು ವಾಗ್ದಾನ ಮಾಡಿದನು. ಓರ್ವ ಸಹಬಿಯು ಪೈಗಂಬರ್(ಸ) ರ ಸೂಚನೆಯಂತೆ ಉತ್ತರ ನೀಡಿದರು ಉತ್ತಮ ಹಾಗಾದರೆ ನಾವು ವಾಗ್ದಾನ ಮಾಡುತ್ತೇವೆ. ಇದನ್ನು ಹೇಳಿದ ನಂತರ ಅಬು ಸುಫ್ಯಾನ್ ತನ್ನ ಅನುಯಾಯಿಗಳೊಂದಿಗೆ ಇಳಿದು ಬೇಗನೆ, ಖುರೈಶ್ ಸೈನ್ಯವು ಮಕ್ಕದ ಕಡೆ ರವಾನೆಯಾಯಿತು. (ಸೀರತ್ ಖಾತಮುನ್–ನಬಿಈನ್, ಹಝ್ರತ್ ಮಿರ್ಝ ಬಶೀರ್ ಅಹ್ಮದ್(ರ), ಪುಟಗಳು 498–499)

ಉಹದ್ ಯುದ್ಧದ ನಂತರ ಹಝ್ರತ್ ಪೈಗಂಬರ್(ಸ) ಮದೀನಕ್ಕೆ ತಲುಪಿದಾಗ ಕಪಟವಿಶ್ವಾಸಿಗಳು ಮತ್ತು ಯಹೂದಿಗಳು ಹೀಗೆ ಹೇಳಿಕೊಂಡು ಖುಶಿಪಡುತ್ತಿದ್ದರು: ಮುಹಮ್ಮದ್ ಅರಸನಾಗಲು ಬಯಸುತ್ತಾರೆ. ಅವರಿಗಾದಂತಹ ನಷ್ಟ ಪ್ರವಾದಿಗಳಲ್ಲಿ ಯಾರಿಗೂ ಉಂಟಾಗಿಲ್ಲ. ಅವರು ಮತ್ತು ಅವರ ಸಹಾಬರವರು ಗಾಯಗೊಂಡಿದ್ದಾರೆ. ಅದೇ ರೀತಿ ಹೀಗೂ ಹೇಳುತ್ತಿದ್ದರು (ಯುದ್ಧದ ಸಮಯದಲ್ಲಿ) ಕೊಲ್ಲಲ್ಪಟ್ಟವರು ನಮ್ಮೊಂದಿಗೆ ಉಳಿದಿದ್ದರೆ, ಅವರು ಕೊಲ್ಲಲ್ಪಡುತ್ತಿರಲಿಲ್ಲ. ಈ ಕಪಟವಿಶ್ವಾಸಿಗಳನ್ನು ಕೊಲ್ಲಲಿಕ್ಕಾಗಿ ಹಝ್ರತ್ ಪೈಗಂಬರ್‌ರೊಡನೆ(ಸ) ಹಝ್ರತ್ ಉಮರ್(ರ) ಅನುಮತಿ ಕೇಳಿದರು. ಆದರೆ ಕಲಿಮ ಹೇಳುವವರನ್ನು ಕೊಲ್ಲುವುದನ್ನು ನಿಷೇಧಿಸಲಾಗಿದೆ ಎಂದು ಹಝ್ರತ್ ಪೈಗಂಬರ್(ಸ) ಉತ್ತರಿಸಿದರು. ಇದರ ನಂತರ, ಹಝ್ರತ್ ಉಮರ್(ರ) ಹೇಳಿದರು: ನಿಜಕ್ಕೂ ಅವರು ಹಾಗೆ ಮಾಡುತ್ತಾರೆ, ಆದರೆ ಇದರ ಜೊತೆಗೆ ಅವರು ಕಪಟ ರೀತಿಯಲ್ಲಿ ಮಾತನಾಡುತ್ತಾರೆ. ಕತ್ತಿಯ ಭಯದಿಂದಾಗಿ ಅವರು (ಕಾಲಿಮಾ) ಮಾತ್ರ ಪಠಿಸುತ್ತಾರೆ. ಹೀಗಾಗಿ, ಅವರ ವಿಳಯವು ಸ್ಪಷ್ಟವಾಗಿದೆ ಮತ್ತು ಅವರ ಹೃದಯದಲ್ಲಿ ಅಡಗಿರುವ ಸಂಗತಿಗಳು ಬಹಿರಂಗಗೊಂಡಿವೆ ಮತ್ತು ಸರ್ವಶಕ್ತನಾದ ಅಲ್ಲಾಹನು ಅವರು ತಮ್ಮ ಹೃದಯದಲ್ಲಿ ಹೊಂದಿರುವ ದುರುದ್ದೇಶವನ್ನು ಬಹಿರಂಗಪಡಿಸಿದ್ದಾನೆ. ಆದ್ದರಿಂದ, ನಾವು ಅವರನ್ನು ಶಿಕ್ಷಿಸಬೇಕು. ಪೈಗಂಬರ್(ಸ) ಹೇಳಿದರು "ಕಲೀಮಾ ಪಠಿಸುವ ಯಾರನ್ನೂ ಕೊಲ್ಲಲು ನನಗೆ ನಿಷೇಧಿಸಲಾಗಿದೆ"

(ಅಸ್ಸೀರತುಲ್ ಹಲಬೀಯ, ಸಂಪುಟ–2, ಪುಟ–348, ಬೈರುತ್, ಲೆಬನಾನ್: ದಾರ್ ಅಲ್–ಕುತುಬ್ ಅಲ್–ಇಲ್ಮಿಯಾಹ್, 2002)

ಅಂದರೆ, ಕಲಿಮಾವನ್ನು ಪಠಿಸುವ ಯಾರನ್ನೂ ಕೊಲ್ಲುವುದನ್ನು ನಿಷೇಧಿಸಲಾಗಿದೆ ಎಂದು ಪಯಗಂಬರ್(ಸ) ಹೇಳಿದರು. ಹಝ್ರತ್ ಉಮರ್‌ರ(ರ) ಬಗ್ಗೆಗಿನ ಪ್ರಸ್ತಾಪ ಮುಂದುವರೆಸಲಾಗುವುದು. ಇನ್‌ಶಾಅಲ್ಲಾಹ್. ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸಲಿಕ್ಕಿದೆ. ಆದ್ದರಿಂದ ಇದನ್ನು ಇಲ್ಲಿ ನಿಲ್ಲಿಸುತ್ತೇನೆ.

ಆದರೆ ಅದಕ್ಕಿಂತ ಮುಂಚೆ ದುಆಗಾಗಿ ಸಹ ವಿನಂತಿಸುತ್ತೇನೆ. ಪೀಡಿತರಾದ ಪೆಲಸ್ತೀನಿಯರಿಗಾಗಿ ದುಆ ಮಾಡಬೇಕೆಂದು ಕಳೆದ ವಾರ ಸಹ ನಾನು ಹೇಳಿದ್ದೆ. ಈಗ ಯುದ್ಧ ಸ್ಥಗಿತಗೊಂಡಿದ್ದರೂ ಕೆಲವು ಕಾಲದ ನಂತರ ಎಲ್ಲಿಂದಾದರೂ, ಯಾವುದಾದರೂ ರೀತಿಯಲ್ಲಿ, ಏನಾದರೂ ನೆಪವನ್ನು ಮಾಡಿಕೊಂಡು ಶತ್ರುಗಳು ಪೀಡಿತರಾದ ಪೆಲಸ್ತೀನರನ್ನು ದೌರ್ಜನ್ಯಕ್ಕೆ ಗುರಿಪಡಿಸುತ್ತಾರೆ ಎಂದು ಚರಿತ್ರೆಯಿಂದ ನಮಗೆ ತಿಳಿದುಬರುತ್ತದೆ. ಅಲ್ಲಾಹನು ಕರುಣೆ ತೋರಿಸಲಿ ಮತ್ತು ಪೆಲಸ್ತೀನಿಯರಿಗಾಗಿ ಕೂಡ ಯಥಾರ್ಥ ಸ್ವಾತಂತ್ರವನ್ನು ಲಭಿಸುವಂತಾಗಲಿ. ಬುದ್ಧಿ ಮತ್ತು ತೀಕ್ಷ್ಣಗ್ರಹಿಕೆ ಹೊಂದಿರುವ ತಮ್ಮ ಮಾತನ್ನು ಪ್ರಬಲವಾಗಿ ಮುಂದಿರಿಸುವ ಹಾಗೂ ತಮ್ಮ ಹಕ್ಕನ್ನು ಪಡೆಯುವ ನೇತಾರರನ್ನು ಅಲ್ಲಾಹನು ಪೆಲಸ್ತೀನಿಯರಿಗೆ ನೀಡಲಿ. ಅದೇ ರೀತಿಯಲ್ಲಿ ಅಹ್ಮದಿಯರಿಗಾಗಿಯೂ

ವಿಶೇಷವಾಗಿ ಪಾಕಿಸ್ತಾನದಲ್ಲಿ ದೌರ್ಜನ್ಯಕ್ಕೆ ಗುರಿಯಾಗುತ್ತಿರುವ ಅಹ್ಮದಿಯರಿಗಾಗಿ ದುಆ ಮಾಡಿರಿ. ಅವರನ್ನು ಅಲ್ಲಾಹನು ಸಂರಕ್ಷಿಸಲಿ.

ಜನಾಝಗಳಲ್ಲಿ ಮೊದಲ ಪ್ರಸ್ತಾಪ ಖಾದಿಯಾನಿನ ನಾಇಬ್ ನಶ್‌ರೋ ಇಶಾಅತ್ ಆದ ಖುರೈಶಿ ಮುಹಮ್ಮದ್ ಫಝ್‌ಲುಲ್ಲಾಹ್ ಸಾಹಿಬ್‌ರದ್ದಾಗಿದೆ. 27 ಎಪ್ರಿಲ್‌ಗೆ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ತಾಯಿಯ ತಾತ ಮತ್ತು ತಂದೆಯ ತಾತರಾದ ಹಝ್ರತ್ ಮುನ್ಷಿ ಮೆಹರ್‌ದೀನ್ ಸಾಹಿಬ್(ರ) ಹಝ್ರತ್ ಮಸೀಹ್ ಮೌಊದ್‌ರ(ಅ) ಸಹಾಬಿಯಾಗಿದ್ದರು. ಅವರ ಮೂಲಕ ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಪ್ರವೇಶಿಸಿತ್ತು. ಮಿನಾರತುಲ್ ಮಸೀಹ್ ನಿರ್ಮಾಣಕ್ಕೆ ಚಂದಾ ನೀಡಿದವರ ಹೆಸರುಗಳಲ್ಲಿ ಸಹ ಅವರ ಹೆಸರು ನಮೂದಿಸಲಾಗಿದೆ.

ಖುರೈಶಿ ಫಝ್‌ಲುಲ್ಲಾಹ್ ಸಾಹಿಬ್‌ರು ಜಾಮಿಅ ಅಹ್ಮದಿಯಾದಿಂದ ತೇರ್ಗಡೆಯಾದ ನಂತರ 23 ವರ್ಷಗಳು ಮತ್ತು ಐದು ತಿಂಗಳಷ್ಟು ಜಾಮಿಅ ಅಹ್ಮದಿಯಾದಲ್ಲಿ ಉಸ್ತಾದ್ ಆಗಿ ಸೇವೆ ಸಲ್ಲಿಸಿದರು. ಪವಿತ್ರ ಖುರ್‌ಆನ್, ಉರ್ದು ಸಾಹಿತ್ಯ, ಅರಬಿ ವ್ಯಾಕರಣ, ಅರಬಿ ಸಾಹಿತ್ಯ ಇತ್ಯಾದಿ ವಿಷಯಗಳನ್ನು ಕಲಿಸುತ್ತಿದ್ದರು. ಅವರ ಒಟ್ಟು ಸೇವೆಯ ಕಾಲಾವಧಿ 37 ವರ್ಷಗಳು ಮತ್ತು ಏಳು ತಿಂಗಳಷ್ಟು ಆಗುತ್ತದೆ. ಅಲ್ಲಾಹನ ಅನುಗ್ರಹದಿಂದ ದಿವಂಗತರು ವಸಿಯ್ಯತ್ ಮಾಡಿದ್ದರು. ದಿವಂಗತರು ಪತ್ನಿ, ಒಬ್ಬ ಪುತ್ರ ಮತ್ತು ಇಬ್ಬರು ಪುತ್ರಿಯರನ್ನು ಅಗಲಿರುವರು.

ಅವರ ಬಗ್ಗೆ ನಾಝಿರ್ ನಶ್ರೋ ಇಶಾಅತ್ ಆದ ಮಖ್‌ದೂಂ ಸಾಹಿಬ್ ಬರೆಯುತ್ತಾರೆ: ಬಹಳ ಕೃಪಾಳು ಅಧ್ಯಾಪಕರಾಗಿದ್ದರು. ವಿದ್ಯಾರ್ಥಿಗಳೊಂದಿಗೆ ಬಹಳ ಪ್ರೀತಿ ಮತ್ತು ಸ್ನೇಹದಿಂದ ವರ್ತಿಸುತ್ತಿದ್ದರು. ಬಹಳ ಪ್ರಾಮಾಣಿಕವಾಗಿ ವಖ್‌ಫಿನ ಸ್ಫೂರ್ತಿಯೊಂದಿಗೆ ಸದಾ ಕೆಲಸ ಮಾಡಿದ್ದರು. ಸಮಯ ಪಾಲನೆ ಮಾಡುತ್ತಿದ್ದರು ಮತ್ತು ವಿದ್ಯಾರ್ಥಿಗಳಿಗೂ ಸಮಯನಿಷ್ಠೆಯನ್ನು ಕಲಿಸಿದ್ದರು. ಭಾರತದ ಹೆಚ್ಚಿನ ಮುಬಲ್ಲಿಗರು ಅವರ ವಿದ್ಯಾರ್ಥಿಗಳಾಗಿರುವರು ಮತ್ತು ಅವರಿಂದ ಪ್ರಯೋಜನ ಪಡೆದಿದ್ದರು. ಬಹಳ ಸರಳ ಸ್ವಭಾವದವರಾಗಿದ್ದರು. ಮಿತಭಾಷಿಯಾಗಿದ್ದರು. ಆದರೆ ಬಹಳ ಜ್ಞಾನಭರಿತವಾಗಿ ಮತ್ತು ಪ್ರಬಲವಾದ ರೀತಿಯಲ್ಲಿ ಮಾತನಾಡುತ್ತಿದ್ದರು. ಭಾರತದ ನಾಇಬ್ ಸದರ್ ಖುದ್ದಾಮುಲ್ ಅಹ್ಮದಿಯಾ ಆಗಿ ಸಹ ಸೇವೆ ಸಲ್ಲಿಸಿದ್ದರು. 34 ವರ್ಷಗಳಷ್ಟು ದೀರ್ಘ ಕಾಲದ ವರೆಗೆ ಬದ್ರ್ ವಾರಪತ್ರಿಕೆಯ ನಾಇಬ್ ಎಡಿಟರ್ ಆಗಿ ಸೇವೆ ಸಲ್ಲಿಸಿದ್ದರು. ಮಿಶ್ಕಾತ್‌ನ ಎಡಿಟರ್ ಸಹ ಆಗಿದ್ದರು. ಭಾರತದ ಅಹ್ಮದಿಯಾ ಚರಿತ್ರೆಯ ಕಮಿಟಿಯ ಮೆಂಬರ್ ಸಹ ಆಗಿದ್ದರು. ರೂಹಾನಿ ಖಝಾಇನಿನ ಕಂಪ್ಯೂಟರ್ ಎಡಿಶನ್ ಪ್ರಕಾಶನಗೊಂಡಾಗ ಅವರು ಅದರ ಪ್ರೂಫ್ ರೀಡಿಂಗ್ ಮಾಡಿಕೊಂಡು ಕೆಲವು ತಪ್ಪುಗಳನ್ನು ತಿದ್ದಿದ್ದರು. ಅನಂತರ ಅದನ್ನು ಸರಿಪಡಿಸಲಾಗಿತ್ತು. ಬಹಳ ಸೂಕ್ಷ್ಮತೆಯಿಂದ ಪ್ರೂಫ್ ರೀಡಿಂಗ್ ಮಾಡುತ್ತಿದ್ದರು. ಅವರು ಆರ್ಯಧರ್ಮ ಮತ್ತು ಸತ್‌ಬಚನಿನ ರೆಫರೆನ್ಸ್‌ಗಳನ್ನು ಬಹಳ ಪರಿಶ್ರಮದಿಂದ ಹುಡುಕಿ ಅವಲೋಕಿಸಿ, ಪರಿಶೀಲಿಸಿದ್ದರು. ಅವರು ಹೀಗೆ ಹೇಳುತ್ತಿದ್ದರು: ಹಝ್ರತ್ ಮಸೀಹ್ ಮೌಊದ್‌ರ(ಅ) ಈ ಎರಡು ಪುಸ್ತಕಗಳನ್ನು ಹಿಂದುಗಳಿಗೆ ಮತ್ತು ಸಿಖ್ಖರಿಗೆ ಸಾಕ್ಷ್ಯಾಧಾರವಾಗಿ ಮುಂದಿರಿಸಲಾಗುತ್ತದೆ. ಆದ್ದರಿಂದ ಈ ಎರಡೂ ಪುಸ್ತಕಗಳು ಈ ಎರಡೂ ಧರ್ಮಗಳ ಬಗ್ಗೆ ಇರುವ ಬಹಳ ಮುಖ್ಯವಾದ ಪುಸ್ತಕಗಳಾಗಿವೆ. ಆದ್ದರಿಂದ ಬಹಳ ಸೂಕ್ಷ್ಮತೆಯಿಂದ ಇವುಗಳನ್ನು ಚೆಕ್ ಮಾಡಬೇಕು ಮತ್ತು ಅದರ ರೆಫರೆನ್ಸ್‌ಗಳನ್ನು ಸರಿಪಡಿಸಬೇಕು ಎಂದು ಅವರು ಹೇಳುತ್ತಿದ್ದರು.

ಈಗ ಪ್ರಕಾಶನಗೊಂಡಿರುವ ಮಂರಝೂರ್ ಲಿಪಿಯ ಪವಿತ್ರ ಖುರ್‌ಆನಿನ ಸಾಫ್ಟ್‌ವೇರಿನ ತಯಾರಿಯಲ್ಲೂ ಅವರು ಬಹಳ ಸೇವೆ ಸಲ್ಲಿಸಿದ್ದರು. ದಿನರಾತ್ರಿ ಅವರು ಅದರ ಸುಧಾರಣೆ ಮತ್ತು ತಿದ್ದುವಿಕೆಗಾಗಿ ಕೆಲಸ ಮಾಡಿದ್ದರು. ಈಗ ಹಝ್ರತ್ ಮೌಲವಿ ಶೇರ್ ಅಲಿ ಸಾಹಿಬ್‌ರ ಪವಿತ್ರ ಖುರ್‌ಆನಿನ ಆಂಗ್ಲ ತರ್ಜುಮೆ ಮತ್ತು ಹಝ್ರತ್ ಮೀರ್ ಇಸ್‌ಹಾಖ್ ಸಾಹಿಬ್‌ರ ಉರ್ದು ತರ್ಜುಮೆಯ ತಯಾರಿಯಲ್ಲೂ ಅವರು ಬಹಳ ಕೆಲಸ ಮಾಡಿದ್ದರು. ಈಗ ಮಂರಝೂರ್ ಲಿಪಿಯ ಸಾದಾ ಪವಿತ್ರ ಖುರ್‌ಆನ್ ಪ್ರಕಾಶನಗೊಂಡಿದೆ.

ಖಾದಿಯಾನಿನ ನಾಝಿರ್ ಸಾಹಿಬ್ ಇಶಾಅತ್ ಬರೆಯುತ್ತಾರೆ: ಅವರು ನನ್ನ ಅಧ್ಯಾಪಕರೂ ಆಗಿದ್ದರು. ನನ್ನ ಪತ್ನಿಯ ಮಾವ ಸಹ ಆಗಿದ್ದರು. ಆದರೂ ನನ್ನ ನಾಇಬ್ ಎಂಬ ನೆಲೆಯಲ್ಲಿ ಸದಾ ಅನುಸರಣೆ ಮತ್ತು ಬಹಳ ವಿನಯದ ಸ್ಫೂರ್ತಿಯೊಂದಿಗೆ ಮಾತನಾಡುತ್ತಿದ್ದರು. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಎರಡನೇ ಜನಾಝ ಮುಬಲ್ಲಿಗ್‌ರಾದ ಸಯ್ಯದ್ ಬಶೀರುದ್ದೀನ್ ಅಹ್ಮದ್ ಸಾಹಿಬ್‌ರದ್ದಾಗಿದೆ. ಇವರು ಸಹ ಖಾದಿಯಾನಿನವರಾಗಿದ್ದರು. 83 ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಸಯ್ಯದ್ ಸಯ್ಯದುದ್ದೀನ್ ಸಾಹಿಬ್ ಹಝ್ರತ್ ಮಸೀಹ್ ಮೌಊದ್‌ರ(ಅ) ಸಹಾಬಿಯ ಮೊಮ್ಮಗರಾಗಿದ್ದರು. ಬಹಳ ಹೆಚ್ಚು ಆರಾಧನೆ ಮಾಡುವವರೂ ತಹಜ್ಜುದ್ ನಿರ್ವಹಿಸುವವರೂ ದುಆ ಮಾಡುವವರೂ ಸರಳ ಸ್ವಭಾವಿಯೂ ಆದ ವ್ಯಕ್ತಿಯಾಗಿದ್ದರು. ದಿವಂಗತರು ಮೂಸಿ ಸಹ ಆಗಿದ್ದರು. ದಿವಂಗತರು ಮೂವರು ಗಂಡುಮಕ್ಕಳನ್ನು ಅಗಲಿರುವರು. ಮೂವರು ಮಕ್ಕಳೂ ಅಂಜುಮನಿನ ಆಫೀಸಲ್ಲಿ ಕೆಲಸ ಮಾಡುತ್ತಿದ್ದಾರೆ.

ಮುಂದಿನ ಜನಾಝ ಖಾದಿಯಾನಿನ ವಖ್‌ಫೇ ಝಿಂದಗಿಯಾದ ಬಶಾರತ್ ಅಹ್ಮದ್ ಸಾಹಿಬ್ ಹೈದರ್‌ದ್ದಾಗಿದೆ. ಅವರು ಫೈಝ್ ಅಹ್ಮದ್ ಶಾಹ್‌ನರ ಮಗನಾಗಿದ್ದರು. 71 ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಇವರು ಹಝ್ರತ್ ಮಸೀಹ್ ಮೌಊದ್‌ರ(ಅ) ಸಹಾಬಿಯಾದ ಹಝ್ರತ್ ಅಬ್ದುಲ್‌ಕರೀಂ ಸಾಹಿಬ್‌ರ ಮೊಮ್ಮಗರಾಗಿದ್ದರು. ಹುಚ್ಚು ನಾಯಿ ಕಚ್ಚಿದ ಕಾರಣದಿಂದ ರೋಗಗ್ರಸ್ತರಾಗಿ ಹಝ್ರತ್ ಮಸೀಹ್ ಮೌಊದ್‌ರ ದುಆದ ದೃಷ್ಟಾಂತದ ಫಲವಾಗಿ ರೋಗದಿಂದ ಮುಕ್ತರಾದ ಸಹಾಬಿ ಇವರೇ ಆಗಿದ್ದರು. ಬಶಾರತ್ ಹೈದರ್ ಸಾಹಿಬ್‌ರು ಜೀವಿತವನ್ನು ವಖ್ಫ್ ಮಾಡಿಕೊಂಡು ಕರ್ನಾಟಕದಿಂದ ಖಾದಿಯಾನಿಗೆ ಬಂದಿದ್ದರು. ಅನಂತರ ಮದ್ರಸಾ ಅಹ್ಮದಿಯಾದಿಂದ ತೇರ್ಗಡೆಯಾಗಿ ಹಲವು ಆಫಿಸ್‌ಗಳಲ್ಲಿ ಕೆಲಸ ಮಾಡಿದ್ದರು. ಅನಂತರ ರಿಶ್ತನಾತ ಇಂಚಾರ್ಜ್ ಆಗಿ ನಿಶ್ಚಯಿಸಲ್ಪಟ್ಟರು. ಅಲ್ಲಿ ಸೇವೆ ಸಲ್ಲಿಸಿದರು. 46 ವರ್ಷಗಳ ಕಾಲ ಜಮಾಅತಿನ ಸೇವೆ ಸಲ್ಲಿಸಿದರು. ವರಮಾನ ಕಡಿಮೆಯಿದ್ದರೂ ಬಹಳ ಸಭ್ಯತೆಯಿಂದಲೂ ಸರಳತೆಯಿಂದಲೂ ಜೀವಿತವನ್ನು ಸಾಗಿಸಿದ್ದರು. ಬಹಳ ಸುಸ್ವಭಾವಿ ಮತ್ತು ಮರ್ಯಾದಸ್ಥರಾದ ವ್ಯಕ್ತಿಯಾಗಿದ್ದರು. ದಿವಂಗತರು ಮೂಸಿಯಾಗಿದ್ದರು. ಪತ್ನಿಯಲ್ಲದೆ ಮೂವರು ಪುತ್ರಿಯರಿದ್ದಾರೆ. ಅವರಿಗೆ ಉತ್ತಮ ಶಿಕ್ಷಣವನ್ನೂ ಒದಗಿಸಿ ಕೊಟ್ಟರು ಮತ್ತು ಎಲ್ಲರನ್ನು ವಖ್‌ಫೇ ಝಿಂದಗಿಗಳಿಗೆ ವಿವಾಹ ಮಾಡಿಸಿಕೊಟ್ಟರು.

ಪಿಶಾವರ್ ಜಿಲ್ಲೆಯ ಜಮಾಅತ್ ಅಮೀರ್ ಆದ ಸನ್ಮಾನ್ಯ ಡಾಕ್ಟರ್ ಮುಹಮ್ಮದ್ ಅಲಿ ಸಾಹಿಬ್‌ರದ್ದಾಗಿದೆ. 76ನೇ ವಯಸ್ಸಿನಲ್ಲಿ ಕಳೆದ ತಿಂಗಳು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಎಫ.ಎಸ್.ಸಿ.ಯ ವಿದ್ಯಾರ್ಥಿಯಾಗಿದ್ದಾಗ ಸ್ವತಃ ಬೈಅತ್ ಮಾಡಿದ್ದರು. ಅವರು ಹೇಳುತ್ತಾರೆ: ದೊಡ್ಡಪ್ಪರ ಅಂಗಡಿಯಲ್ಲಿ ನಾನು ಕುಳಿತುಕೊಂಡಿದ್ದೆ. ಬಹಳ ಆದರಣೀಯವಾದ ಒಬ್ಬ ವ್ಯಕ್ತಿ ಅಲ್ಲಿಗೆ ಬಂದು ಹೋದರು. ಅವರು ಖಾದಿಯಾನಿಯಾಗಿದ್ದರು. ಖಾದಿಯಾನಿಗಳು ತುಂಬ ಒಳ್ಳೆಯವರು ಎಂದು ದೊಡ್ಡಪ್ಪ ನನ್ನೊಡನೆ ಹೇಳಿದರು. ಜಮಾಅತಿನ ಬಗ್ಗೆ ಉಂಟಾದ ಮೊದಲ ಪರಿಚಯ ಇದಾಗಿತ್ತು. ಅನಂತರ ಮೆಡಿಕಲ್ ಕಾಲೇಜಿನಲ್ಲಿ ಒಬ್ಬ ಸಹಪಾಠಿ ಅಹ್ಮದಿಯಾಗಿದ್ದರು. ಹಝ್ರತ್ ಈಸಾರ ಬಗ್ಗೆ ನಿನ್ನ ಅಭಿಪ್ರಾಯವೇನೆಂದು ಅವರು ನನ್ನೊಡನೆ ಕೇಳಿದರು. ಅವರು ಮೃತಪಟ್ಟಿರುವರು ಎಂಬುದಾಗಿ ನಾನು ನಂಬುತ್ತೇನೆ ಎಂದು ನಾನು ಹೇಳಿದೆ. ನನಗೆ ತಬ್ಲೀಗ್ ಮಾಡಬೇಕೆಂದು ಅವರಿಗೆ ಅನಿಸಿತು. ನನ್ನನ್ನು ಜಮಾಅತಿನ ಮಿಶನ್ ಹೌಸಿಗೆ ಕರೆದುಕೊಂಡು ಹೋದರು. ಅಲ್ಲಿ ಬಶಾರತ್ ಸಿಂಧಿ ಸಾಹಿಬ್ ಎಂಬ ಹೆಸರಿನ ಮುರಬ್ಬಿ ಸಾಹಿಬ್‌ರು ಇದ್ದರು. ಅವರನ್ನು ನೋಡಿಕೊಂಡು ನಾನು ಪ್ರಭಾವಿತನಾದೆ. ಹೇಗಿದ್ದರೂ ಅವರು ನನಗೆ ದಾವತೇ ಅಮೀರ್ ಎಂಬ ಗ್ರಂಥವನ್ನು ಓದಲು ನೀಡಿದರು. ಅದನ್ನು ಓದಿ ಮುಗಿಸಿದ ಕೂಡಲೇ ಅಹ್ಮದಿಯ್ಯತ್ ಸತ್ಯವೆಂದು ನನಗೆ ದೃಢವಿಶ್ವಾಸವುಂಟಾಯಿತು. 1973ರಲ್ಲಿ ಮುಹಮ್ಮದ್ ಅಲಿ ಸಾಹಿಬ್‌ರು ಬೈಅತ್ ಮಾಡಿದರು. 1974ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ಅವರ ಬೈಅತ್ ಸ್ವೀಕರಿಸಿದರು. 1974ರಲ್ಲಿ ಗಲಭೆ ಸಹ ಶುರುವಾಯಿತು. ಅಹ್ಮದಿಯ್ಯತನ್ನು ತ್ಯಜಿಸಲು ಕಾಲೇಜಿನ ಹುಡುಗರು ಒಟ್ಟುಸೇರಿ ಒತ್ತಾಯಿಸಿದರು. ಹೇಗಿದ್ದರು ಕಾಲೇಜಿನ ವ್ಯವಸ್ಥೆಗೆ ಏನೂ ಮಾಡಲು ಸಾಧ್ಯವಾಗಲಿಲ್ಲ. ಆ ಕಾಲದಲ್ಲಿ ಯೂನಿವರ್ಸಿಟಿಯ ಚಾನ್ಸಲರ್ ಆಗಿದ್ದ ಅಲಿ ಖಾನ್ ಎಂಬವರು ಅಲ್ಲಿಗೆ ಬಂದರು. ಅವರು ಹುಡುಗರಿಂದ ಅವರನ್ನು ಬಿಡಿಸಿಕೊಂಡು ತನ್ನ ವಾಹನದಲ್ಲಿ ಸವಾರ ಮಾಡಿಸಿ ಪಟ್ಟಣದಿಂದ ಹೊರಗೆ ಬಿಟ್ಟುಬಂದರು. ಅವರು ಕಾಲ್ನಡಿಗೆಯಾಗಿ ಪಾದರಕ್ಷೆ ಕೂಡ ಇಲ್ಲದೆ ಗ್ರಾಮಕ್ಕೆ ತಲುಪಿದರು. ಅವರ ತಂದೆ ಅವರೊಡನೆ ಹೇಳಿದರು: ನೀನು ನಿನ್ನನ್ನೇ ಕಷ್ಟದಲ್ಲಿ ಹಾಕುತ್ತಿದ್ದೀಯ ಮತ್ತು ನಮಗೂ ಕೆಟ್ಟ ಹೆಸರು ತರುತ್ತಿದ್ದೀಯ. ಅಹ್ಮದಿಯ್ಯತ್ ಏಕೆ ಬಿಟ್ಟುಬಿಡಬಾರದು? ಮುಹಮ್ಮದ್ ಅಲಿ ಹೇಳಿದರು: ಅಹ್ಮದಿಯ್ಯತ್ ಉಪೇಕ್ಷಿಸಲು ಸಾಧ್ಯವಲ್ಲ. ಪರಿಸ್ಥಿತಿ ಕೆಟ್ಟು ಹೋದ ಕಾರಣದಿಂದ ಶಿಕ್ಷಣ ಕೂಡ ಜಾರಿಗೊಳಿಸಲು ಅವರಿಗೆ ಸಾಧ್ಯವಾಗಲಿಲ್ಲ. ಆದರೆ ಅಹ್ಮದಿಯ್ಯತ್ತಿನಲ್ಲಿ ನೆಲೆನಿಂತರು. ಒಂದು ದಿನ ಅವರ ತಂದೆ ಅವರೊಡನೆ ಹೇಳಿದರು: ನೋಡು, ಈ ಸಮಸ್ಯೆಯನ್ನು ಕೊನೆಗೊಳಿಸು. ಅಹ್ಮದಿಯ್ಯತ್ತನ್ನು ಉಪೇಕ್ಷಿಸು. ಅವರು ಹೇಳಿದರು: ಅದನ್ನು ಕೊನೆಗೊಳಿಸಲು ಒಂದೇ ಪರಿಹಾರ. ನನಗೆ ಊಟ ಕಳುಹಿಸುವಾಗ ಅದರಲ್ಲಿ ವಿಷವನ್ನು ಸೇರಿಸಿರಿ. ಹಾಗಾದರೆ ನಾನು ಸತ್ತುಹೋಗುವೆನು ಮತ್ತು ನಿಮ್ಮ ಸಮಸ್ಯೆ ಕೊನೆಗೊಳ್ಳುವುದು. ಏಕೆಂದರೆ ನನಗೆ ಹಝ್ರತ್ ಮಸೀಹ್ ಮೌಊದ್‌ರನ್ನು(ರ) ಮತ್ತು ಅವರ ಜಮಾಅತನ್ನು ಉಪೇಕ್ಷಿಸಲು ಸಾಧ್ಯವಲ್ಲ.

ಅನಂತರ ಅವರ ತಂದೆ ಅವರೊಡನೆ ಎಂದಿಗೂ ಅಹ್ಮದಿಯ್ಯತ್ ಬಿಡಲು ಹೇಳಲಿಲ್ಲ. ಮುಹಮ್ಮದ್ ಅಲಿ ಸಾಹಿಬ್‌ರ ತಂದೆ ನಿಧನರಾದಾಗ, ಅವರ ಜನಾಝ ನಮಾಝನ್ನು ನಿರ್ವಹಿಸಲಿಲ್ಲ. ಜನರು ಹೇಳಿದರು: ಇದು ಗೋತ್ರದ ಸಂಪ್ರದಾಯಕ್ಕೆ ವಿರುದ್ಧವಾಗಿದೆ. ತನ್ನ ತಂದೆಯ ಜನಾಝವನ್ನು ನಿರ್ವಹಿಸದ ಎಂತಹ ಮಗನು ಇವನು. ಮುಹಮ್ಮದ್ ಅಲಿ ಸಾಹಿಬ್‌ರು ಹೇಳಿದರು: "ನನಗೆ ಹಝ್ರತ್ ಮಸೀಹ್ ಮೌಊದ್(ಅ) ಹೆಚ್ಚು ಮುಖ್ಯ. ಬಾಕಿಯೆಲ್ಲರೂ ಅವರ ನಂತರ." ಅದೇ ರೀತಿಯಲ್ಲಿ ಅವರ ತಾಯಿ ಸಹ ಅವರೊಡನೆ ಬಹಳ ಕೆಟ್ಟದ್ದಾಗಿ ವರ್ತಿಸಿದ್ದರು. ನೀನು ನನ್ನ ಮಗನಲ್ಲವೆಂದು ಕೂಡ ಹೇಳಿದ್ದರು. ಎಲ್ಲ ವಸ್ತುಗಳಿಂದ ಅವರ ಸೊತ್ತಿನಿಂದ ವಂಚಿತಗೊಳಿಸಿದರು. ಮುಹಮ್ಮದ್ ಅಲಿ ಸಾಹಿಬ್‌ರು ಅನಂತರ ಅವರ ಗ್ರಾಮಕ್ಕೆ ಹೋಗಲಿಲ್ಲ. ಆದರೆ ತಾಯಿಗೆ ನೆರವು ನೀಡುತ್ತಿದ್ದರು. ಅವರ ದೊಡ್ಡಪ್ಪರ ಮನೆಗೆ ಹೋಗುತ್ತಿದ್ದರು. ಅಲ್ಲಿಂದ ತಾಯಿಗೆ ನೆರವು ನೀಡುತ್ತಿದ್ದರು. ಅವರ ಸಾಂಪತ್ತಿಕ ಸಹಾಯ ಸಹ ಮಾಡುತ್ತಿದ್ದರು. ಅವರು ಸಹ ನಿಧನರಾದಾಗ, ಅವನ ಜನಾಝ ಕೂಡ ನಿರ್ವಹಿಸಲಿಲ್ಲ. ಅವರ ಕಿರಿಯ ಸಹೋದರ ಸಹ ಅಹ್ಮದಿಯಾಗಿದ್ದರು. ಅವರು ಸಹ ಅವರ ತಾಯಿಯ ಜನಾಝ ನಿರ್ವಹಿಸಲಿಲ್ಲ. ಎಂತಹ ಮಕ್ಕಳು ಎಂದು ಆಗಲೂ ಜನರು ಆಕ್ಷೇಪಿಸಿದ್ದರು. ಹಝ್ರತ್ ಮಸೀಹ್ ಮೌಊದ್‌ರನ್ನು(ಅ) ಬೈಯ್ಯುವವರ ಜನಾಝ ನಿರ್ವಹಿಸಲು ನಮ್ಮಿಂದ ಸಾಧ್ಯವಲ್ಲವೆಂದು ಅವರು ಹೇಳಿದರು. 27 ವರ್ಷಗಳ ಕಾಲ ಸೈನ್ಯದಲ್ಲಿ ಸೇವೆ ಸಲ್ಲಿಸಿದರು. ಲೆಫ್ಟಿನೆಂಟ್ ಕರ್ನಲ್ ಹುದ್ದೆಯಿಂದ ನಿವೃತ್ತರಾದರು. ನಿವೃತ್ತರಾದಾಗ ವಿಶಿಷ್ಟ ಮಿಲಿಟರಿ ಪದಕ ಸಹ ಸಿಕ್ಕಿತ್ತು. ಅದರ ನಂತರ ಪಿಶಾವರ್ ನಸೀರ್ ಟೀಚಿಂಗ್ ಹಾಸ್ಪಿಟಲ್‌ನಲ್ಲಿ ಅಸಿಸ್ಟಂಟ್ ಪ್ರೊಫೆಸರ್ ಆಗಿ ಸೇವೆ ಸಲ್ಲಿಸಿದರು. ಸೈಕಾಲಜಿ ವಿಭಾಗದಲ್ಲಿ ಹೆಡ್ ಆಫ್ ಡಿಪಾರ್ಟ್‌ಮೆಂಟ್ ಸಹ ಆಗಿದ್ದರು. ಅವರಿಗೆ 32 ಪ್ರಾಯವಿದ್ದಾಗ, ಅವರನ್ನು ಹಝ್ರತ್ ಖಲೀಫತುಲ್ ಮಸೀಹ್ ರಾಬಿ ಪಿಶಾವರ್ ಜಿಲ್ಲೆಯ ಮತ್ತು ಪಿಶಾವರ್ ಜಮಾಅತಿನ ಅಮೀರ್ ಆಗಿ ನಿಶ್ಚಯಿಸಿದರು. 1985ರಲ್ಲಿ ಅವರನ್ನು ವಖ್ಫೇ ಜದೀದ್‌ನ ಬೋರ್ಡ್ ಆಫ್ ಡೈರಕ್ಟರ್ ಆಗಿ ನಿಶ್ಚಯಿಸಲಾಯಿತು. ಮರಣದ ವರೆಗೆ ಅದೇ ಪೊಝಿಶನ್‌ನಲ್ಲಿ ಮೆಂಬರ್ ಆಗಿ ಇದ್ದರು. ಅದೇ ರೀತಿಯಲ್ಲಿ ಫಝ್ಲೇ ಉಮರ್ ಫೌಂಡೇಶನ್, ತಾಹಿರ್ ಫೌಂಡೇಶನ್ ಮತ್ತು ಸ್ಪಾಡಿಂಗ್ ಶೂರದ ಮೆಂಬರ್ ಸಹ ಆಗಿದ್ದರು. ಶಮ್ಸುದ್ದೀನ್ ಸಾಹಿಬ್‌ರ ಮಗಳೊಂದಿಗೆ ಅವರ ವಿವಾಹ ನಡೆದಿತ್ತು. ದಿವಂಗತರು ಪತ್ನಿಯನ್ನಲ್ಲದೇ ಒಬ್ಬ ಪುತ್ರ ಮತ್ತು ಮೂವರು ಪುತ್ರಿಯರನ್ನು ಅಗಲಿರುವರು. ಅವರ ಮಗನು ವಖ್ಫೇ ನೌನಲ್ಲಿ ಇದ್ದಾರೆ. ಈಗ ಹ್ಯೂಮನಿಟಿ ಫಸ್ಟಿನ ಅಡಿಯಲ್ಲಿ ತನ್ಝಾನಿಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಮಗನು ಹೇಳುತ್ತಾರೆ: ನನ್ನ ತಂದೆಯಾದ ಮುಹಮ್ಮದ್ ಅಲಿ ಖಾನ್ ಸಾಹಿಬ್‌ರು ಸತ್ಯಸಂಧತೆ, ಪ್ರಾಮಾಣಿಕತೆ, ನಿಸ್ವಾರ್ಥತೆ ಮತ್ತು ಪರಿಶುದ್ಧತೆಯಲ್ಲಿ ಉನ್ನತ ಪದವಿಯನ್ನು ಹೊಂದಿದ್ದರು. ಎಂದಿಗೂ ಸಂಪತ್ತು, ಹಣ, ಖರ್ಚು ಇಂತಹ ವಿಷಯಗಳನ್ನು ಹೇಳುತ್ತಿರಲಿಲ್ಲ. ಸರಳ ಮತ್ತು ಸುಖಜೀವನವನ್ನು ಸಾಗಿಸಿದರು. ಪಿಶಾವರಿನ ಅತ್ಯಂತ ಕಷ್ಟದಾಯಕವಾದ ಸ್ಥಿತಿಯಲ್ಲೂ ಅಲ್ಲಾಹನ ಸಹಾಯ ಮತ್ತು ನೆರವಿನ ಮೇಲೆ ಭರವಸೆ ಇರಿಸಿಕೊಂಡು ಪಿಶಾವರ್ ಜಮಾಅತಿನ ನೇತೃತ್ವ ವಹಿಸಿದರು. ಪಿಶಾವರಿನ ಜನರು ಅವರ ಮರಣದಿಂದ ಬಹಳ ದುಃಖಿತರಾಗಿರುವರು. ಖಿಲಾಫತ್‌ನೊಂದಿಗೆ ಅತ್ಯಂತ ಅನುಸರಣೆಯ ಸಂಬಂಧವನ್ನು ಹೊಂದಿದ್ದರು. ಹಝ್ರತ್ ಪೈಗಂಬರ್ ಮತ್ತು ಹಝ್ರತ್ ಮಸೀಹ್ ಮೌಊದ್‌ರೊಂದಿಗೆ ಪ್ರೀತಿ ಮತ್ತು ಪ್ರೇಮದ ಸಂಬಂಧವನ್ನು ಹೊಂದಿದ್ದರು. ಅಲ್ಲಾಹನ ಏಕತ್ವಕ್ಕಾಗಿ ಎಲ್ಲ ರೀತಿಯ ತ್ಯಾಗಗಳನ್ನು ಮಾಡಲು ತಯಾರಿದ್ದರು. ಅನೇಕ ಶ್ರೇಷ್ಠಗುಣಗಳನ್ನು ಹೊಂದಿದ್ದರು.

ಮುಂದಿನ ಜನಾಝ ರಬ್ವದ ಸನ್ಮಾನ್ಯ ಮುಹಮ್ಮದ್ ರಫೀ ಖಾನ್ ಶೆಹ್‌ಝಾದ್ ಸಾಹಿಬ್‌ರದ್ದಾಗಿದೆ. ಮಾರ್ಚ್ 30ರಂದು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರಿಗೆ 82 ವಯಸ್ಸಿತ್ತು. ಆರಾಧನೆ ಮಾಡುವವರೂ ಯೌವ್ವನದಿಂದಲೇ ತಹಜ್ಜುದ್ ನಿರ್ವಹಿಸುವವರೂ ಆಗಿದ್ದರು. ಧರ್ಮದ ಬಗ್ಗೆ ಅಭಿಮಾನವನ್ನು ಹೊಂದಿದ್ದರು. ಬಹಳ ಆವೇಶವನ್ನು ಹೊಂದಿದ್ದರು. ಪರಿಶುದ್ಧ ವ್ಯಕ್ತಿತ್ವವನ್ನು ಹೊಂದಿದ್ದರು. ಜೀವಿತದ ಕೊನೆಯ ದಿನಗಳಲ್ಲೂ ಉಚ್ಚ ಸ್ವರದಿಂದ ಪವಿತ್ರ ಖುರ್‌ಆನ್ ಓದುತ್ತಿದ್ದರು. ಅವರು ಏರ್‌ಫೋರ್ಸ್‌ನಲ್ಲಿ ಭರ್ತಿಯಾಗಿದ್ದರು. ಅನಂತರ ಅಬೂದಾಬಿಗೆ ಹೋದರು. ಅಲ್ಲಿ ಏರ್‌ಫೋರ್ಸಿನ ಅಸೆಂಬ್ಲಿಯಲ್ಲಿ ಖಾದಿಯಾನಿಗಳನ್ನು ಕೊಲ್ಲಬೇಕೆಂದು ಒಬ್ಬ ಮೌಲವಿ ಹೇಳಿದರು. ಆಗ ಅವರು ಅಲ್ಲಿ ನಿಂತುಕೊಂಡು ಹೀಗೆ ಹೇಳಿದರು: ನಾನು ಅಹ್ಮದಿಯಾಗಿರುವೆನು. ನನ್ನನ್ನು ಕೊಲ್ಲಿರಿ. ಹೇಗಿದ್ದರೂ ಅಲ್ಲಿಂದ ರಾಜಿನಾಮೆ ಪಡೆದುಕೊಂಡು ಪಾಕಿಸ್ತಾನಕ್ಕೆ ಬಂದರು. ಪಾಕಿಸ್ತಾನದಲ್ಲಿ ತನ್ನ ಮೆಡಿಕಲ್ ಸ್ಟೋರ್ ತೆರೆದರು. ದಾರುರ್ರಹ್ಮತ್ ಶರ್ಖಿ ರಾಜೀಕಿಯ ಮೊಹಲ್ಲ ಸದರ್ ಆಗಿದ್ದರು. ಅದೇ ರೀತಿಯಲ್ಲಿ ಎಂ.ಟಿ.ಎ.ಯಲ್ಲಿ ಪುಶ್ತೋ ಭಾಷೆಯಲ್ಲಿ 50ರಷ್ಟು ಪ್ರೋಗ್ರಾಮ್‌ಗಳಲ್ಲಿ ಭಾಗವಹಿಸಿದರು. ಮೊಹಲ್ಲದ ಪ್ರತಿಯೊಬ್ಬ ವ್ಯಕ್ತಿಯೊಂದಿಗೆ ಅತ್ಯಂತ ಕರುಣೆ ಮತ್ತು ವಾತ್ಸಲ್ಯದ ಸಂಬಂಧವನ್ನು ಹೊಂದಿದ್ದರು. ರಹಸ್ಯವಾಗಿ ಜನರಿಗೆ ಸಾಂಪತ್ತಿಕ ಸಹಾಯ ಮಾಡುತ್ತಿದ್ದರು. ದಿವಂಗತರು ಪತ್ನಿಯನ್ನಲ್ಲದೆ ಇಬ್ಬರು ಪುತ್ರರನ್ನು ಮತ್ತು ನಾಲ್ವರು ಪುತ್ರಿಯರನ್ನು ಅಗಲಿರುವರು.

ಮುಂದಿನ ಜನಾಝ ಆಸ್ಟ್ರೇಲಿಯದ ಅಯಾಝ್ ಯೂನುಸ್ ಸಾಹಿಬ್‌ರದ್ದಾಗಿದೆ. ಮಾರ್ಚ್ 24ರಂದು ಆಸ್ಟ್ರೇಲಿಯದ ನ್ಯೂ ಸೌತ್ ವೇಲ್ಸ್ ಸ್ಟೇಟ್‌ನಲ್ಲಿ ಉಂಟಾದ ಪ್ರವಾಹದಲ್ಲಿ ಮುಳುಗಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಬಹಳ ಸೇವೆ ಮಾಡುವ ಯುವಕರಾಗಿದ್ದರು. ಸದಾ ಸೇವೆಗಾಗಿ ಹಾಜರಿರುವ ವ್ಯಕ್ತಿಯಾಗಿದ್ದರು.

ಮುಂದಿನ ಜನಾಝ ರಬ್ವದ ವಕಾಲತ್ ಮಾಲ್ ಸಾಲಿಸ್, ಯು.ಕೆ.ಯ ರಫೀಕ್ ಆಫ್‌ತಾಬ್ ಸಾಹಿಬ್‌ರದ್ದಾಗಿದೆ. 67ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಲೋಕಲ್ ಜಮಾಅತಿನಲ್ಲಿ ಸೆಕ್ರಟರಿ ತರ್ಬಿಯತ್ ಆಗಿದ್ದರು. ನಾಯಿಬ್ ಸದರ್ ಮತ್ತು ಝಈಮ್ ಅನ್ಸಾರುಲ್ಲಾಹ್ ಆಗಿ ಸೇವೆ ಸಲ್ಲಿಸಿದರು. ತಹಜ್ಜುದ್ ನಿರ್ವಹಿಸುವವರೂ ಐಚ್ಛಿಕ ನಮಾಝ್ ನಿರ್ವಹಿಸುವವರೂ ಪವಿತ್ರ ಖುರ್‌ಆನ್ ನಿಯತವಾಗಿ ಓದುವವರೂ ಆಗಿದ್ದರು. ದಿವಂಗತರು ಪತ್ನಿಯನ್ನಲ್ಲದೆ ಇಬ್ಬರು ಪುತ್ರಿಯರನ್ನು ಮೂವರು ಪುತ್ರರನ್ನು ಅಗಲಿರುವರು.

ಮುಂದಿನ ಜನಾಝ ಸನ್ಮಾನ್ಯ ರಫೀಕ್ ಆಫ್ತಾಬ್ ಸಾಹಿಬ್‌ರದ್ದಾಗಿದೆ. ಎಪ್ರಿಲ್ ತಿಂಗಳಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಮಗನಾದ ಫಾರೂಖ್ ಸಾಹಿಬ್‌ರು ಹೇಳುತ್ತಾರೆ: ನನ್ನ ತಂದೆ ಬಹಳ ಉತ್ತಮ ಗುಣಗಳನ್ನು ಹೊಂದಿದ್ದರು. ವಿನಯವಂತ, ಪ್ರಾಮಾಣಿಕ, ಎಲ್ಲರೊಂದಿಗೆ ಹೊಂದಿಕೊಂಡು ಇರುವವರು, ಹಸನ್ಮುಖಿ ಮತ್ತು ಆದರಣೀಯ ವ್ಯಕ್ತಿಯಾಗಿದ್ದರು. ಜನರನ್ನು ಗೌರವಿಸುವವರೂ ಅತಿಥಿ ಸತ್ಕಾರದ ಗುಣವನ್ನು ಹೊಂದಿದವರೂ ಆಗಿದ್ದರು. ಮಕ್ಕಳೊಂದಿಗೆ ಖಿಲಾಫತ್‌ನೊಂದಿಗೆ ಹೊಂದಿಕೊಂಡಿರಲು ಹೇಳುತ್ತಿದ್ದರು. ಅದರ ಫಲವಾಗಿ ಅವರ ಮಕ್ಕಳು ಜಮಾಅತಿನ ಸೇವೆ ಸಹ ಮಾಡುತ್ತಿರುವರು.

ಮುಂದಿನ ಜನಾಝ ಸನ್ಮಾನ್ಯ ಝರೀನ ಅಖ್ತರ್ ಸಾಹಿಬರದ್ದಾಗಿದೆ. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಬಹಳ ಸಹನೆ ಮತ್ತು ಕೃತಜ್ಞತೆ ಹೊಂದಿದ್ದ ಸ್ತ್ರೀಯಾಗಿದ್ದರು. ವಖ್ಫೇ ಝಿಂದಗಿಯಾದ ಪತಿಯೊಂದಿಗೆ ನಿಷ್ಠೆಯಿಂದ ಜೀವನ ಸಾಗಿಸಿದರು. ಘಾನದಲ್ಲಿ ಇರುವಾಗ ಅಲ್ಲಿ ಹೀನಾಯ ಆರ್ಥಿಕ ಪರಿಸ್ಥಿತಿಯಲ್ಲೂ ಬಹಳ ಸಹನೆ ಮತ್ತು ಕೃತಜ್ಞತೆಯಿಂದ ಮಕ್ಕಳೊಂದಿಗೆ ಜೀವನ ಸಾಗಿಸಿದ್ದರು. ದಿವಂಗತರು ಮೂಸಿಯಾಗಿದ್ದರು. ಅವರ ಒಬ್ಬ ಮಗನಾದ ಮಿರ್ಝಾ ತೌಖೀರ್ ಅಹ್ಮದ್ ಸಾಹಿಬ್‌ರು ವಖ್ಫೇ ಝಿಂದಗಿಯಾಗಿರುವರು. ಎಂ.ಟಿ.ಎ.ದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಮುಂದಿನ ಜನಾಝ ಹಾಫಿಝ್ ಮುಹಮ್ಮದ್ ಅಕ್ರಮ್ ಸಾಹಿಬ್‌ರದ್ದಾಗಿದೆ. ತಾಹಿರ್ ಹಾರ್ಟ್‌ನಲ್ಲಿ 80ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಹಝ್ರತ್ ಮಸೀಹ್ ಮೌಊದ್‌ರ ಕಾಲದಲ್ಲಿ ಪತ್ರ ಬರೆದು ಬೈಅತ್ ಮಾಡಿದ್ದರು. ಅವರ ಮೊಮ್ಮಗರಾದ ಅಬ್ದುಲ್‌ಖಬೀರ್ ಪಿ.ಎಸ್. ಆಫೀಸ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಮೂಸಿಯಾಗಿದ್ದರು. ನಿಯತವಾಗಿ ತಹಜ್ಜುದ್ ನಿರ್ವಹಿಸುತ್ತಿದ್ದರು. ಫೈಸಲಾಬಾದಿನಲ್ಲಿ ಹಲವಾರು ಮಕ್ಕಳಿಗೆ ಪವಿತ್ರ ಖುರ್‌ಆನ್ ಕಲಿಸಿದರು. ತನ್ನ ಕಿರಿಯ ಮಗನನ್ನು ಖುರ್‌ಆನ್ ಹಾಫಿಝ್ ಮಾಡಿಸಿದರು.

ಮುಂದಿನ ಜನಾಝ ಸನ್ಮಾನ್ಯ ಚೌಧರಿ ನೂರ್ ಅಹ್ಮದ್ ನಾಸಿರ್ ಸಾಹಿಬ್‌ರದ್ದಾಗಿದೆ. 82ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಇವರು ಖಾದಿಯಾನಿನ ದರ್ವೇಶ್‌ರಾದ ಮುಹಮ್ಮದ್ ಅಬ್ದುಲ್ಲಾಹ್ ಸಾಹಿಬ್‌ರ ಹಿರಿಯ ಮಗನಾಗಿದ್ದರು. ಅವರ ಇಬ್ಬರು ಮಕ್ಕಳು ಅಲ್ಲಾಹನ ಅನುಗ್ರಹದಿಂದ ವಖ್ಫೇ ಝಿಂದಗಿಯಾಗಿರುವರು. ಒಬ್ಬರು ಲೈಬೇರಿಯದ ಸ್ಕೂಲಿನಲ್ಲಿ ಪ್ರಿನ್ಸಿಪಲ್ ಆಗಿರುವರು. ಮತ್ತೊಬ್ಬರು ಘಾನದಲ್ಲಿ ಸೇವೆ ಮುಬ್ಬಲಿಗ್‌ರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇಬ್ಬರು ಕರ್ಮ ಮೈದಾನಗಳಲ್ಲಿ ಇರುವ ಕಾರಣದಿಂದ ಜನಾಝದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ದಿವಂಗತರು ಮೂಸಿಯಾಗಿದ್ದರು.

ಮುಂದಿನ ಜನಾಝ ಸನ್ಮಾನ್ಯ ಮಹ್ಮೂದ್ ಅಹ್ಮದ್ ಮಿನ್‌ಹಾಸ್ ಸಾಹಿಬ್‌ರದ್ದಾಗಿದೆ. 75ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಮುಬಲ್ಲಿಗ್‌ರಾದ ಒಬ್ಬ ಮಗನು ಹೇಳುತ್ತಾರೆ: ನನ್ನ ತಂದೆ ಸರಳ ಜೀವನವನ್ನು ಹೊಂದಿದ್ದ ವ್ಯಕ್ತಿಯಾಗಿದ್ದರು. ಅನೇಕ ಉತ್ತಮ ಸ್ವಭಾವಗಳನ್ನು ಹೊಂದಿದ್ದರು. ನಿಯತವಾಗಿ ತಹಜ್ಜುದ್ ನಿರ್ವಹಿಸುವವರಾಗಿದ್ದರು. ಖಿಲಾಫತಿನ ಪ್ರೇಮಿಯಾಗಿದ್ದರು. ಬಡವರನ್ನು ಮತ್ತು ನಿರ್ಗತಿಕರನ್ನು ಸಹಾಯ ಮಾಡುತ್ತಿದ್ದರು. ಅವರ ಮಗನು ಘಾನದಲ್ಲಿ ಕರ್ಮ ಮೈದಾನದಲ್ಲಿ ಇರುವ ಕಾರಣದಿಂದ ಜನಾಝದಲ್ಲಿ ಭಾಗವಹಿಸಲು

ಸಾಧ್ಯವಾಗಿರಲಿಲ್ಲ. ಮತ್ತೊಬ್ಬ ಮಗನು ಮಲೇಶಿಯದಲ್ಲಿ ಇರುವ ಕಾರಣದಿಂದ ಭಾಗವಹಿಸಲು ಸಾಧ್ಯವಾಗಲಿಲ್ಲ.

ಅಲ್ಲಾಹನು ಎಲ್ಲ ದಿವಂಗತರ ಸಂಬಂಧಿಕರಿಗೆ ಸಹನೆ ಮತ್ತು ಧೈರ್ಯವನ್ನು ದಯಪಾಲಿಸಲಿ. ಎಲ್ಲ ದಿವಂಗತರಿಗೆ ಉನ್ನತ ಪದವಿಯನ್ನು ನೀಡಲಿ. ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಜುಮಾ ನಮಾಝ್ ನಂತರ ಎಲ್ಲರ ಜನಾಝ ನಮಾಝ್ ನಿರ್ವಹಿಸುವೆನು. **ಇನ್‌ಶಾ ಅಲ್ಲಾಹ್.**

***************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಅಭಿವೃದ್ಧಿಯ ಹಿಂದೆ ಬಿದ್ದವರ ಪರಿಸ್ಥಿತಿಯು ಅದೇ ರೀತಿಯದ್ದಾಗಿರುತ್ತದೆ. ಹದೀಸಿನಲ್ಲಿ ಹೀಗೆ ಬರುತ್ತದೆ. ಒಂದು ಯುದ್ಧದಲ್ಲಿ ಹಝ್ರತ್ ರಸೂಲುಲ್ಲಾಹ್(ಸ) ರು ತನ್ನ ಮಗುವನ್ನು ಕಳಕೊಂಡ ಓರ್ವ ಮಹಿಳೆಯನ್ನು ಕಂಡರು. ಅವಳು ಯಾವ ಮಗುವನ್ನು ಕಂಡರೂ ಅವನನ್ನು ತನ್ನ ಎದೆಗೆ ಹಚ್ಚಿಕೊಳ್ಳುತ್ತಿದ್ದಳು ಮತ್ತು ಮುದ್ದು ಮಾಡುತ್ತಿದ್ದಳು ಮತ್ತು ಅವನನ್ನು ಬಿಟ್ಟು ಮುಂದುವರೆಯುತ್ತಿದ್ದಳು. ಅಂತಿಮವಾಗಿ ಅವಳಿಗೆ ಅವಳ ಮಗು ಸಿಕ್ಕಿತು. ಅವನನನ್ನು ಪಡೆದು ನೆಮ್ಮದಿಯಿಂದ ಕುಳಿತುಬಿಟ್ಟಳು. ಹುಝೂರ್(ಸ) ಸಹಾಬರನ್ನು ಸಂಬೋಧಿಸಿ ಹೇಳಿದರು. ಯಾವ ರೀತಿ ಆ ಮಹಿಳೆಗೆ ತನ್ನ ಮಗುವನ್ನು ಪಡೆದು ಸಂತೋಷವಾಯಿತೋ ಅದಕ್ಕಿಂತ ಎಷ್ಟೋ ಪಟ್ಟು ಹೆಚ್ಚು ಸಂತೋಷ ಅಲ್ಲಾಹನಿಗೆ ತನ್ನಿಂದ ದೂರವಾದ 'ದಾಸನು ಮರಳಿ ತನ್ನಲ್ಲಿ ಸೇರಿಕೊಂಡಾಗ ಆಗುತ್ತದೆ. ನಬಿ ಕರೀಂ(ಸ) ಇದರ ಇನ್ನೊಂದು ಉಪದೇಶಾತ್ಮಕ ಹಂತ ವಿವರಿಸಿದ್ದೇನೆಂದರೆ – ಈ ಘಟನೆ ಪ್ರಸ್ತುತಪಡಿಸುವ ನನ್ನ ಉದ್ದೇಶವೆಂದರೆ– ಆ ಮಹಿಳೆಗೆ ತನ್ನ ಅಸಲು ಗುರಿ ದೊರೆಯದಿದ್ದಾಗ ಇದ್ದ ಕಳವಳದ ಸಂಗತಿಯಾಗಿತ್ತು. ಗುರಿ ಸಾದಿಸಿದ ನಂತರ ದೊರೆತ ಶಾಂತಿಯ ಸಂಗತಿ ಗಮನಿಸಬೇಕಾದುದಾಗಿದೆ. ಪ್ರತಿಯೊಬ್ಬ ಮನುಷ್ಯನ ಗತಿ ಅದೇ ರೀತಿಯದ್ದಾಗಿದೆ. ನಿಜವಾದ ಗುರಿ ದೊರೆತ ನಂತರವೇ ವ್ಯಾಕುಲತೆ ದೂರವಾಗುತ್ತದೆ ಮತ್ತು ಶಾಂತಿ ದೊರೆಯುತ್ತದೆ. ಅಂದ ಹಾಗೆ ಮನುಷ್ಯನ ಜನ್ಮದ ನಿಜವಾದ ಗುರಿ ಅಲ್ಲಾಹನ ಸ್ಮರಣೆ ಮತ್ತು ಅವನನ್ನು ಪಡೆಯುವುದು ಆಗಿದೆ. ಅಲ್ಲಾಹನು ದೊರೆತಾಗ ಮಾತ್ರ ವ್ಯಾಕುಲತೆ ಇರುವುದಿಲ್ಲ. ಬದಲು ಶಾಂತಿ ಲಭಿಸುತ್ತದೆ. ಯಾರು ಇಹಲೋಕ ಪ್ರಯತ್ನದಲ್ಲಿಯೇ ಇರುವರೋ ಅವರು ಎಷ್ಟೋ ಅಭಿವೃದ್ಧಿ ಸಾಧಿಸಿದರೂ ಅವರ ವ್ಯಾಕುಲತೆ ಇನ್ನಷ್ಟು ಹೆಚ್ಚಾಗುತ್ತದೆ. ಆದರೆ ಅಲ್ಲಾಹನತ್ತ ಬರುವವನಿಗೆ ಮತ್ತು ಅವನು ಎಷ್ಟು ಅವನತ್ತ ಮುಖ ಮಾಡುವನೋ ಅವನ ಹೃದಯದ ಶಾಂತಿ ಹೆಚ್ಚಾಗುತ್ತದೆ. ಇದರಿಂದ ಸಾಬೀತಾಗುವುದೇನೆಂದರೆ ಅಲ್ಲಾಹನನ್ನು ಪಡೆಯಲು ಮಾಡುವ ಪ್ರಯತ್ನಗಳೇ ನಮ್ಮ ಜೀವನದ ನಿಜವಾದ ಗುರಿಯಾಗಿದೆ. ಅಂದ ಹಾಗೆ ಆ ಗುರಿ ಸಾಧಿಸಿದಾಗ ಮಾತ್ರ ಮನುಷ್ಯನಿಗೆ ಶಾಂತಿ ದೊರೆಯುವುದು. ನಮ್ಮ ರಾಜ್ಯಗಳನ್ನೇ ನೋಡಿ. ಸರಕಾರ ರಕ್ಷಣೆಯ ಎಷ್ಟೆಲ್ಲಾ ಏರ್ಪಾಡು ಮಾಡಿದರೂ ಕೆಲ ಧುರೀಣರ ಪರಿಸ್ಥಿತಿ ಹೇಗಿದೆ ಎಂದರೆ ವಿದೇಶಗಳಿಂದ ನೀರು ಬರುತ್ತದೆ. ಅವರ ಮುಂದೆ ತೆರೆಯಲಾಗುತ್ತದೆ. ಆದರೂ ಸಹ ಮೊದಲು ಇತರರಿಗೆ ಕುಡಿಸುತ್ತಾರೆ. ಮತ್ತೆ ಅವರು ಕುಡಿಯುತ್ತಾರೆ. ಅದೇ ರೀತಿ ಅವರು ಊಟದಲ್ಲಿಯೂ ಸಾವಿರಾರು ರೀತಿಯ ಜಾಗೃತಿ ವಹಿಸುತ್ತಾರೆ. ಮೊದಲು ಊಟ ತಯಾರಿಸಿದವನಿಗೆ ಊಟ ಮಾಡಿಸಿ ನೋಡುತ್ತಾರೆ. ಮತ್ತೆ ಡಾಕ್ಟರುಗಳು ಊಟ ಮಾಡುತ್ತಾರೆ ಮತ್ತು ಅವರ ಮುಂದೆ ಪ್ರಸ್ತುತಪಡಿಸಳಾಗುತ್ತದೆ. ಅಂದರೆ ಪ್ರತಿಕ್ಷಣ ಅವರಿಗೆ ಅಪಾಯವಿರುತ್ತದೆ ಮತ್ತು ಜಾಗೃತೆ ವಹಿಸಿರುತ್ತಾರೆ. ಆದರೆ ನಮ್ಮ ಮುಹಮ್ಮದ್ ರಸೂಲುಲ್ಲಾಹ್(ಸ) ರತ್ತ ನೋಡಿರಿ. ಸುತ್ತಲೂ ಶತ್ರುಗಳೇ ಇದ್ದಾರೆ. ಆದರೂ ಯಾವ ಅಪಾಯವಿಲ್ಲ. ನೆಮ್ಮದಿಯಿದೆ. ಶಾಂತಿಯಿದೆ. ಶತ್ರು ಸಹ ಊಟಕ್ಕೆ ಕರೆದರೆ ಅಂಜಿಕೆಯಿಲ್ಲದೇ ಹೋಗುತ್ತಾರೆ. ಒಂದು ಸಂಧರ್ಭದಲ್ಲಿ ಓರ್ವ ಯಹೂದಿ ಮಹಿಳೆ ಅವರಿಗೆ ವಿಷ ನೀಡಿದ್ದಳು. ಆದರೆ ಅಲ್ಲಾಹನು ತನ್ನ ದಿವ್ಯವಾಣಿಯ ಮೂಲಕ ಅವರಿಗೆ ತಿಳಿಸಿದನು. ಮತ್ತು ಅವರನ್ನು ಅದರಿಂದ ರಕ್ಷಿಸಿದನು. ಅವರಿಗೆ ಇಷ್ಟೊಂದು ನೆಮ್ಮದಿ ಏಕಿತ್ತು? ಅದಕ್ಕೆ ಕಾರಣವೆಂದರೆ ಅದೃಶ್ಯ ವಿಚಾರಗಳನ್ನು ಸಹ ಬಲ್ಲವನಾದ ಅಲ್ಲಾಹನೊಂದಿಗೆ ಅವರಿಗೆ ದೃಢ ಸಂಬಂಧವಿತ್ತು. ತನ್ನ ಭಕ್ತ ದಾಸರಿಗೆ ಅಲ್ಲಾಹನು ಅವರ ಅಗತ್ಯಗಳನುಸಾರ ಸಹಾಯ ನೀಡುತ್ತಾನೆ. ಅದುವೇ ಅವರ ನೆಮ್ಮದಿಗೆ ಕಾರಣವಾಗುತ್ತದೆ. ಧರ್ಮದ ವಿಷಯದಲ್ಲಿ ಪ್ರಗತಿಯು ಇನ್ನು ಹೆಚ್ಚಿನ ಶಾಂತಿಗೆ ನಾಂದಿಯಾಗುತ್ತದೆ. ಲೌಕಿಕ ಅಭಿವೃದ್ಧಿಯಲ್ಲಿ ಅಶಾಂತಿಗೆ ಕಾರಣ ಒಂದು ಆಧ್ಯಾತ್ಮಿಕ ಕಾರಣವೂ ಇದೆ. ಅದು ಹೇಗೆಂದರೆ ಮನುಷ್ಯನಿಗೆ ಎಷ್ಟೆಲ್ಲ ಲೌಕಿಕ ಪ್ರಗತಿ ಲಭಿಸುತ್ತದೆ. ಅವನ ಸಂಪತ್ತು ಹೆಚ್ಚುತ್ತಾ ಹೋಗುತ್ತದೆ. ಅದರಲ್ಲಿ ಸಂಶಯಗಳು ಉಂಟಾಗುತ್ತವೆ. ಅದರಲ್ಲಿ ಇತರ ಜನರ ಭಾಗವೂ ಸಹ ಶಾಮೀಲಾಗುತ್ತದೆ. ಆದರೆ ಧರ್ಮ ಅಭಿವೃದ್ಧಿಯಲ್ಲಿ ಮನುಷ್ಯನು ಎಷ್ಟು ಪ್ರಗತಿ ಹೊಂದಿದರೂ ತನ್ನ ಪಾಲು ಇರುತ್ತದೆಯೇ ಹೊರತು ಇತರರ ಪಾಲು ದೋಚುವುದಿಲ್ಲ. ಈ ಪೈಕಿ ಗಮನ ಸೆಳೆಯುತ್ತ ಪವಿತ್ರ ಖುರ್‌ಆನ್ ಹೀಗೆ ಸಂಕೇತಿಸುತ್ತದೆ. ಸತ್ಯವಿಶ್ವಾಸಿಗೆ ಸ್ವರ್ಗ ಲಭಿಸುತ್ತದೆ. ಅದರ ಭಾವನೆಯು ಹೀಗಿದೆ. "ಅರ್‌ಝುಹಸ್ಸಮಾವಾತು ವಲ್‌ಅರ್‌ಝ್ (14 ಆಲಿ ಇಮ್ರಾನ್) ಅಂದರೆ ಸ್ವರ್ಗದ ವಿಸ್ತೀರ್ಣವು ಎಲ್ಲ ಸತ್ಯ ವಿಶ್ವಾಸಿಗಳಿಗೆ ಸಮಾನವಾಗಿ ದೊರೆಯುವುದು. ವ್ಯತ್ಯಾಸವೇನೆಂದರೆ ಪ್ರತಿಯೊಬ್ಬ ವಿಶ್ವಾಸಿಗರು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಲಾಭ ಪಡೆಯುವರು. ಅಂದ ಹಾಗೆ ಆಧ್ಯಾತ್ಮಿಕ ಅಭಿವೃದ್ಧಿಯಲ್ಲಿ ಇನ್ನೊಬ್ಬರ ಹಕ್ಕು ದಮನಿಸುವ ಪ್ರಶ್ನೆಯೆ ಬರುವುದಿಲ್ಲ. ಸತ್ಯವಿಶ್ವಾಸಿಯು ಯಾರ ಹಕ್ಕು ದೋಚದ ಕಾರಣ ಅವನ ಮನಸ್ಸಿಗೆ ಶಾಂತಿ ದೊರೆಯುತ್ತದೆ. ಅವನ ಆತ್ಮದ ಮೇಲೆ ಯಾವ ಪಾಪ ಆಗಲಿ ಅಥವಾ ಹಕ್ಕು ದಮನಿಸಿದ ಭಾರವಾಗಲಿ ಇರುವುದಿಲ್ಲ. **(ತಫ್ಸೀರ್ ಕಬೀರ್ ಸಂಪುಟ 3, ಪುಟ 416–417 ಮುದ್ರಣ 2010 ಖಾದಿಯಾನ್)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಮನುಷ್ಯನು ಕಾಣುವಂತಾಯಿತು. ಅಂದ ಹಾಗೆ ಮತ್ತಷ್ಟು ಭಯಗೊಂಡು ಅಸಮಾಧಾನ ಸ್ಥಿತಿಯಲ್ಲಿ ಅವನು ಲೂಧಿಯಾನ ಬಿಟ್ಟು ಫಿರೋಝ್ಪುರ್ ತಮ್ಮ ಇನ್ನೊಬ್ಬ ಅಳಿಯನ ಬಳಿಗೆ ಹೋದರು. ಒಟ್ಟಿನಲ್ಲಿ 15 ತಿಂಗಳವರೆಗೆ ಅದೇ ಸ್ಥಿತಿಯಿತ್ತು.

ಕೊನೆಗೆ (ಹಾವಿಯ)ನರಕದ ಬಗ್ಗೆ ಭವಿಷ್ಯವಾಣಿಯ ಅವಧಿಯ ಅಂತಿಮ ದಿನ ಬಂತು. ಆ ದಿನ ಆಥಮ್ ಸಾಹಿಬರ ಬಂಗಲೆಯ ಕಾವಲುಗಾರ ಹೇಳಿದನು. ಬಂಗಲೆಯ ಒಳಗೆ ಆಥಮ್ ಸಾಹೇಬರ ಮಿತ್ರ ಪಾದರಿಗಳಿದ್ದರು. ಹೊರಗೆ ನಾಲ್ಕು ಸುತ್ತಲೂ ಪೋಲೀಸರ ಕಾವಲಿತ್ತು. ಆ ಸಮಯ ಆಥಮನ ಸ್ಥಿತಿ ತುಂಬ ಗಾಬರಿದಾಯಕವಾಗಿತ್ತು. ಕಾಕತಾಳಿಯ ಎಂಬಂತೆ ದೂರದಿಂದ ಬಂದೂಕಿನ ಸದ್ದು ಕೇಳಿ ಬಂತು. ಅದನ್ನು ಕೇಳಿ ಆಥಮರ ಸ್ಥಿತಿ ಇನ್ನಷ್ಟು ಹದಗೆಟ್ಟಿತು. ಅವರ ಅಸಮಾಧಾನ ಭಯ ವಿಪರೀತಕ್ಕೆ ಮುಟ್ಟಿದಾಗ ಅವರ ಮಿತ್ರರು ಅವರಿಗೆ ಬಹಳಷ್ಟು ಸರಾಯಿಯನ್ನು ಕುಡಿಸಿ ಮೂರ್ಛೆ ತಪ್ಪುವಂತೆ ಮಾಡಿದರು. ಆ ಅಂತಿಮ ರಾತ್ರಿ ಆಥಮ್ ಸಾಹೇಬರು ಅದೇ ಸ್ಥಿತಿಯಲ್ಲಿ ಕಳೆದರು. ಮುಂಜಾನೆ ಆದಾಗ ಅವರ ಮಿತ್ರರು ಅವರ ಕೊರಳಲ್ಲಿ ಹಾರ ಹಾಕಿ, ಅವರಿಗೆ ವಾಹನದಲ್ಲಿ ಕುಳ್ಳಿರಿಸಿ ಮೆರವಣಿಗೆ ಮಾಡಿದರು. **ಆ ದಿನ ಜನರಲ್ಲಿ ಹುಯಿಲೆಬ್ಬಿಸಿದರು. ಭವಿಷ್ಯವಾಣಿ ಮಿಥ್ಯವಾಯಿತು ಎಂದು ಆದರೆ ನಾವು ಭಾವಿಸುವುದು, ಆಥಮ್ ಸಾಹೇಬರ ಸ್ಥಿತಿಯೇನಿತ್ತು. ಅದಕ್ಕಿಂತ ಸಾವೇ ಲೇಸು ಎನ್ನುವಂತಿತ್ತು.** (ತಾರೀಖೆ ಅಹ್ಮದಿಅತ್, ಸಂಪುಟ–1, ಪುಟ–505)

ಇದೀಗ ಎಲ್ಲಾ ವಿವರಗಳನ್ನು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆಗಳ ಪ್ರಕಾರ ಪ್ರಸ್ತುತಪಡಿಸುವೆವು.

**ನಿಸ್ಸಂಶಯವಾಗಿ ಇಸ್ಲಾಮಿನ ವಿಜಯವಾಯಿತು. ಮತ್ತು ಕ್ರೈಸ್ತರಿಗೆ ಅಪಮಾನ ಹಾಗೂ ಹಾವಿಯ (ನರಕ) ದಕ್ಕಿತು**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು.

ನೆನಪಿರಲಿ 5 ಜೂನ್ 1893 ರಂದು ಅಮೃತಸರದ ಕ್ರೈಸ್ತರ ನಡುವೆ ಆದ ಚರ್ಚಾಕೂಟದಲ್ಲಿ ಮಾಡಲಾದ ಭವಿಷ್ಯವಾಣಿ ಅದರ ಅಂತಿಮ ತಾರೀಖು 5 ಸೆಪ್ಟೆಂಬರ್ 1894 ಆಗಿತ್ತು. ಅಲ್ಲಾಹನ ಇಚ್ಛೆ ಮತ್ತು ಆಜ್ಞೆಯ ಪ್ರಕಾರ ನಿಗದಿತ ಅವಧಿಯ ಒಳಗೆ ಪೂರ್ಣ ಸ್ಪಷ್ಟ ರೂಪದಲ್ಲಿ ಪೂರ್ಣಗೊಂಡಿದೆ. ಯಾವೊಬ್ಬ ನ್ಯಾಯವಂತ ಅಥವಾ ವಿವೇಕಯುಳ್ಳವನಿಗೆ ಅದನ್ನು ಮನ್ನಿಸದೇ ಇರಲು ಸಾಧ್ಯವಿಲ್ಲ. ಹೌದು ಒಬ್ಬ ಕಪಟಿ, ಮೂಢ ಅಥವಾ ಅವಸರವಾದಿ ಯಾರು ಈ ಘಟನೆಗಳನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ಈ ಭವಿಷ್ಯವಾಣಿಯ ನಂತರ ಎದುರಾಳಿ ಪಕ್ಷದಲ್ಲಿ ಉಂಟಾದ ಪರಿಸ್ಥಿತಿ ಅವಲೋಕಿಸುವುದಿಲ್ಲ. ಮತ್ತು ದೇವವಾಣಿಯ ಪದಗಳನ್ನು ಪಾಲಿಸುವುದಿಲ್ಲ ಬದಲು ಸ್ವೇಚ್ಛೆ ಬಾರದಂತೆ ನಡೆಯುತ್ತಾನೆ. ಅವನ ರೋಗಕ್ಕೆ ಯಾವ ಚಿಕಿತ್ಸೆಯೂ ಇಲ್ಲ. ಅವನು ಎಡವಿ ಬಿಡುತ್ತಾನೆಂದರೆ ಅದು ಅವನ ಕೀಳರಿಮೆ ಮತ್ತು ಮತ್ಸರ ಹಾಗೂ ಹುಂಬುತನವಾಗಿದೆ. ಇಲ್ಲವಾದಲ್ಲಿ ಇಸ್ಲಾಮಿನ ವಿಜಯ ಮತ್ತು ಕ್ರೈಸ್ತರಿಗೆ ಉಂಟಾದ ಅಪಮಾನ ಮತ್ತು ಸೋಲು ನಿಸ್ಸಂಶಯವಾಗಿದೆ. (ಅನ್ವಾರುಲ್ ಇಸ್ಲಾಂ, ರೂಹಾನಿ ಖಝಾಈನ್, ಸಂಪುಟ–9, ಪುಟ–1)

ಅಬ್ದುಲ್ಲ ಆಥಮನ ಭಯ ಹಿಂಜರಿಕೆ ಒಂದು ಲೋಕಕ್ಕೆ ತಿಳಿದಿದೆ. ಅದರ ಒಂದಿಷ್ಟು ವಿವರ ಬಂದಿರುತ್ತದೆ. ಇನ್ನುಳಿದದ್ದು ಮುಂದಿನ ಸಾಲುಗಳಲ್ಲಿ ಬರುವುದು. ಅಂದ ಹಾಗೆ ಅವನ ರುಜುವಾತು ಪಡಿಸುವಿಕೆ ಏನೂ ಗೌಪ್ಯವಾಗಿ ಉಳಿದಿಲ್ಲ. ಅಲ್ಲಾಹನು ಸಹ ತನ್ನ ದಿವ್ಯವಾಣಿಯಿಂದ ಹಝ್ರತ್ ಮಸೀಹ್ ಮೌಊದ್(ಅ) ರವರಿಗೆ ತಿಳಿಸಿದ್ದನು. ಆಥಮನು ಸತ್ಯದೆಡೆ ರುಜುವಾತುಪಡಿಸಿಕೊಂಡಿದ್ದಾನೆ. ದಿವ್ಯವಾಣಿಯ ಪದಗಳು ಹೀಗಿವೆ. **ಇತ್ತಲಅಲ್ಲಾಹು ಅಲಾ ಹಮ್ಮಿಹೀ ವ ಗಮ್ಮಿಹೀ ವಲನ್ ತಜಿದ ಲಿಸುನ್ನತಿಲ್ಲಾಇ ತಬ್ದೀಲ ವಲಾ ತಅಜಬೂ ವಲಾತಹ್‌ಝನೂ ವ ಅನ್‌ತುಮುಲ್ ಅಲೌನ ಇನ್ ಕುನ್‌ತುಮ್ ಮುಮಿನೀನ ವಬಿಇಝ್ಝತಿ ವಜಲಾಲಿ ಇನ್ನಕ ಅನ್ತಲ್ ಅಲಾ. ವನುಮಝ್ಝಿಖುಲ್ ಅದಾಅ ಕುಲ್ಲ ಮುಮಝ್ಝಕಿನ್ ವಮಕ್ರು ಉಲಾಇಕ ಹುವಾ ಯಬೂರು ಇನ್ನಾ ನಕ್‌ಶಿಫುಸ್ಸಿರ್ರ ಅನ್ ಸಾಖಿಹೀ ಯೌಮಇಝಿನ್ ಯಫ್ರಹುಲ್**

**ಮುಮಿನೀನ್.** (ಅದೇ ಪುಟ–2)

ಅನುವಾದ:– ಅಲ್ಲಾಹನು ಅವನ ಎಲ್ಲಾ ದುಃಖ ದುಮ್ಮಾನಗಳ ಬಗ್ಗೆ ಅರುಹಿದ್ದಾನೆ. ನೀನು ಅಲ್ಲಾಹನ ಸುನ್ನತ್ (ವಿಧಿ ನಿಯಮ) ಗಳಲ್ಲಿ ಯಾವ ಬದಲಾವಣೆ ಕಾಣದಿರು. (ಅಂದರೆ ಯಾರು ಸತ್ಯದೆಡೆ ಹಿಂದಿರುಗುತ್ತಾರೋ ಅಲ್ಲಾಹನು ಅವನ ಮೇಲೆ ದಯೆ ತೋರುತ್ತಾನೆ. ಇದು ಅವನ ಸುನ್ನತ್ ಆಗಿದೆ. ಆಥಮನೊಂದಿಗೆಯೂ ಅವನು ಹೀಗೆ ವರ್ತಿಸಿದ್ದಾನೆ). ಆಶ್ಚರ್ಯಪಡಬೇಡ ಮತ್ತು ದುಃಖಪಡಬೇಡ. ವಿಜಯ ನಿಮ್ಮದೇ ಆಗಿರುತ್ತದೆ. ನೀವು ಸತ್ಯವಿಶ್ವಾಸದ ಮೇಲೆ ಸ್ಥಿರವಾಗಿರಿ. ನನಗೆ ನನ್ನ ಗೌರವ ಮತ್ತು ಪ್ರತಾಪದ ಆಣೆ, ನೀನೇ ವಿಜಯಿಯಾಗುವೆ. ನಾವು ಶತ್ರುಗಳನ್ನು ಭಿನ್ನ ಭಿನ್ನ ಮಾಡುವೆವು. ಅವರ ಎಲ್ಲ ತಂತ್ರಗಳನ್ನು ಮಣ್ಣುಮುಕ್ಕಿಸುವೆವು. ನಾವು ವಾಸ್ತವವನ್ನು ಅವನ ಮೊಣಕಾಲುಗಳಿಂದ ಬೆತ್ತಲೆಗೊಳಿಸಿ ತೋರಿಸುವೆನು. ಅಂದರೆ ವಾಸ್ತವ ಬಿಚ್ಚಿಡುವೆವು ಮತ್ತು ವಿಜಯದ ಸಾಕ್ಷ್ಯಗಳನ್ನು ಬಯಲುಗೊಳಿಸುವೆವು. ಆ ದಿನ ಸತ್ಯವಿಶ್ವಾಸಿಗಳು ಸಂತಸಪಡುವರು.

**ಅಬ್ದುಲ್ಲಾ ಆಥಮನು ಇಸ್ಲಾಮಿನ ಗೌರವ ಸ್ವೀಕರಿಸಿ ಸತ್ಯವನ್ನು ರುಜುಪಡಿಸಿದ್ದನು**

ಸಯ್ಯದ್‌ನಾ ಹಝುರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ಈ ಮಾತು ಅಪ್ಪಟ ಸತ್ಯ ಮತ್ತು ದೃಢವಾಗಿದೆ. ಭವಿಷ್ಯವಾಣಿಯ ಪ್ರಕಾರ ಒಂದು ವೇಳೆ ಅಬ್ದುಲ್ಲನ ಹೃದಯ ಮೊದಲಿನಂತೆಯೇ ಇಸ್ಲಾಮ್ ಧರ್ಮವನ್ನು ಅವಮಾನಗೊಳಿಸುವುದು ಮತ್ತು ಹೀಯಾಳಿಸುವ ದಾರಿಯಲ್ಲಿರುತ್ತಿದ್ದರೆ ಮತ್ತು ಇಸ್ಲಾಮಿನ ಗೌರವವನ್ನು ಸ್ವೀಕರಿಸಿ ಸತ್ಯದೆಡೆ ರುಜು ಮಾಡದಿರುತ್ತಿದ್ದರೆ ಅದೇ ಅವಧಿಯ ಒಳಗೆ ಅವನ ಜೀವನ ಅಂತ್ಯಗೊಳ್ಳುತಿತ್ತು. ಆದರೆ ಅಲ್ಲಾಹನ ದಿವ್ಯವಾಣಿ ನನಗೆ ಅರುಹಿದೆ. ಡೆಪ್ಯೂಟಿ ಅಬ್ದುಲ್ಲ ಆಥಮನು ಇಸ್ಲಾಮಿನ ಗೌರವ ಮತ್ತು ಅದರ ಭಯ ಮನಗಂಡು ಸತ್ಯದಿಂದ ಒಂದಿಷ್ಟು ರುಜುವಾತುಪಡಿಸಿಕೊಂಡಿದ್ದಾನೆ. ಆ ಕಾರಣದಿಂದ ಸಂಪೂರ್ಣವಾಗಿ ಅವನ ಮರಣದ ವಿಷಯವನ್ನು ಮತ್ತು ನರಕಕ್ಕೆ ಹಾಕುವ ವಿಷಯವನ್ನು ತಡೆಹಿಡಿಯಲಾಗಿದೆ. ಅವನು ಹಾವಿಯಾ ನರಕಾಗ್ನಿಯಲ್ಲಿ ಬಿದ್ದಾಗಿದೆ. ಆದರೆ ಆ ಮಹಾ ನರಕಾಗ್ನಿಯಲ್ಲಿ ಬೀಳುವುದರಿಂದ ಕೆಲ ದಿನಗಳಿಗಾಗಿ ಉಳಿದಿದ್ದಾನೆ. ಅದರ ಹೆಸರು ಮರಣ ಎಂದಾಗಿದೆ.

(ಅದೇ ಪುಟ 2)

ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ಅವನು ತನ್ನ ಕೃತ್ಯಗಳಿಂದ ತೋರ್ಪಡಿಸಿದ್ದಾನೆ. ಇಸ್ಲಾಮಿ ಭವಿಷ್ಯವಾಣಿಯ ಪ್ರಭಾವ ಯಾವ ರೀತಿ ಇರುತ್ತದೆ ಎಂದು. ಅವನ ಹೃದಯವನ್ನು ಘಾಸಿಗೊಂಡಂತೆ ಮಾಡಿದನು. ಎಷ್ಟರಮಟ್ಟಿಗೆ ಎಂದರೆ ಅವನು ಅತ್ಯಂತ ಗಾಬರಿಗೊಂಡು ನಗರದ ಎಲ್ಲೆಲ್ಲೋ ಅಲೆದಾಡುತ್ತಾ ಇದ್ದ. ಆ ದೈವಿಕವಾಣಿಯ ಪ್ರಭಾವ ಎಷ್ಟೊಂದು ಆವರಿಸಿತ್ತೆಂದರೆ ಅವನ ರಾತ್ರಿಗಳು ಭಯಂಕರವಾದ ಸ್ವಪ್ನಗಳಿಂದ ಮತ್ತು ಹಗಲು ಅಸಮಾಧಾನಗಳಿಂದ ತುಂಬಿದ್ದವು. ವಿಚಿತ್ರ ರೀತಿಯಲ್ಲಿ ಅವನು ತನ್ನ ಅಸಮಾಧಾನ ಮತ್ತು ಹುಷಾರಿಲ್ಲದ ಅವಸ್ಥೆ ಎಲ್ಲೆಲ್ಲೊ ಆಲಾಪಿಸುತ್ತಾ ಇದ್ದ. ಅಲ್ಲಾಹನು ಒಂದು ಆಶ್ಚರ್ಯಜನಕ ಭಯ ದುಃಖ ಅವನ ಮನಸ್ಸಿನಲ್ಲಿ ಹಾಕಿಬಿಟ್ಟ. ಒಂದು ಎಲೆ ಸಹ ಉದುರಿ ಬಿದ್ದರೂ ಅವನಿಗೆ ಹೆದರಿಕೆ ಉಂಟಾಗುತಿತ್ತು. ಒಂದು ನಾಯಿ ಮುಂದೆ ಬಂದರೂ ಯಮ ಬಂದಂತೆ ಹೆದರುತ್ತಿದ್ದನು. ಒಟ್ಟು ಎಲ್ಲೂ ಸಮಾಧಾನ ದೊರೆಯುತ್ತಿರಲಿಲ್ಲ. ಒಂದು ವಿಚಿತ್ರ ರೀತಿಯ ನಿರ್ಜನ ವಾತಾವರಣದಲ್ಲಿ ಅವನ ದಿನಗಳು ಕಳೆದಂತಾಯಿತು. ಒಟ್ಟಿನಲ್ಲಿ ಭಯ, ಆತಂಕ ಅವನ ಹೃದಯವನ್ನು ಆವರಿಸಿತ್ತು. ಭಯಭೀತ ಭಾವನೆಗಳು ಹಗಲಿರುಳು ಅವನ ಜೊತೆಗಿದ್ದವು. ಅವನ ಈ ಭಾವನೆಗಳು ಇಸ್ಲಾಮಿನ ಗೌರವನ್ನು ಅಲ್ಲಗಳೆಯಲಿಲ್ಲ. ಬದಲು ಸ್ವೀಕರಿಸುವಂತಾಯಿತು. ಅವನು ಭವಿಷ್ಯವಾಣಿಯ ಪ್ರಭಾವ ಬಲ್ಲವನಾಗಿದ್ದನು. ಒಬ್ಬ ಮನುಷ್ಯ ಯಾವರೀತಿ ಒಂದು ಸತ್ಯ ಮತ್ತು ವಾಸ್ತವಿಕ ವಿಪತ್ತಿನಿಂದ ಹೆದರಬೇಕಾಗಿತ್ತೋ ಅದೇ ಮಾದರಿ ಈ ಭವಿಷ್ಯವಾಣಿಯಿಂದ ಅವನು ಹೆದರಿಕೊಂಡಿದ್ದನು. ಅವನ ಮನಸ್ಸು ಈ ಬಾಹ್ಯ ಸುರಕ್ಷೆಯಿಂದ ತೃಪ್ತಿಪಡಲಿಲ್ಲ. ಸತ್ಯದ ಪ್ರಭಾವವು ಅವನನ್ನು ಹುಚ್ಚನಂತೆ ಮಾಡಿತು. ಅಂದ ಹಾಗೆ ಅಲ್ಲಾಹನು ಅವನಿಗೆ ಇಂತಹ ಸ್ಥಿತಿಯಲ್ಲಿ ಮರಣ ನೀಡಲು ಇಚ್ಛಿಸಲಿಲ್ಲ. ಏಕೆಂದರೆ ಇದು ಅವನ ಪುರಾತನ ನಿಯಮ ಹಾಗೂ ಪುರಾತನ ವಿಧಿಗಳಿಗೆ ವಿರುದ್ಧವಾಗಿದೆ. (ಅನ್ವಾರುಲ್ ಇಸ್ಲಾಮ್, ರೂಹಾನಿ ಖಝಾಯಿನ್, ಸಂಪುಟ–9, ಪುಟ–4).

**ರುಜು –ವಿಶ್ಲೇಷಣೆ– ಅದರ ಅರ್ಥ ಇಸ್ಲಾಮ್ ಸ್ವೀಕಾರವಲ್ಲ.**

ಭವಿಷ್ಯವಾಣಿಯಲ್ಲಿ ಇದ್ದ ಪದವು– "ಶರತ್ತೇನೆಂದರೆ ಅವನು ಸತ್ಯದೆಡೆ "ರುಜುಪಡಿಸಿಕೊಳ್ಳಬಾರದು." ಅದರ ಬಗ್ಗೆಯೂ ಆಕ್ಷೇಪ ಎತ್ತಲಾಯಿತು. ಆಥಮನು ಇಸ್ಲಾಮ್ ಸ್ವೀಕರಿಸಿಲ್ಲ. ಅಂದ ಹಾಗೆ ಅವನ ರುಜುಪಡಿಸುವಿಕೆ ಸಾಬೀತಾಗಿಲ್ಲ. ಅದಕ್ಕೆ ಉತ್ತರವಾಗಿ ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ರುಜು ಪದವು ಇಸ್ಲಾಮ್ ಸ್ವೀಕರಿಸುವ ಅಥವಾ ಅದರ ತತ್ಸಮಾನ ಅರ್ಥ ಒಳಗೊಳ್ಳುವುದಿಲ್ಲ. ಒಬ್ಬ ಸಾಧಾರಣ ಮನುಷ್ಯನು ತಿಳಿಯಬಲ್ಲನು. ಈ ಪದ ಒಮ್ಮೊಮ್ಮೆ ಇಸ್ಲಾಮ್ ಸ್ವೀಕರಿಸುವ ರೀತಿಯಲ್ಲೂ ಮತ್ತೊಮ್ಮೆ ತಕ್ಕಮಟ್ಟಿಗೆ ತನ್ನನ್ನು ಸುಧಾರಿಸಿಕೊಳ್ಳುವುದೆಂದು ಹೇಳಬಹುದಾಗಿದೆ. ಅವನು ಸತ್ಯದೆಡೆ ರುಜುಪಡಿಸಿಕೊಂಡಿದ್ದಾನೆ. ಭವಿಷ್ಯವಾಣಿಗಳ ಪುರ್ತಿಕರಣ ಪುರಾತನ ಕಾಲದಿಂದಲೂ ಹೀಗೆ ಬಂದಿದೆ. ಯಾವುದೇ ಒಂದು ಪದ ದ್ವಿಅರ್ಥ ಬರುವಂತಿದ್ದರೆ ಭವಿಷ್ಯವಾಣಿಯ ಪರಿಣಾಮ ಪ್ರಸಕ್ತ ನಾಡವಳಿಕೆಯ ಮೇಲೆ ನಿರ್ಭರವಾಗಿರುತ್ತದೆ. (ಝಿಯಾವುಲ್ ಹಕ್, ರೂಹಾನಿ ಖಝಾಯಿನ್ ಸಂಪುಟ 9 ಪುಟ 286)

ದಿವ್ಯವಾಣಿ ಭವಿಷ್ಯವಾಣಿಯ ಪ್ರಭಾವದಿಂದ ಪ್ರಭಾವಿತರಾಗಿ ಹೆದರಿಕೊಳ್ಳುವುದು ಪವಿತ್ರ ಖುರ್‌ಆನ್ ಮತ್ತು ಬೈಬಲ್ ವಿವರಣೆ ಪ್ರಕಾರ ಪೂರ್ತಿಕರಣವೆಂದೇ ಸಾಬೀತಾಗುತ್ತದೆ. ನಿಜವಾದ ಕಾರಣ ಶಿಕ್ಷೆಯನ್ನು ಮುಂದೂಡಬಹುದು. ಅದಕ್ಕೆ ಖುರ್‌ಆನ್ ಮತ್ತು ಬೈಬಲ್ ಎರಡರ ಸಹಮತವಿದೆ. (ಅನ್ವಾರುಲ್ ಇಸ್ಲಾಮ್ ರೂಹಾನಿ ಖಝಾಯಿನ್ ಸಂಪುಟ 9 ಪುಟ 109).

**ಭವಿಷ್ಯವಾಣಿಯಲ್ಲಿ ಆಥಮನ ಇಸ್ಲಾಮ್ ಸ್ವೀಕಾರದ ಶರತ್ತಿಲ್ಲ.**

ಹಝ್‌ರತ್ ಮಸೀಹ್ ಮೌಊದ್(ಅ) ನುಡಿದರು. ಭವಿಷ್ಯವಾಣಿಯಲ್ಲಿ ಒಳಗೊಂಡ ಶರತ್ತಿನಲ್ಲಿ, ಆಥಮನು ನೇರವಾಗಿ ಇಸ್ಲಾಮ್ ಸ್ವೀಕರಿಸುವನು. ಇಲ್ಲದಿದ್ದರೆ ಮರಣದಿಂದ ಉಳಿಯುವುದಿಲ್ಲ ಎಂದಿಲ್ಲ. ಬದಲು ಭವಿಷ್ಯವಾಣಿಯಲ್ಲಿ ಕೇವಲ ರುಜುಪಡಿಸುವ ಶರತ್ತಿದೆ. ರುಜುವಿನ ಅರ್ಥ ಗೌಪ್ಯವಾಗಿ ಸತ್ಯ ಮನವರಿಕೆಯಾಗುವ ಅರ್ಥ ಬರುತ್ತದೆ. ಹೀಗಿರುವಾಗ ನೇರವಾಗಿ ಇಸ್ಲಾಮ್ ಸ್ವೀಕಾರದ ಅರ್ಥ ಕಲ್ಪಿಸುವುದು ಮೂಢತನವಾಗಿದೆ. (ಝಿಯಾವುಲ್ ಹಖ್ ರೂಹಾನಿ ಖಝಾಯಿನ್ ಸಂಪುಟ 9, ಪುಟ 257)

**ಆಥಮನು 15 ತಿಂಗಳುಗಳ ಅವಧಿಯಲ್ಲಿ ಇಸ್ಲಾಮಿನ ವಿರುದ್ಧ ಮತ್ತು ಕ್ರೈಸ್ತ ಮತದ ಪರವಾಗಿ ಏನೂ ಹೇಳಿಕೆ ನೀಡಿಲ್ಲ ಮತ್ತು ಕ್ರೈಸ್ತಮತದ ಪರವಾಗಿ ಏನೂ ಹೇಳಿಕೆ ನೀಡಿಲ್ಲ.**

ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಈ ಅವಧಿಯಲ್ಲಿ ಅವನು ಇಸ್ಲಾಮಿನ ಕುರಿತು ಯಾವುದೇ ರೀತಿಯ ಅವಹೇಳನಕಾರಿ ಮತ್ತು ಅಪಶಬ್ಧಗಳನ್ನು ಬಳಸಿದ್ದು ಯಾರಾದರೂ ಕೇಳಿದವರುಂಟೆ ಅಥವಾ ಅವನಿಂದ ಅಹಂಕಾರ ಮತ್ತು ಗೊಂದಲಕಾರಿ ಕೃತ್ಯ ಉಂಟಾಯಿತೆ, ಅಥವಾ ಅವನು ಅಸಭ್ಯ ಹಾಗೂ ಅಪಮಾನಜನಕ ಗ್ರಂಥವನ್ನೇನಾದರೂ ಬರೆದನೇ ಮತ್ತು ಅವಹೇಳನಕಾರಿ ಪದಗಳನ್ನು ಬಳಸಲು ತನ್ನ ನಾಲಿಗೆ ಚಾಚಿದನೇ, ಖಂಡಿತವಾಗಿಯೂ ಇಲ್ಲ. ಈ ಅವಧಿಯಲ್ಲಿ ಇಸ್ಲಾಮಿನ ಅವಹೇಳನ ಕುರಿತು ಒಂದು ಸಾಲೂ ಸಹ ಬರೆದು ಪ್ರಕಟಿಸಿಲ್ಲ, ಬದಲು ತನ್ನ ಜೀವಭಯದಲ್ಲಿ ಲುಪ್ತನಾದ ಮತ್ತು ಇಸ್ಲಾಮಿ ಗೌರವವನ್ನು ಹೇಗೆ ಧಾರಣೆ ಮಾಡಿಕೊಂಡ ಎಂದರೆ, ಇತರ ಕ್ರೈಸ್ತರಾಗಲಿ ಅಥವ ನಮ್ಮ ಬಳಿಯಾಗಲೀ ಯಾವ ಉದಾಹರಣೆಯೂ ಇಲ್ಲ. ಅವನು ಭಯಗೊಂಡನು. ಆದಕಾರಣ ಅಲ್ಲಾಹನು ತನ್ನ ವಿಧಿಯಂತೆ ಅವನೊಡನೆ ವರ್ತಿಸಿದನು. ಭವಿಷ್ಯವಾಣಿಯಲ್ಲಿ ಅದೇ ಶರತ್ತು ಒಳಗೊಂಡಿತ್ತು. (ಅನ್ವಾರುಲ್ ಇಸ್ಲಾಮ್, ರೂಹಾನಿ ಖಝಾಯಿನ್, ಸಂಪುಟ–9, ಪುಟ–16)

**ಅಪಾರ ಭಯ ಮತ್ತು ಗಾಬರಿಯ ಸಮಯ ಮನುಷ್ಯನಿಗೆ ಭಯಾನಕ ದೃಶ್ಯಗಳು ಕಂಡುಬರುತ್ತವೆ.**

ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಹೇಳಿದರು.

ನೆನಪಿರಲಿ, ಮನುಷ್ಯನ ಸಹಜಗುಣವೇನೆಂದರೆ, ಯಾರ ಮೇಲಾದರೂ ಅಪಾರ ಭಯ ಮತ್ತು ಗಾಬರಿ ಹೃದಯದಲ್ಲಿ ಹೊಕ್ಕಿದರೆ ಮತ್ತು ಘೋರವಾದ ಅಸಮಾಧಾನ ವಿಕಲತೆ ಉಂಟಾಗಿದ್ದರೆ. ಆ ಭಯದ ಭಯಂಕರವಾದ ರೂಪಗಳು ವಿವಿಧ ರೂಪಗಳಲ್ಲಿ ಕಾಣಲಾರಂಭಿಸುತ್ತವೆ. ಅಂತಿಮವಾಗಿ ಅವನು ಭಯಗೊಂಡು ಓಡಿ ಹೋಗಲು ವಿವಶನಾಗುತ್ತಾನೆ.

ತೌರಾತ್ ಇಸ್ತಸ್‌ನಾದಲ್ಲಿ ಅದನ್ನೇ ಸಂಕೇತಿಸಲಾಗಿದೆ. ಬನಿ ಈಸ್ರಾಯಿಲ್ ಸಮುದಾಯಕ್ಕೆ ತಿಳಿಸಲಾಯಿತು. ನೀವು ಅವಿಧೇಯತೆ ತೋರಿದರೆ ಮತ್ತು ಅಲ್ಲಾಹನ ಕಾನೂನಿನ ಹದ್ದುಗಳನ್ನು ಮೀರಿದರೆ ನಿನ್ನ ಜೀವನ ನಿನ್ನ ದೃಷ್ಟಿಯಲ್ಲಿ ಆಶ್ರಯವಿಲ್ಲದಂತಾಗುವುದು. ಅಲ್ಲಾಹನು ನಿನಗೆ ಒಂದು ಆತಂಕ ಮತ್ತು ನಿನ್ನ ಜೀವಕ್ಕೆ ದುಃಖಿತನಾಗಿಸುವನು.

ನಿನಗೆ ಕಾಲೂರದಂತಹ ಭಯ ಉಂಟಾಗುವುದು. ಮತ್ತು ನೀನು ಅಲ್ಲಲ್ಲಿ ಅಲೆದಾಡುವೆ. ಅಂದ ಹಾಗೆ ಹಲವು ಸಲ ಬನೀ ಈಸ್ರಾಯಿಲರ ಮುಂದೆ ಇಂತಹ ಘಟನೆಗಳು ಘಟಿಸಿದವು. ಅದರಿಂದ ಭಯಗೊಂಡು ಅವರು ನಿರಾಶರಾದರು. ಮತ್ತು ಹುಚ್ಚರಂತೆ ನಗರ, ಬೀದಿ, ಬೀದಿ ಅಲೆದಾಡುತ್ತಿದ್ದರು. ಈಗ ನಿಶ್ಚಯವಾಗಿ ತಿಳಿದುಕೊಳ್ಳಿರಿ. ಆಥಮನಿಗೆ ಈ ಎಚ್ಚರಿಕೆಯ ಭವಿಷ್ಯವಾಣಿ ಆದ ನಂತರ ಅವನ ಸ್ಥಿತಿ ಹಾಗೆಯೇ ಆಯಿತು. (ಝಿಯಾವುಲ್ ಹಖ್, ರೂಹಾನಿ ಖಝಾಯಿನ್ ಸಂಪುಟ 9 ಪುಟ 260)

ಮುಂದಿನ ಸಂಚಿಕೆಯಲ್ಲಿ ನಾವು ಇನ್‌ಶಾಅಲ್ಲಾಹ್ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆಗಳ ಪ್ರಕಾಶದಲ್ಲಿ ಆಥಮನು ಸತ್ಯದೆಡೆ ರುಜುಪಡಿಸಿಕೊಂಡ ಕೆಲ ಸಾಕ್ಷ್ಯಗಳನ್ನು ಪ್ರಸ್ತುತಪಡಿಸುವೆವು. ಹಾಗೆಯೇ ಆಥಮನಿಗೆ ಭಯ ಆತಂಕಗಳ ನಡುವೆ ಯಾವ ಯಾವ ಭಯಭೀತ ದೃಶ್ಯಗಳು ಕಾಣುವಂತಾಯಿತು ಮತ್ತು ಆ ಹದಿನೈದು ತಿಂಗಳುಗಳು ಎಷ್ಟೊಂದು ಘೋರವಾದ ಆತಂಕ ಮತ್ತು ಭಯದಿಂದ ಕಳೆದೆನು ಎಂಬ ವಿವರ ನೀಡುವೆವು. **(ಮನ್ಸೂರ್ ಅಹ್ಮದ್ ಮಸ್ರೂರ್)**

***********

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಪುತ್ರ ಮಸೀಹರು ತನ್ನ ಸಂಗಡಿಗರಾದ ಯಹೂದ್ಯರಿಂದ ತುಂಬಾ ಕಷ್ಟಗಳಿಗೆ ಎದುರಾದರು. ಅಲ್ಲಾಹನ ಸತ್ಯಸಂಧರು ತಮ್ಮ ಕಾಲಗಳಲ್ಲಿ ವಿರೋಧಿಗಳಿಂದ ಹೀಗೆ ಕಷ್ಟಗಳಿಗೆ ಗುರಿಯಾಗುತ್ತಾರೆ. ಅಂತೆಯೇ ಈ ಯಹೂದ್ಯರು ಮಸೀಹರನ್ನು ಹತ್ಯೆ ಮಾಡುವ ಸಂಚು ಹಾಕುತ್ತಿದ್ದರು. ಅವರನ್ನು ಶಿಲುಬೆಗೆ ಹಾಕ ಬಯಸುತ್ತಿದ್ದರು. ಬಾಹ್ಯ ನೋಟಕ್ಕೆ ಅವರುಗಳು ಈ ಸಂಚಿನಲ್ಲಿ ಯಶಸ್ವಿಯಾದರು. ಏಕೆಂದರೆ ಹಝ್ರತ್ ಮಸೀಹಬ್ನು ಮರಿಯಮರಿಗೆ ಶಿಲುಬೇರಿಸುವ ಆಜ್ಞೆ ಮಾಡಲಾಗಿತ್ತು. ಆದರೆ ಅಲ್ಲಾಹನು ಸಜ್ಜನರನ್ನು, ತನ್ನ ಪ್ರವಾದಿಗಳನ್ನು ಎಂದೂ ವ್ಯರ್ಥಗೊಳಿಸುವುದಿಲ್ಲ. ಅವರಿಗೆ ಶಾಪಗ್ರಸ್ತ ಶಿಲುಬೆಯ ಮೃತ್ಯುವಿನಿಂದ ರಕ್ಷಿಸಲು ಅವರು ಶಿಲುಬೆಯಿಂದ ಜೀವಂತವಾಗಿ ಇಳಿಸಿಕೊಳ್ಳುವಂತಹ ಸನ್ನಿವೇಶಗಳನ್ನು ಹುಟ್ಟು ಹಾಕಿದನು. ಈ ಬಗ್ಗೆ ಹಲವು ಸಾಕ್ಷ್ಯಗಳಿವೆ. ಅವು ಇಂಜೀಲಿನಿಂದಲೇ ದೊರೆಯುತ್ತವೆ. ಆದರೆ ಈ ಸಮಯ ಅದನ್ನು ವಿವರಿಸುವುದು ನನ್ನ ಉದ್ದೇಶವಲ್ಲ. ಈ ಘಟನೆಗಳನ್ನು ಅಂದರೆ ಶಿಲುಬೆಗೆ ಸಂಬಂಧಿಸಿದ ಘಟನೆಗಳನ್ನು ಇಂಜೀಲ್‌ನ ಅಧ್ಯಯನ ಮಾಡಿದರೆ ಸ್ಪಷ್ಟವಾಗುವುದು. ಹಝ್ರತ್ ಮಸೀಹ್ ಇಬ್ನು ಮರಿಯಮ್ ಶಿಲುಬೆಯಿಂದ ಜೀವಂತವಾಗಿ ಇಳಿಸಲ್ಪಟ್ಟರು. ಮತ್ತೆ ಈ ದೇಶದಲ್ಲಿ ತಮ್ಮ ಶತ್ರುಗಳು, ಜೀವ ಹಿಂಡುವ ಶತ್ರುಗಳ ಬಹಳಷ್ಟಿದ್ದಾರೆ ಎಂದೆಂರಾಚಿಸಿಕೊಂಡರು, ಮುಂಚೆ ಹೇಳಿದಂತೆ-ಪ್ರವಾದಿಂಯು ಅಪಮಾನಿಸಲ್ಪಡುವುದಿಲ್ಲ. ಆದರೆ ತಮ್ಮದೇ ದೇಶದಲ್ಲಿ (ಜನ್ಮಸ್ಥಾನದಲ್ಲಿ) ಅದ್ದರಿಂದ ಅವರ ಹಿಜ್ರತ್(ವಲಸೆ) ಹೋದ ಸುಳಿವು ದೊರೆಯುತ್ತದೆ. ಅವರು ನಿಶ್ಚಯಿಸಿಕೊಂಡರು. ಈ ದೇಶವನ್ನು ತ್ಯಜಿಸಬೇಕು. ತಮ್ಮ ಕರ್ತವ್ಯಗಳನ್ನು ಪೂರ್ಣಗೊಳಿಸಲು ಅವರು ಬನೀ ಈಸ್ರಾಯಿಲರ ಕಳೆದು ಹೋದ ಕುರಿಗಳ ಪತ್ತೆಗಾಗಿ ಹೊರಟರು. ನಸೀಬೈನ್ ಮಾರ್ಗವಾಗಿ ಅಫ್ಘಾನಿಸ್ತಾನ್ ಮಾರ್ಗವಾಗಿ ಕಾಶ್ಮೀರಕ್ಕೆ ಬಂದರು. ಅಲ್ಲಿ ಬನೀ ಈಸ್ರಾಯಿಲರಿದ್ದರು. ಅಲ್ಲಿ ಅವರಿಗೆ ಪ್ರಚಾರ ಮಾಡುತ್ತಿದ್ದರು. ಅವರ ಸುಧಾರಣೆಗಾಗಿ ಕಾರ್ಯ ನಿರ್ವಹಿಸಿದರು. ಅಂತಿಮವಾಗಿ ಅಲ್ಲೆ ನಿಧನಗೊಂಡರು. ಈ ರಹಸ್ಯ ನನ್ನೊಂದಿಗೆ ಬಿಚ್ಚಿಡಲಾಗಿದೆ. **(ಮಲ್ಫೂಝಾತ್ ಸಂಪುಟ-1, ಪುಟ-303-304, ಮುದ್ರಣ 2018, ಖಾದಿಯಾನ್)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

- ಮಾನ್ಯ ವಜಾಹತ್ ಅಹ್ಮದ್ ವಡಾಇಚ್ ಸಾಹಿಬ್. ಮೆಡಿಕಲ್
- ಮಾನ್ಯ ಕಲೀಮ್ ಅಹ್ಮದ್ ಸಯ್ಯದ್ ಸಅಹಿಬ್. ಮೆಡಿಕಲ್
- ಮಾನ್ಯ ವಲೀದ್ ಅಹ್ಮದ್ ಮಿಯಾಂ ಸಾಹಿಬ್. Master of Science in Physics
- ಮಾನ್ಯ ಅಬ್ದುಲ್ ಬಸೀರ್ ಸಾಹಿಬ್.
- ಮಾನ್ಯ ಅತಾವುಲ್ ಹಖ್ ಸಾಹಿಬ್.
- ಮಾನ್ಯ ಹಮೀದ್ ಮಹ್ಮೂದ್ ಸಾಹಿಬ್.
- ಮಾನ್ಯ ಬಾಸಿಲ್ ಅಹ್ಮದ್ ಮಿರ್ಝಾ ಸಾಹಿಬ್.
- ಮಾನ್ಯ ಉಸ್ಮಾನ್ ಮುಹಮ್ಮದ್ ಖಲೀಲ್ ಸಾಹಿಬ್.
- ಮಾನ್ಯ ಅತಾವುಲ್ ಮುನ್‌ಇಮ್ ಚೌಧರಿ ಸಾಹಿಬ್.
- ಮಾನ್ಯ ಹುಮಾಯೂನ್ ಅಹ್ಮದ್ ಖಾನ್ ಸಾಹಿಬ್.
- ಮಾನ್ಯ ಅಬ್ದುಲ್ ವಹೀದ್ ವಡಾಇಚ್ ಸಾಹಿಬ್.
- ಮಾನ್ಯ ಮಲಕ್ ಫಹೀಮ್ ಖೋಕರ್ ಸಾಹಿಬ್.
- ಮಾನ್ಯ ತೈಯಬ್ ಅಹ್ಮದ್ ಖಾನ್ ಸಾಹಿಬ್.
- ಮಾನ್ಯ ಇಖ್ಲಾಖ್ ಮಲಕ್ ಸಾಹಿಬ್.
- ಮಾನ್ಯ ಮಲಕ್ ನೀಮ್ ಖೋಕರ್ ಸಾಹಿಬ್.
- ಮಾನ್ಯ ಅಹ್ಮದ್ ನದೀಮ್ ಖುರೈಶಿ ಸಾಹಿಬ್.
- ಮಾನ್ಯ ಅನೀಸ್ ಅಹ್ಮದ್ ನದೀಮ್ ಸಾಹಿಬ್.
- ಮಾನ್ಯ ಫರಾಝ್ ಅಹ್ಮದ್ ಕಾಮ್ರಾನ್ ಸಾಹಿಬ್.
- ಮಾನ್ಯ ವಖಾಸ್ ಅಲಿ ಸಾಹಿಬ್.
- ಮಾನ್ಯ ಉಸ್ಮಾನ್ ಮುಬಾರಕ್ ಸಾಹಿಬ್.
- ಮಾನ್ಯ ಮಸ್‌ಊದ್ ಅಹ್ಮದ್ ರಶೀದ್ ಸಹಿಬ್.
- ಮಾನ್ಯ ಮುನೀಬ್ ಅಹ್ಮದ್ ಸಾಹಿಬ್.
- ಮಾನ್ಯ ರಾಫೀ ತಾಹಿರ್ ಸಾಹಿಬ್.
- ಮಾನ್ಯ ರಶೀದ್ ಅಹ್ಮದ್ ಬಾಜ್ವಾಹ್ ಸಾಹಿಬ್.
- ಮಾನ್ಯ ಉಸಾಮ ಬಾಜ್ವಹ್ ಸಾಹಿಬ್.
- ಮಾನ್ಯ ನುಮಾನ್ ನಾಸಿರ್ ಸಾಹಿಬ್.
- ಮಾನ್ಯ ಉಬೈದ್ ಅಹ್ಮದ್ ಖಾಝೀ ಸಾಹಿಬ್.
- ಮಾನ್ಯ ಆಫಾನ್ ಅಹ್ಮದ್ ಕಾಹ್ಲೂನ್ ಸಾಹಿಬ್.
- ಮಾನ್ಯ ಉಮರ್ ಫಾರೂಖ್ ನಾಝ್ ಸಾಹಿಬ್.
- ಮಾನ್ಯ ಬಸೀರ್ ಅಹ್ಮದ್ ಶೇಖ್ ಸಾಹಿಬ್.
- ಮಾನ್ಯ ಬಾಬರ್ ಮುಹಿಉದ್ದೀನ್ ಬಟ್ ಸಾಹಿಬ್.
- ಮಾನ್ಯ ಸಯ್ಯದ್ ಹಮ್ಮಾದ್ ಝುಮಾಮ್ ಅಬ್ಬಾಸಿ ಸಾಹಿಬ್.
- ಮಾನ್ಯ ಯಾಸಿರ್ ಮಹ್ಮೂದ್ ಸಾಹಿಬ್.
- ಮಾನ್ಯ ತಾಹಿರ್ ರಶೀದ್ ಬಟ್ ಸಾಹಿಬ್.
- ಮಾನ್ಯ ಆಮಿರ್ ಸೀದ್ ಖಾನ್ ಸಾಹಿಬ್.
- ಮಾನ್ಯ ನೈಯರ್ ಅಹ್ಮದ್ ಶೇಖ್ ಸಾಹಿಬ್.
- ಮಾನ್ಯ ಝ್ಯೀನ್ ಮುಬಶ್ಶಿರ್ ಸಾಹಿಬ್.
- ಮಾನ್ಯ ಕಾಮ್ರಾನ್ ಅಹ್ಮದ್ ಖಾನ್ ಸಾಹಿಬ್.
- ಮಾನ್ಯ ಮಬ್ರೂರ್ ಅಹ್ಮದ್ ಸಾಹಿಬ್.
- ಮಾನ್ಯ ತಲ್‌ಹ ನಸೀರ್ ಸಾಹಿಬ್.
- ಮಾನ್ಯ ಸಮರ್ ಏಜಾಝ್ ಸಾಹಿಬ್.

ಅನಂತರ ಕಾರ್ಯಕ್ರಮದನ್ವಯ ಓರ್ವ ಜರ್ಮನ್ ಅತಿಥಿ HARALD KINDERMANN ರವರು ತಮ್ಮ ಪರಿಚಯ ಭಾಷಣವನ್ನು ಪ್ರಸ್ತುತಪಡಿಸಿದರು. ಅವರು ವಿಭಿನ್ನ ದೇಶಗಳ ರಾಯಭಾರಿಯಾಗಿದ್ದರು. ಇತ್ತೀಚೆಗೆ ಅವರು ಜರ್ಮನ್ ಪಾಲಿಸಿ ಥಿಂಕ್ ಟ್ಯಾಂಕ್‌ನ ಮುಖ್ಯ ಕಾರ್ಯದರ್ಶಿಯಾಗಿರುವರು ಅವರ ಸಂಬೋಧನೆ ನಂತರ ಮುಕರ‍್ರಮ್ ಗುಲ್‌ಫಾಮ್ ಮಲಿಕ್ ಸಾಹಿಬ್ ಹೆಂಬರ್ಗ್ ರಾಜ್ಯ ಪಾರ್ಲಿಮೆಂಟ್ ಸದಸ್ಯರು ತಮ್ಮ ಪರಿಚಯ ಭಾಷಣವನ್ನು ನೀಡಿದರು. ಅವರು ಅಲ್ಲಾಹನ ಅನುಗ್ರಹದಿಂದ ಓರ್ವ ನಿಷ್ಠಾವಂತ ಅಹ್ಮದಿ ಯುವಕರಾಗಿದ್ದಾರೆ. ಮತ್ತು ಪ್ರಥಮ ಬಾರಿಗೆ ಹೆಂಬರ್ಗ್ ರಾಜ್ಯದ ಪಾರ್ಲಿಮೆಂಟ್ ಸದಸ್ಯರಾಗಿ ಆಯ್ಕೆಗೊಂಡಿದ್ದಾರೆ. **(ಮುಂದುವರಿಯುವುದು)**

## ತಹ್ರೀಕ್ ಜದೀದ್ ಸಂಪೂರ್ಣ ಚಂದಾ ಪಾವತಿಸಲು ಗಮನವಹಿಸಿ

ಜಮಾಅತ್ ಬಾಂಧವರಿಗೆ ತಿಳಿದಿರುವಂತೆ ತಹ್ರೀಕ್ ಜದೀದ್‌ನ ಹೊಸ ವರ್ಷ ಪ್ರಾರಂಭಗೊಂಡು ಆರು ತಿಂಗಳಿಗಿಂತ ಹೆಚ್ಚು ಅವಧಿ ಕಳೆದುಹೋಗಿದೆ. ವಕಾಲತ್ ಮಾಲ್‌ನ ಮಾಹಿತಿ ಪ್ರಕಾರ ಇನ್ನು ಬಹಳಷ್ಟು ವಾಗ್ದಾನ ಮಾಡಿರುವವರು ಚಂದ ನೀಡಬೇಕಾಗಿದೆ. ಭಾರತದ ಎಲ್ಲ ಜಿಲ್ಲಾ ಅಮೀರುಗಳು, ಸ್ಥಳೀಯ ಅಮಿರರು, ಅಧ್ಯಕ್ಷರುಗಳು, ತಹ್ರೀಕ್ ಜದೀದ್ ಕಾರ್ಯದರ್ಶಿಗಳೊಂದಿಗೆ ವಿನಂತಿಸಿ ಕೊಳ್ಳುವುದೇನೆಂದರೆ ಅವರು ಸ್ಥಳೀಯ ಮುಬಲ್ಲಿಗೀನ್ ಅಥವಾ ಮುಅಲ್ಲಿಮೀನ್ ಅವರ ಸಹಯೋಗದೊಂದಿಗೆ ತಹ್ರೀಕ್ ಜದೀದ್ ಚಂದ ಪಾವತಿಯ ಕುರಿತು "ತಹ್ರೀಕ್ ಜದಿದ್ ಹಫ್ತಮಾಲ್" ಆಚರಿಸಬೇಕು. ಏಕೆಂದರೆ ಸಯ್ಯದ್‌ನಾ ಹುಝೂರೆ ಅನ್ವರ್ (ಅಬಿಅ) ರವರು ನಿಗದಿಪಡಿಸಿದ ಗುರಿಯ ಪ್ರಕಾರ ಅಥವಾ ಅದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಗುರಿ ಸಾಧಿಸುವ ಭಾಗ್ಯ ನಮ್ಮದಾಗಲಿ. ಆಮೀನ್!

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ನುಡಿದರು. "ತಹ್ರೀಕ್ ಜದೀದ್ ನನ್ನ ಕರೆಯಾಗಿದೆ ಎಂದು ಭಾವಿಸಬೇಡಿರಿ. ಬದಲು ಅದರ ಒಂದೊಂದು ಪದ ನಾನು ಪವಿತ್ರ ಖುರ್‌ಆನ್‌ನಿಂದ ಸಾಬೀತು ಪಡಿಸುವೆನು. ಮತ್ತು ಅದರ ಒಂದೊಂದು ಆಜ್ಞೆಯು ಸಹ ರಸೂಲೆ ಕರೀಂ(ಸ) ರವರ ನುಡಿಗಳಿಂದ ತೋರಿಸಬಲ್ಲೆನು. ಆದರೆ ಯೋಚಿಸಲು ಮಿದುಳು ಮತ್ತು ವಿಶ್ವಾಸ ಹೊಂದಿದ ಹೃದಯದ ಅಗತ್ಯವಿದೆ. ಆದುದರಿಂದ ಅದನ್ನು ನಾನು ಹೇಳುತ್ತಿದ್ದೇನೆ ಎಂದೂ ಭಾವಿಸಬೇಡಿರಿ, ನನ್ನ ಕಡೆಯಿಂದ ಎಂದೂ ಭಾವಿಸಬೇಡಿರಿ. ಬದಲು ಯಾರ ಕೈಯಲ್ಲಿ ನಿಮ್ಮ ಜೀವವಿದೆಯೇ ಅದು ಅವನ ಮಾತಾಗಿದೆ. ನಾನು ತೀರಿಹೋದರೂ ಅವನು ಇತರರಿಂದಲೂ ಅದೇ ಹೇಳಿಸುವನು, ಅವರು ತೀರಿಹೋದರೆ ಅವರ ನಂತರ ಬೇರೆಯವರಿಂದಲೂ.... ಅಂತೂ ನೀವು ಅದನ್ನು ಪಾಲಿಸುವವರೆಗೆ ಅವನು ಬಿಡಲಾರನು. (ಖುತ್‌ಬ ಜುಮುಅ 13 ಡಿಸೆಂಬರ್ 1935, ಅಲ್‌ಫಝ್ಲ್ 21 ಡಿಸೆಂಬರ್ 1935)

ಅಲ್ಲಾಹನು ಎಲ್ಲಾ ತಹ್ರೀಕ್ ಜದೀದ್ ಚಂದಾದಾರರ ಸಂಪತ್ತುಗಳಲ್ಲಿ ಮತ್ತು ಆತ್ಮಗಳಲ್ಲಿ ಅಸಾಮಾನ್ಯ ಅನುಗ್ರಹ ದಯಪಾಲಿಸಲಿ. ಆಮೀನ್.

**(ವಕೀಲುಲ್ ಮಾಲ್ ತಹ್ರೀಕ್ ಜದೀದ್ ಖಾದಿಯಾನ್)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 24 June 2021, Issue No. 25

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 24ರ ವರದಿಯ ಉಳಿದ ಭಾಗ)**

**7 ಜೂನ್ 2015**

ಹುಝೂರ್ ಮುಂಜಾನೆ ನಾಲ್ಕೂವರೆ ಗಂಟೆಗೆ ಜಲ್ಸಸ್ಥಳದಲ್ಲಿ ಆಗಮಿಸಿ ಫಜ್ರ್ ನಮಾಝ್ ನಿರ್ವಹಿಸಿ ಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿನಿಲಯಕ್ಕೆ ತೆರಳಿದರು.

ಮುಂಜಾನೆ ಹುಝೂರ್ ಕಚೇರಿ ಅಂಚೆಗಳನ್ನು ಪರಿಶೀಲಿಸಿದರು ಮತ್ತು ವಿವಿಧ ರೀತಿಯ ಕಚೇರಿ ಕಾರ್ಯಗಳಲ್ಲಿ ನಿರ್ವಹಿಸಲು ತೊಡಗಿದ್ದರು.

ಕಾರ್ಯಕ್ರಮದನ್ವಯ ಮೂರುವರೆ ಗಂಟೆಗೆ ಹುಝೂರ್(ಅಬಿಅ) ತಮ್ಮ ಕಛೇರಿಗೆ ಆಗಮಿಸಿದರು.

ಇಸ್ಲಾಮಿಕ್ ಸ್ಟಡೀಸ್ ಪ್ರೋಫೆಸರ್ MATHAS ROHE ಸಾಹಿಬ್ ಮತ್ತು ಒಬ್ಬ ಡಿಪ್ಲೊಮೇನ್ HARALD KINDERMANN ಅವರು ಥಿಂಕ್ ಟ್ಯಾಂಕಿನ ಸದಸ್ಯರಾಗಿದ್ದರು. ಹುಝೂರರನ್ನು ಭೇಟಿಯಾಗಲು ಬಂದಿದ್ದರು.

ಭೇಟಿಯ ಪ್ರಾರಂಭದಲ್ಲಿ ಪ್ರೋಫೆಸರರು ತಾವು ಬರೆದ ಗ್ರಂಥ ಪ್ರಸ್ತುತಪಡಿಸಿದರು.

HARALD ಸಾಹಿಬ್ ಲೋಕದ ಪ್ರಸಕ್ತ ಪರಿಸ್ಥಿತಿಗಳನ್ನು ವಿವರಿಸುತ್ತ ಹೇಳಿದರು. ಇದೀಗ ಲೋಕದಲ್ಲಿ ನಡೆಯುತ್ತಿರುವ ಗೊಂದಲಗಳು ಹಿಂದಿನ ಇಪ್ಪತ್ತು ವರ್ಷಗಳ ಇತಿಹಾಸದಲ್ಲಿಯೇ ಸರ್ವಾಧಿಕವಾಗಿವೆ. ಈ ಪರಿಸ್ಥಿತಿಗಳನ್ನು ಎದುರಿಸಲು ಜನರ ಒಗ್ಗೂಡುವಿಕೆ ಐಕ್ಯ ಅವಶ್ಯಕವಾಗಿದೆ. ಅವು ಶಾಂತಿಯನ್ನು ಪ್ರೇರೇಪಿಸುವಂತಿರಬೇಕು. ಮತ್ತು ಉಗ್ರವಾದದ ವಿರುದ್ಧ ಆಗಿರಬೇಕು. ಹುಝೂರ್ ಕೇಳಿದ ಮಾತಿಗೆ ಪ್ರತಿಕ್ರಿಯಿಸುತ್ತ ಪಾಶ್ಚಿಮಾತ್ಯ ವಿದೇಶಾಂಗ ನೀತಿಯು ಅಂಗವಾಗಿ ಹೇಳಿದರು. ಪಶ್ಚಿಮವು ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದರಲ್ಲಿ ಬಹಳ ತಪ್ಪುಗಳನ್ನು ಎಸಗಿದೆ. ಉದಾಹರಣೆಗೆ ಸೀರಿಯಾ, ಇರಾಕ್ ಮತ್ತು ಲೀಬಿಯಾದ ಯುದ್ಧಗಳ ನಿರ್ಣಯ.

ಅವರು ಹೇಳಿದರು. ಪಶ್ಚಿಮ ವಿದೇಶಾಂಗ ನೀತಿಯುನ್ನು ಮರುಪರಿಶೀಲಿಸುವ ಅಗತ್ಯವಿದೆ ಮತ್ತು ಸರಕಾರಗಳಿಗೆ ತಮ್ಮ ಪ್ರಜೆಗಳನ್ನು ಮನವರಿಕೆ ಮಾಡಬೇಕಾಗಿದೆ. ಇತರರಿಗೆ ಸಹಾಯ ನೀಡುವುದು ತಮ್ಮ ರಕ್ಷಣೆಗೋಸ್ಕರ ಅನಿವಾರ್ಯವಾಗಿದೆ.

ಹುಝೂರ್ ಹೇಳಿದರು. ಲೀಬಿಯಾದ ಪರಿಸ್ಥಿತಿ ತುಂಬ ಹದಗೆಟ್ಟಿದೆ. ಇಂದಿನ ಪರಿಸ್ಥಿತಿಗಳಲ್ಲಿ ತಕ್ಷಣ ಯಾವ ಪರಿಹಾರ ಸಾಧ್ಯವಿಲ್ಲ. ಪರಿಸ್ಥಿತಿಗಳು ಸುಧಾರಿಸಲು ದೀರ್ಘ ಅವಧಿ ಬೇಕಾಗುವುದು ಈಗ ದಾಯಿಶ್ ಲೀಬಿಯಾದಲ್ಲೂ ಪ್ರವೇಶಿಸಿದೆ ಎಂದು ತಿಳಿದು ಬಂದಿದೆ. ಅದರಿಂದ ಯೂರೋಪಿಗೆ ತುಂಬ ಅಪಾಯವಿದೆ. ಏಕೆಂದರೆ ಇಟಲಿ, ಲಿಬಿಯಾದಿಂದ ತುಂಬ ದೂರವೇನೂ ಇಲ್ಲ.

ಹುಝೂರ್ ಹೇಳಿದರು. ಉತ್ತರ ಆಫ್ರಿಕನ್ ದೇಶಗಳು ಯೂರೋಪಿಗೆ ತುಂಬ ಹತ್ತಿರವಾಗಿದೆ. ಆದುದರಿಂದ ಪಶ್ಚಿಮ ದೇಶಗಳು ಮಿರಾಕಶ್‌ಗೆ ಸಹಾಯ ನೀಡುವ ಅಗತ್ಯವಿದೆ. ಅದರಿಂದ ಅವರು ಉಗ್ರವಾದದ ಬಲೆಯಿಂದ ಉಳಿಯಬಹುದು.

ಹುಝೂರ್ ಇಸ್ಲಾಮಿಯಾತ್‌ನ ಪ್ರೋಫೆಸರ್‌ರಿಗೆ ಕೇಳಿದರು. ಜರ್ಮನ್ ಜನರು ಇಸ್ಲಾಮಿ ಕಾನೂನುಗಳ ಬಗ್ಗೆ ಆಸಕ್ತಿ ವಹಿಸಿವೆಯೇ, ಆಗ ಪ್ರೋಫೆಸರ್ ಸಾಹಿಬರು ಹೇಳಿದರು. ಆಸಕ್ತಿಯಿದೆ ಆದರೆ ಅವರಿಗೆ ಇದು ಮನವರಿಕೆ ಮಾಡಿಕೊಡಬೇಕಾಗಿದೆ. ಶರೀಅ ಕಾನೂನುಗಳು DRACONIAN ಕಾನೂನುಗಳೇನೂ ಅಲ್ಲ. ಬದಲು ಸೂಕ್ತವಾದುದು ಮತ್ತು ಜಾಣ್ಮೆಭರಿತವಾಗಿವೆ. ಅಜ್ಞಾನತೆ ದೂರ ಮಾಡುವ ಅವಶ್ಯಕತೆ ಇದೆ.

ಹುಝೂರ್ ಹೇಳಿದರು. ಇಸ್ಲಾಮ್ ಧರ್ಮದ ಹೆಸರು ಕೆಡಿಸಲು ಮಾಧ್ಯಮ ಬಹು ದೊಡ್ಡ ಪಾತ್ರ ವಹಿಸಿದೆ. ಹುಝೂರ್ ಹೇಳಿದರು. ಮುಸಲ್ಮಾನರು ಎಲ್ಲಿಯೇ ಇರಲಿ ಸ್ವಾತಂತ್ರ್ಯ ಮತ್ತು ಸುರಕ್ಷಿತವಾಗಿದ್ದಲ್ಲಿ ಅವರಿಗೆ ದೇಶೀಯ ಕಾನೂನುಗಳನ್ನು ಪಾಲಿಸುವ ಅಗತ್ಯವಿದೆ.

HARALD ಸಾಹಿಬ್ ಡಿಲ್ಲೊಮೆಟ್ ರಷ್ಯಾ ಮತ್ತು ಯುಕ್ರೇನ್‌ಗಳ ಪರಿಸ್ಥಿತಿ ಅಂಗವಾಗಿ ಹೇಳಿದರು. ಪ್ರಸಕ್ತ ಪರಿಸ್ಥಿತಿಗಳಿಂದಾಗಿ ರಕ್ಷಣಾ ವ್ಯವಸ್ಥೆ ಹದಗೆಟ್ಟು ಹೋಗಿವೆ. ರಷ್ಯಾ ಯುಕ್ರೇನಿನಿಂದ crimea ಕ್ಷೇತ್ರ ಪಡೆಯುತ್ತಿರುವುದು U.N.O ಕಾನೂನುಗಳ ಉಲ್ಲಂಘನೆಯಾಗಿದೆ.

ಹುಝೂರ್ ಕೇಳಿದ ಮಾತಿಗೆ ಪ್ರತಿಕ್ರಿಯಿಸುತ್ತಾ ಮಧ್ಯಪ್ರಾಚ್ಯದಲ್ಲಿ ಶಾಂತಿ ಅಂಗವಾಗಿ ಡಿಪ್ಲೋಮೆಟ್ ಹೇಳಿದರು. ಅವರು ಶಾಂತಿಯ ಭರವಸೆ ಮೇಲಿಲ್ಲ. ಅಲ್ಲಿ ಎಷ್ಟೊಂದು ಸಲಹೆಗಾರರಿದ್ದಾರೆಂದರೆ ಒಗ್ಗಟ್ಟಿನ ಏಕಮೇವ ತೀರ್ಪು ಕಠಿಣವಾಗಿದೆ. ಪ್ರಸಕ್ತ ಉಪಾಯಗಳು ಮತ್ತು ಸರಕಾರ ತೀರ ವಿಫಲವಾಗಿವೆ ಮತ್ತು ಶಾಂತಿಯ ಭರವಸೆ ಅಂತ್ಯಗೊಳ್ಳುತ್ತಿವೆ.

ಈ ಭೇಟಿಯು ನಾಲ್ಕೂ ಗಂಟೆಯವರೆಗೆ ನಡೆಯಿತು. ಕೊನೆಯಲ್ಲಿ ಆ ಇಬ್ಬರೂ ಅತಿಥಿಗಳು ಹುಝೂರರ ಜೊತೆಯಲ್ಲಿ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

ಇಂದು ಅಹ್ಮದಿಯಾ ಜಮಾಅತ್ ಜರ್ಮನಿಯ ಜಲ್ಸ ಸಾಲಾನದ ಮೂರನೆಯ ಹಾಗೂ ಅಂತಿಮ ದಿನವಾಗಿತ್ತು. ಕಾರ್ಯಕ್ರಮದನ್ವಯ ನಾಲ್ಕು ಗಂಟೆಗೆ ಹುಝೂರ್ ಪುರುಷರ ಜಲ್ಸಸ್ಥಳಕ್ಕೆ ಆಗಮಿಸಿ ಝುಹರ್ ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು.

**ಜಾಗತಿಕ ಬೈಅತ್**

ಅನಂತರ ಕಾರ್ಯಕ್ರಮದನ್ವಯ ಬೈಅತ್ ಸಮಾವೇಶ ಏರ್ಪಟ್ಟಿತು. ಇದೊಂದು ಜಾಗತಿಕ ಬೈಅತ್ ಆಗಿತ್ತು. MTA International ಮೂಲಕ ಲೋಕದ್ಯಾದ್ಯಂತ ನೇರ ಪ್ರಸಾರ ಮಾಡಲಾಯಿತು. ಹೀಗೆ ಲೋಕದ ಎಲ್ಲ ದೇಶಗಳಲ್ಲಿ ವಾಸಿಸುವ ಅಹ್ಮದಿಯರು, ಈ ಸಂಪರ್ಕ ಸಾಧನೆಯ ಮೂಲಕ ತಮ್ಮ ಪ್ರೀತಿಯ ಇಮಾಮರ ಬೈಅತ್ ದೃಶ್ಯ ಪಡೆಯುವ ಭಾಗ್ಯ ಲಭಿಸಿತು.

ಇಂದು ಹುಝೂರರ ಶುಭಹಸ್ತದಲ್ಲಿ ಜರ್ಮನಿ, ಅಲ್ಬಾನಿಯಾ, ಸೀರಿಯಾ, ಪ್ಯಾಲಸ್ತೀನ್, ನೈಜಿರಿಯಾ, ಇಟಲಿ, ರಷ್ಯಾ, ಸೂಡಾನ್ ಮತ್ತು ತ್ಯುನಿಸ್‌ನಿಂದ ಸಂಬಂಧಿಸಿದ 43 ಜನರು ಬೈಅತ್ ಮಾಡುವ ಭಾಗ್ಯ ಪಡೆದರು. ಕೊನೆಯಲ್ಲಿ ಹುಝೂರ್ ದುಆ ಮಾಡಿಸಿದರು.

ಬೈಅತ್ ಸಮಾವೇಶ ನಂತರ ಹುಝೂರ್ ಜಲ್ಸದ ಸಮಾರೋಪ ಸಮಾರಂಭಕ್ಕಾಗಿ ವೇದಿಕೆಯ ಮೇಲೆ ಆಗಮಿಸುತ್ತಿದ್ದಂತೆಯೇ ಜಮಾಅತ್ ಬಾಂಧವರು ಉತ್ಸಾಹದಿಂದ ಘೋಷವಾಕ್ಯಗಳನ್ನು ಕೂಗಿದರು. ಸಮಾರೋಪ ಸಮಾರಂಭದ ಪ್ರಾರಂಭ ಪವಿತ್ರ ಖುರ್‌ಆನ್‌ನ ಪಠಣದಿಂದಾಯಿತು. ಅದನ್ನು ಮುಕರ್ರಮ್ ಹಾಫೀಝ್ ಝಾಕಿರ್ ಮುಸ್ಲಿಮ್ ಬಟ್ ಸಾಹಿಬ್ ನೆರವೇರಿಸಿಕೊಟ್ಟರು. ಅದರ ಉರ್ದು ಅನುವಾದ ಮುಕರ್ರಮ್ ಅಬ್ದುಲ್ ಬಾಸಿತ್ ತಾರಿಖ್ ಸಾಹಿಬ್ ಮುಬಲ್ಲಿಗ್ ಜರ್ಮನಿ ಪ್ರಸ್ತುತಪಡಿಸಿದರು. ಅದರ ಜರ್ಮನ್ ಅನುವಾದ ಮುಕರ್ರಮ್ ಸಮೀದ್ ಗೆಸ್ಲರ್ ಸಾಹಿಬ್ ಪ್ರಸ್ತುತಪಡಿಸಿದರು.

ಅನಂತರ ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ರವರ ಕವನ

**ಜೋ ಖಾಕ್ ಮೇ ಮಿಲೆ ಉಸೇ ಮಿಲ್ತಾ ಹೈ ಆಶ್ನಾ**
**ಐ ಆಝ್‌ಮಾನೆ ವಾಲೆ ಯೆ ನುಸ್ಖಾ ಭಿ ಆಝ್ಮಾ**

ಮುಕರ್ರಮ್ ಮುರ್ತುಝಾ ಮನ್ನಾನ್ ಸಾಹೇಬ್ ಮಧುರ ಕಂಠದಿಂದ ಪ್ರಸ್ತುತಪಡಿಸಿದರು. ಅನಂತರ ಹುಝೂರ್ ಶೈಕ್ಷಣಿಕ ಕ್ಷೇತ್ರದಲ್ಲಿ ಉನ್ನತ ದರ್ಜೆ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿಗಳನ್ನು (ಸನದು) ಮತ್ತು ಪದಕಗಳನ್ನು ಅರ್ಪಿಸಿದರು. ಹುಝೂರರ ಶುಭಹಸ್ತದಿಂದ ಈ ಕೆಳಗೆ ನಮೂದಿತ ಭಾಗ್ಯಶಾಲಿ ವಿದ್ಯಾರ್ಥಿಗಳು ಶೈಕ್ಷಣಿಕ ಪ್ರಶಸ್ತಿಗಳನ್ನು ಪಡೆದರು:

* ಮಾನ್ಯ ಡಾ!! ಎಝಾಝ್ ಅಹ್ಮದ್ ಸಾಹಿಬ್. P.hd Medical
* ಮಾನ್ಯ ವೋಕರ್ ಅಹ್ಮದ್ ಖೈಸರ್ ಸಾಹಿಬ್. Second state Examination in Teaching. 88%

*(ಪುಟ ಸಂಖೆ 06 ರಲ್ಲಿ ಮುಂದುವರಿಸಲಾಗಿದೆ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.